

# ಶುಭವಾರ್ತೆ ಕಥಾಪುಸ್ತಕ

## ಪಠ್ಯಕ್ರಮದ ಕೈಪಿಡಿ

ಈ ಕೈಪಿಡಿಯಲ್ಲಿ ಬಳಸಿರುವ ಕಥೆಗಳನ್ನು ಶುಭವಾರ್ತೆ ಕಥಾಪುಸ್ತಕಗಳಿಂದ ತೆಗೆದುಕೊಳ್ಳಲಾಗಿದೆ.

ಶುಭವಾರ್ತೆ ಕಥಾಪುಸ್ತಕ ಉಪಾಧ್ಯಾಯರ ಪಠ್ಯಕ್ರಮದ ಕೈಪಿಡಿ. ಕಾಪಿರೈಟ್ 2017. ಪ್ರಿಂಟೆಂಡ್ ಇನ್ ಇಂಡಿಯಾ.
ಹೆಚ್ಚಿನ ವಿಷಯಗಳಿಗಾಗಿ ಸಂಪರ್ಕಿಸಿ: WBTC India, P.O. Box 8478, Bangalore 560084.
Email: info@wbtcindia.com

ಕಂಠಪಾಠ ಮಾಡುವ ಬೈಬಲ್ ವಚನಗಳನ್ನು World Bible Translation Center India ದ ಪರಿಶುದ್ಧ ಬೈಬಲ್:
EASY-TO-READ VERSION © 2016 ರಿಂದ ಅಪ್ಪಣೆ ಪಡೆದು ಬಳಸಲಾಗಿದೆ.

# ವಿಷಯಾನುಕ್ರಮಣಿಕೆ

ಪೀಠಿಕೆ ........................................ 2-3

ಚಿತ್ರಿಸುವುದು ಮತ್ತು ತಿಳಿಸುವುದು ಹೇಗೆ ........ 4-5

ಪಾಠ 1 ........................................ 6-9

ಪಾಠ 2 ........................................ 10-13

ಪಾಠ 3 ........................................ 14-18

ಪಾಠ 4 ........................................ 19-23

ಪಾಠ 5 ........................................ 24-27

ಪಾಠ 6 ........................................ 28-31

ಪಾಠ 7 ........................................ 32-34

ಪಾಠ 8 ........................................ 35-38

ಪಾಠ 9 ........................................ 39-42

ಪಾಠ 10 ........................................ 43-46

ಪಾಠ 11 ........................................ 47-49

ಪಾಠ 12 ........................................ 50-52

ಪಾಠ 13 ........................................ 53-55

ಪಾಠ 14 ........................................ 56-58

ಪಾಠ 15 ........................................ 59-62

ಪಾಠ 16 ........................................ 63-66

ಪಾಠದ ಯೋಜನೆ ........................................ 67

ಪ್ರಾರ್ಥನೆ ........................................ 68

# ಪೀಠಿಕೆ



**ಎಲ್ಲರೂ ಏನಾದರೂ ಮಾಡುವುದರ ಮೂಲಕ ಚೆನ್ನಾಗಿ ಕಲಿತುಕೊಳ್ಳುವರು.**

*ಉದಾಹರಣೆ:* ಚಿತ್ರಬರಹ, ಬರವಣಿಗೆ, ಹಾಡುಗಾರಿಕೆ, ಅಭಿನಯ, ವೀಕ್ಷಣೆ ಅಥವಾ ಮಾತುಗಾರಿಕೆ.

**ಒಂದು ಉಪದೇಶದ ಅಂಶವನ್ನು ಬಳಸುವುದರ ಮೂಲಕ ಎಲ್ಲರೂ ಚೆನ್ನಾಗಿ ಕಲಿತುಕೊಳ್ಳುವರು.**

ಕಥೆ, ಅಭಿನಯಾತ್ಮಕ ಹಾಡು, ದೃಷ್ಟಾಂತ ಪಾಠ, ಬೈಬಲ್ ವಚನವನ್ನು ಕಂಠಪಾಠ ಮಾಡುವ ಆಟ ಮತ್ತು ನಮ್ಮ ದೈನಂದಿನ ಜೀವಿತಕ್ಕೆ ಅನ್ವಯಿಸುಕೊಳ್ಳುವಿಕೆ, ಇವೆಲ್ಲವೂ ಒಂದೇ ಸಂದೇಶವನ್ನು ಅಥವಾ ಒಂದೇ ಉಪದೇಶದ ಅಂಶವನ್ನು ಹೊಂದಿವೆ. *ಉದಾಹರಣೆ:* ಯೇಸು ಲೋಕಕ್ಕೆ ಬೆಳಕಾಗಿದ್ದಾನೆ ಎಂಬ ಉಪದೇಶದ ಅಂಶವು ಪಾಠದ ಪ್ರತಿಯೊಂದು ಕ್ರಿಯೆಯಲ್ಲೂ ಪ್ರಕಟವಾಗಿದೆ.

**ಎಲ್ಲರೂ ಪುನರಾವರ್ತನೆ, ಪುನರಾವರ್ತನೆ, ಪುನರಾವರ್ತನೆಗಳ ಮೂಲಕ ಚೆನ್ನಾಗಿ ಕಲಿತುಕೊಳ್ಳುವರು.**

*ಉದಾಹರಣೆ: ಶುಭವಾರ್ತೆ ಕಥಾಪುಸ್ತಕ ಸರಣಿಯಿಂದ* ಒಂದು ಕಥೆಯನ್ನು ಹೇಳಿ. ಅದೇ ಕಥೆಯನ್ನು ಮತ್ತೆ ಗುಂಪಿಗೆ ಹೇಳುವಂತೆ ಒಂದು ಮಗುವಿಗೆ ಹೇಳಿ, ಆ ಬಳಿಕ ಮತ್ತೊಂದು ಮಗುವಿಗೆ ಅದೇ ಕಥೆಯನ್ನು ಹೇಳಲು ಹೇಳಿ ಅಥವಾ ಕಥೆಯನ್ನು ಹೇಳಿದ ಮೇಲೆ ಆ ಕಥೆಯನ್ನು ಚಿತ್ರಿಸಲು ಮಕ್ಕಳಿಗೆ ಹೇಳಿ ಅಥವಾ ಕಥೆಯನ್ನು ಹೇಳಿದ ಮೇಲೆ ಆ ಕಥೆಯ ಬಗ್ಗೆ ಮಕ್ಕಳಿಗೆ ಪ್ರಶ್ನೆಗಳನ್ನು ಕೇಳಿ.

**ಶುಭವಾರ್ತೆ ಕಥಾಪುಸ್ತಕ ಪಠ್ಯಕ್ರಮದ ಕೈಪಿಡಿ**

*ಶುಭವಾರ್ತೆ ಕಥಾಪುಸ್ತಕ ಪಠ್ಯಕ್ರಮದಲ್ಲಿ* 16 ಪಾಠಗಳಿವೆ. ಪ್ರತಿಯೊಂದು ಪಾಠವು *ಶುಭವಾರ್ತೆ ಕಥಾಪುಸ್ತಕ ಸರಣಿಯ* ಕಥೆಯನ್ನು, ಅಭಿನಯಾತ್ಮಕ ಹಾಡನ್ನು, ದೃಷ್ಟಾಂತ ಪಾಠವನ್ನು, ಬೈಬಲ್ ವಚನ ಕಂಠಪಾಠ ಮಾಡುವ ಆಟವನ್ನು ಮತ್ತು ನಮ್ಮ ದೈನಂದಿನ ಜೀವಿತಕ್ಕೆ ಅನ್ವಯಿಸುಕೊಳ್ಳುವಿಕೆಯನ್ನು ಹೊಂದಿದೆ. ಪ್ರತಿಯೊಂದು ಪಾಠದಲ್ಲಿ ಮಕ್ಕಳು ಏನಾದರೂ ಮಾಡುತ್ತಿರುತ್ತಾರೆ.

ಪ್ರತಿಯೊಂದು ಪಾಠಕ್ಕೆ ನೀವು ಎಷ್ಟು ಸೇರಿಸುತ್ತೀರೆಂಬುದು ಮಕ್ಕಳೊಡನೆ ನಿಮಗೆಷ್ಟು ಸಮಯವಿದೆ ಎಂಬುದನ್ನು ಮತ್ತು ಅವರ ಅಭಿವೃದ್ಧಿಯ ಮಟ್ಟವನ್ನು ಅವಲಂಭಿಸಿದೆ. ಪ್ರತಿಯೊಂದು ಪಾಠವು ಒಂದು ಉಪದೇಶದ ಅಂಶವನ್ನು ತಿಳಿಸುವ *ಶುಭವಾರ್ತೆ ಕಥಾಪುಸ್ತಕದ* ಕಥೆಯನ್ನು, ಅಭಿನಯಾತ್ಮಕ ಹಾಡನ್ನು ಮತ್ತು ನಮ್ಮ ದೈನಂದಿನ ಜೀವಿತಕ್ಕೆ ಅನ್ವಯಿಸುಕೊಳ್ಳುವಿಕೆಯನ್ನು ಹೊಂದಿರಬೇಕು.

ಪಠ್ಯಕ್ರಮದ ಪ್ರತಿಯೊಂದು ಹಂತ ಮುಗಿದ ಮೇಲೆ, ಆ ಪಾಠಗಳಲ್ಲಿ ಬಳಸಿದ *ಶುಭವಾರ್ತೆ ಕಥಾಪುಸ್ತಕವನ್ನು* ಪ್ರತಿಯೊಂದು ಮಗುವಿಗೆ ಸ್ವಂತಕ್ಕೆ ಕೊಡಬೇಕು. *ಶುಭವಾರ್ತೆ ಕಥಾಪುಸ್ತಕದ ಪಠ್ಯಕ್ರಮ* ಕೊನೆಗೊಂಡಾಗ, ಪ್ರತಿಯೊಂದು ಮಗುವಿಗೆ ಆರು ಪುಸ್ತಕಗಳು ಸಿಕ್ಕಿರಬೇಕು.

ಎಲ್ಲರೂ ಏನಾದರೂ ಮಾಡುವುದರ ಮೂಲಕ ಚೆನ್ನಾಗಿ ಕಲಿತುಕೊಳ್ಳುವರು

ಒಂದು ಉಪದೇಶದ ಅಂಶವನ್ನು ಬಳಸುವುದರ ಮೂಲಕ ಎಲ್ಲರೂ ಚೆನ್ನಾಗಿ ಕಲಿತುಕೊಳ್ಳುವರು

ಎಲ್ಲರೂ ಪುನರಾವರ್ತನೆ ಪುನರಾವರ್ತನೆ ಪುನರಾವರ್ತನೆಗಳ ಮೂಲಕ ಚೆನ್ನಾಗಿ ಕಲಿತುಕೊಳ್ಳುವರು



**ಒಂದು ಅಭಿನಯಾತ್ಮಕ ಹಾಡು:** ಅಭಿನಯಾತ್ಮಕ ಹಾಡಿನ ಪದಗಳು ತುಂಬ, ತುಂಬ, ತುಂಬ ಸರಳವಾಗಿರಬೇಕು ಮತ್ತು ಕಲಿಯಲು ಸುಲಭವಾಗಿರಬೇಕು. ಪದಗಳಿಗೆ ತಕ್ಕಂತೆ ನೀವು ಲಯವನ್ನು ಅಳವಡಿಸಬಹುದು ಅಥವಾ ನಿಮಗೆ ಈಗಾಗಲೇ ಗೊತ್ತಿರುವ ಅಭಿನಯಾತ್ಮಕ ಹಾಡನ್ನು ಬಳಸಬಹುದು ಅಥವಾ ನೀವೇ ಒಂದು ಹಾಡನ್ನು ಬರೆಯಬಹುದು. ನೀವು ಬಳಸಲು ಆರಿಸಿಕೊಳ್ಳುವ ಯಾವುದೇ ಒಂದು ಅಭಿನಯಾತ್ಮಕ ಹಾಡು, ಪಾಠದ ಒಂದು ಉಪದೇಶದ ಅಂಶವನ್ನು ತಿಳಿಸುವಂಥದ್ದಾಗಿರಬೇಕು.

ಮಕ್ಕಳು ಹಾಡನ್ನು ಜ್ಞಾಪಕವಿಟ್ಟುಕೊಳ್ಳಲು ಅಗತ್ಯವಾದಷ್ಟು ಸಲ ಅಭಿನಯಾತ್ಮಕ ಹಾಡನ್ನು ಮತ್ತೆ ಮತ್ತೆ ಹಾಡಿ.

**ಒಂದು ದೃಷ್ಟಾಂತ ಪಾಠ:** ದೇವರ ಕುರಿತಾದ ಉಪದೇಶದ ಒಂದು ಅಂಶವನ್ನು ತಿಳಿಸುವಂಥ ಮತ್ತು ಮಕ್ಕಳು ಪ್ರತಿನಿತ್ಯ ನೋಡುವಂಥ ಯಾವುದಾದರೂ ಒಂದು ವಸ್ತುವನ್ನು ತೋರಿಸುವುದೇ ದೃಷ್ಟಾಂತ ಪಾಠ.

*ಉದಾಹರಣೆ:* ಯೇಸು ಲೋಕಕ್ಕೆ ಬೆಳಕಾಗಿದ್ದಾನೆ ಎಂಬ ಒಂದು ಉಪದೇಶದ ಅಂಶವನ್ನು ತಿಳಿಸುವುದಕ್ಕೆ ಒಂದು ದೃಷ್ಟಾಂತ ಪಾಠ: ದೀಪಗಳನ್ನು ಆರಿಸಿ ಕೋಣೆಯನ್ನು ಕತ್ತಲು ಮಾಡಿ. ಒಂದು ಮೇಣದ ಬತ್ತಿಯನ್ನು ಹಚ್ಚಿ, ಮೇಣದ ಬತ್ತಿಯ ಸಹಜವಾದ ಬೆಳಕು ಸಹಜವಾದ ಕತ್ತಲೆಯನ್ನು ಹೇಗೆ ಹಿಂದಕ್ಕೆ ತಳ್ಳುತ್ತದೆ ಎಂಬುದನ್ನು ತೋರಿಸಿ. ಬಳಿಕ ಯೇಸು ಹೇಗೆ ಮೇಣದ ಬತ್ತಿಯಂತೆ ಬೆಳಕಾಗಿದ್ದಾನೆಂದು ತಿಳಿಸಿ, ಅಲ್ಲದೆ ಎಲ್ಲ ಕೆಟ್ಟ ಆತ್ಮಗಳ ಆತ್ಮಿಕ ಕತ್ತಲೆಯನ್ನು ಮತ್ತು ನಾವು ಈವರೆಗೆ ಹೇಳಿದ ಎಲ್ಲ ಕೆಟ್ಟಮಾತುಗಳನ್ನು, ಮಾಡಿದ ಎಲ್ಲ ಕೆಟ್ಟ ಆಲೋಚನೆಗಳನ್ನು ಹಾಗೂ ಕೆಟ್ಟವುಗಳನ್ನು ಆತನು ಹೇಗೆ ಹಿಂದಕ್ಕೆ ತಳ್ಳುವನೆಂದು ತಿಳಿಸಿ.

**ಒಂದು ಬೈಬಲ್ ವಚನವನ್ನು ಕಂಠಪಾಠ ಮಾಡುವ ಆಟ:** ಇದು ಪಾಠದ ಒಂದು ಉಪದೇಶದ ಅಂಶವನ್ನು ಮತ್ತು ಒಂದು ಬೈಬಲ್ ವಚನವನ್ನು ಜ್ಞಾಪಕದಲ್ಲಿಟ್ಟುಕೊಳ್ಳಲು ಸಹಾಯಕವಾಗಿದೆ. *ಶುಭವಾರ್ತೆ ಕಥಾಪುಸ್ತಕದ* ಪಠ್ಯಕ್ರಮವು ಬೈಬಲ್ ವಚನವನ್ನು ಕಂಠಪಾಠ ಮಾಡುವ ಆಟಗಳನ್ನು ಒಳಗೊಂಡಿದೆ. *ಉದಾಹರಣೆ:* ಬೈಬಲ್ ವಚನವನ್ನು ಅಭಿನಯದ ಮೂಲಕ ತಿಳಿಸಿ (ಮಾತಾಡದೆ ಮತ್ತು ಶಬ್ದ ಮಾಡದೆ) ಮತ್ತು ಮಕ್ಕಳು ಒಬ್ಬೊಬ್ಬರಾಗಿ ಆ ಅಭಿನಯ ಯಾವುದರ ಬಗ್ಗೆ ಎಂದು ಊಹಿಸಲಿ. ಉಳಿದ ಆಟಗಳು ಭಂಡಾರವನ್ನು ಹುಡುಕುವ ಆಟವಾಗಿರಬಹುದು, ಊಹಿಸುವ ಸ್ಪರ್ಧೆ ಆಟವಾಗಿರಬಹುದು ಮತ್ತು ಇನ್ನೂ ಅನೇಕ ಅನೇಕ ರೀತಿಯ ಆಟವಾಗಿರಬಹುದು.


**ಅನ್ವಯಿಸುಕೊಳ್ಳುವಿಕೆ.** ಉಪದೇಶದ ಅಂಶವು ನಮ್ಮ ದೈನಂದಿನ ಜೀವಿತಕ್ಕೆ ಹೇಗೆ ಅನ್ವಯಿಸುತ್ತದೆ? ಎಂಬುದನ್ನು ಕಲಿತುಕೊಳ್ಳುವುದು ಮುಖ್ಯವಾದದ್ದು. *ಉದಾಹರಣೆ:* ಯೇಸು ಲೋಕಕ್ಕೆ ಬೆಳಕಾಗಿದ್ದಾನೆ ಎಂಬ ಉಪದೇಶದ ಅಂಶಕ್ಕೆ ಅನ್ವಯಿಸುಕೊಳ್ಳುವಿಕೆ ಇದಾಗಿದೆ: ನಾವು ಯೇಸುವಿನಲ್ಲಿ ನಂಬಿಕೆ ಇಟ್ಟಾಗ, ಆತನು ಕೆಟ್ಟ ಆತ್ಮಗಳನ್ನು ಹಿಂದಕ್ಕೆ ತಳ್ಳುವ ಆತ್ಮಿಕ ಬೆಳಕಾಗಿರುವನು. ಕೆಟ್ಟ ಆತ್ಮಗಳಿಗೆ ನಮ್ಮ ಮೇಲೆ ಯಾವ ಅಧಿಕಾರವಿಲ್ಲ.


# ಚಿತ್ರಿಸುವುದು ಮತ್ತು ತಿಳಿಸುವುದು ಹೇಗೆ

ನೀವು ಪ್ರತಿಯೊಂದು ಕಥೆಯನ್ನು ಹೇಳಲು ಸಹಾಯಕವಾಗಿ ಈ ಕೈಪಿಡಿಯ ಉದ್ದಕ್ಕೂ ನಿಮಗೆ ಕಾಪಿಮಾಡಲು ಮತ್ತು ಚಿತ್ರಿಸಲು ದೃಷ್ಟಾಂತಗಳಿವೆ. ಬೇಗನೆ ಚಿತ್ರಿಸುವುದನ್ನು ಕಲಿತುಕೊಳ್ಳಲು ನಿಮಗೆ ಸಹಾಯವಾಗುವಂಥ ಉದಾಹರಣೆಯನ್ನು ಹಂತ ಹಂತವಾಗಿ ಈ ಪುಟದಲ್ಲಿ ಕೊಡಲಾಗಿದೆ.


ನೀವು ಚಿತ್ರಿಸುವುದನ್ನು ಮತ್ತು ಕಥೆ ಹೇಳುವುದನ್ನು ಪೂರ್ಣಗೊಳಿಸಿದಾಗ, ಮಕ್ಕಳು ಕಥೆಯಿಂದ ಕಾಪಿಮಾಡಲು ಅಥವಾ ತಮ್ಮದೇ ಆದ ಚಿತ್ರವನ್ನು ಬರೆಯಲು ಶಕ್ತರಾಗಿರುತ್ತಾರೆ.


**ಉಪಕರಣಗಳು:** ಕಪ್ಪುಹಲಗೆ ಮತ್ತು ಚಿತ್ರಿಸಲು ಸೀಮೆಸುಣ್ಣ, ಅಥವಾ ಮರಳು ಮತ್ತು ಚಿತ್ರಿಸಲು ಕಡ್ಡಿ, ಅಥವಾ ಕಾಗದ ಮತ್ತು ಚಿತ್ರಿಸಲು ಪೆನ್ಸಿಲ್. ಮಕ್ಕಳಿಗೆ ಡ್ರಾಯಿಂಗ್ ಪುಸ್ತಕ ಅಥವಾ ಕಾಗದ, ಪೆನ್ಸಿಲ್ ಮತ್ತು ರಬ್ಬರ್ ಅವಶ್ಯಕ.















# ಪಾಠ 1



## ಒಂದು ಉಪದೇಶದ ಅಂಶ

***ಸೃಷ್ಟಿಕರ್ತನಾದ ದೇವರು ಪ್ರತಿಯೊಂದನ್ನು ಸೃಷ್ಟಿಸಿದನು***

## ಬೈಬಲಿನ ಕಥೆ

ಸೃಷ್ಟಿಕರ್ತನಾದ ದೇವರು ಪ್ರತಿಯೊಂದನ್ನು ಸೃಷ್ಟಿಸಿದನು

***ಸೃಷ್ಟಿಕರ್ತನಾದ ದೇವರು ಪ್ರತಿಯೊಂದನ್ನು ಸೃಷ್ಟಿಸಿದನು ಎಂದು ಉಪದೇಶಿಸುವ ಕಥೆಯನ್ನು ಬಳಸಿ***

**ಶುಭವಾರ್ತೆ ಕಥಾಪುಸ್ತಕ ಒಂದು.** ಪುಟಗಳು 2-9. ಸೃಷ್ಟಿಕರ್ತನಾದ ದೇವರು.

**ಉಪಕರಣಗಳು:** ಕಪ್ಪುಹಲಗೆ ಮತ್ತು ಚಿತ್ರಿಸಲು ಸೀಮೆಸುಣ್ಣ, ಅಥವಾ ಮರಳು ಮತ್ತು ಚಿತ್ರಿಸಲು ಕಡ್ಡಿ, ಅಥವಾ ಕಾಗದ ಮತ್ತು ಚಿತ್ರಿಸಲು ಪೆನ್ಸಿಲ್. ಮಕ್ಕಳಿಗೆ ಡ್ರಾಯಿಂಗ್ ಪುಸ್ತಕ ಅಥವಾ ಕಾಗದ, ಪೆನ್ಸಿಲ್ ಮತ್ತು ರಬ್ಬರ್ ಅವಶ್ಯಕ.

ಚಿತ್ರಿಸಿ ಮತ್ತು ಕಥೆ ಹೇಳಿ. ಪ್ರತಿ ಪುಟವನ್ನು ಓದಿದ ಮೇಲೆ ಮಕ್ಕಳಿಗೆ ಒಂದು ಪ್ರಶ್ನೆ ಕೇಳಿ.



1, 2, 3 ಕಥೆಯನ್ನು ಆರಂಭಿಸಿ...

ನಕ್ಷತ್ರಗಳು ನನಗೆ ಕಾಣುತ್ತಿವೆ. ನಕ್ಷತ್ರಗಳು ಹಾಡುತ್ತಿವೆ.

ಪ್ರಶ್ನೆ: **ಸೃಷ್ಟಿಕರ್ತನಾದ ದೇವರು ಏನನ್ನು ಸೃಷ್ಟಿಸಿದನು?**
ಮಕ್ಕಳ ಉತ್ತರ: ನಕ್ಷತ್ರಗಳು.



ಪ್ರಾಣಿಗಳು ನನಗೆ ಕಾಣುತ್ತಿವೆ. ಪ್ರಾಣಿಗಳು ಹಾಡುತ್ತಿವೆ.

ಪ್ರಶ್ನೆ: **ಸೃಷ್ಟಿಕರ್ತನಾದ ದೇವರು ಏನನ್ನು ಸೃಷ್ಟಿಸಿದನು?**
ಮಕ್ಕಳ ಉತ್ತರ: ಪ್ರಾಣಿಗಳು.



ಆತ್ಮಗಳು ನನಗೆ ಕಾಣುತ್ತಿವೆ. ಆತ್ಮಗಳು ಹಾಡುತ್ತಿವೆ.

ಪ್ರಶ್ನೆ: **ಸೃಷ್ಟಿಕರ್ತನಾದ ದೇವರು ಏನನ್ನು ಸೃಷ್ಟಿಸಿದನು?**
ಮಕ್ಕಳ ಉತ್ತರ: ಆತ್ಮಗಳು.



ಮೊದಲನೆ ಪುರುಷ ಮತ್ತು ಸ್ತ್ರೀ ನನಗೆ ಕಾಣುತ್ತಿದ್ದಾರೆ. ಮೊದಲನೆ ಪುರುಷ ಮತ್ತು ಸ್ತ್ರೀ ಹಾಡುತ್ತಿದ್ದಾರೆ.

ಪ್ರಶ್ನೆ: **ಸೃಷ್ಟಿಕರ್ತನಾದ ದೇವರು ಏನನ್ನು ಸೃಷ್ಟಿಸಿದನು?**
ಮಕ್ಕಳ ಉತ್ತರ: ಮೊದಲನೆ ಪುರುಷ ಮತ್ತು ಸ್ತ್ರೀ.

ಸೃಷ್ಟಿಕರ್ತನಾದ ದೇವರು ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ: ‘ನಾನು ನಿಮ್ಮನ್ನು ಪ್ರೀತಿಸುತ್ತೇನೆ!’ ನಾನು ಹಾಡಲಾರಂಭಿಸಿದೆ.

# ಪಾಠ 1



ಪ್ರಶ್ನೆ: **ಸೃಷ್ಟಿಕರ್ತನಾದ ದೇವರು ಏನು ಹೇಳಿದನು?**
ಮಕ್ಕಳ ಉತ್ತರ: ನಾನು ನಿಮ್ಮನ್ನು ಪ್ರೀತಿಸುತ್ತೇನೆ!

ಸೃಷ್ಟಿಕರ್ತನಾದ ದೇವರು ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ: 'ಪರಿಪೂರ್ಣವಾದ ನನ್ನ ಪ್ರಪಂಚವನ್ನು ನೋಡಿಕೊಳ್ಳಿರಿ.'

ಪ್ರಶ್ನೆ: **ಸೃಷ್ಟಿಕರ್ತನಾದ ದೇವರು ಏನು ಹೇಳಿದನು?**
ಮಕ್ಕಳ ಉತ್ತರ: ನನ್ನ ಪರಿಪೂರ್ಣವಾದ ಪ್ರಪಂಚವನ್ನು ನೋಡಿಕೊಳ್ಳಿ.

ಪ್ರತಿಯೊಂದು ಹಾಡುತ್ತಾ...ಹಾಡುತ್ತಾ...ಹಾಡುತ್ತಾ ಇರುವುದು ನನಗೆ ಕೇಳಿಸುತ್ತಿದೆ.

ಪ್ರತಿಯೊಂದು ಸೃಷ್ಟಿಕರ್ತನಾದ ದೇವರಿಗೆ ಹಾಡುತ್ತಿದೆ. ಸೃಷ್ಟಿಕರ್ತನಾದ ದೇವರು ಪ್ರತಿಯೊಂದನ್ನು ಸೃಷ್ಟಿಸಿದನು.

**ಕಥೆಯನ್ನು ಚಿತ್ರಿಸುವಂತೆ ಮಕ್ಕಳಿಗೆ ಹೇಳಿ.**

## ಅಭಿನಯಾತ್ಮಕ ಹಾಡು

***ಸೃಷ್ಟಿಕರ್ತನಾದ ದೇವರು ಪ್ರತಿಯೊಂದನ್ನು ಸೃಷ್ಟಿಸಿದನು ಎಂದು ಉಪದೇಶಿಸುವ ಅಭಿನಯಾತ್ಮಕ ಹಾಡನ್ನು ಬಳಸಿ***

ಸೃಷ್ಟಿಕರ್ತನಾದ ದೇವರು ಪ್ರತಿಯೊಂದನ್ನು ಸೃಷ್ಟಿಸಿದನು

ಮಕ್ಕಳು: 'ದೇವರೇ ಸೃಷ್ಟಿಸಿದಾತನು.' *(ಚಪ್ಪಾಳೆ ತಟ್ಟಿ)*
ಟೀಚರ್: 'ಬೆಳಕನ್ನೂ—ನಮಗೆ ಮಾರ್ಗ ತೋರಲೆಂದು.'

ಮಕ್ಕಳು: 'ದೇವರೇ ಸೃಷ್ಟಿಸಿದಾತನು.' *(ಚಪ್ಪಾಳೆ ತಟ್ಟಿ)*
ಟೀಚರ್: ' ನೀರನ್ನೂ—ನಮಗೆ ಜೀವ ಕೊಡಲೆಂದು, ಕುಡಿಯಲೆಂದು.'

ಮಕ್ಕಳು: 'ದೇವರೇ ಸೃಷ್ಟಿಸಿದಾತನು.' *(ಚಪ್ಪಾಳೆ ತಟ್ಟಿ)*
ಟೀಚರ್: 'ಗಿಡಗಳನ್ನೂ ಹಣ್ಣುಗಳನ್ನೂ ನಮ್ಮಆಹಾರಕ್ಕೆಂದು.'

ಮಕ್ಕಳು: 'ದೇವರೇ ಸೃಷ್ಟಿಸಿದಾತನು.' *(ಚಪ್ಪಾಳೆ ತಟ್ಟಿ)*
ಟೀಚರ್: 'ನಕ್ಷತ್ರಗಳನ್ನೂ—ಕತ್ತಲಾದ ಆಕಾಶದಲ್ಲಿ ಬೆಳಕನ್ನು ಕೊಡಲೆಂದು.'

ಮಕ್ಕಳು: 'ದೇವರೇ ಸೃಷ್ಟಿಸಿದಾತನು.' *(ಚಪ್ಪಾಳೆ ತಟ್ಟಿ)*
ಟೀಚರ್: 'ಮೀನುಗಳನ್ನೂ ಪಕ್ಷಿಗಳನ್ನೂ ನಮ್ಮ ಆಹಾರಕ್ಕೆಂದು.'

ಮಕ್ಕಳು: 'ದೇವರೇ ಸೃಷ್ಟಿಸಿದಾತನು.' *(ಚಪ್ಪಾಳೆ ತಟ್ಟಿ)*
ಟೀಚರ್: 'ಪುರುಷನನ್ನೂ ಸ್ತ್ರೀಯನ್ನೂ ಸ್ನೇಹಿತರಾಗಿರಲೆಂದು.'

ಮಕ್ಕಳು: 'ದೇವರೇ ಸೃಷ್ಟಿಸಿದಾತನು.' *(ಚಪ್ಪಾಳೆ ತಟ್ಟಿ)*
ಟೀಚರ್: 'ಅದು ತುಂಬ ಒಳ್ಳೆಯದೇ, ಹೌದೌದು ತುಂಬ ಒಳ್ಳೆಯದೇ.'

# ಪಾಠ 1

## ದೃಷ್ಟಾಂತ ಪಾಠ

***ಸೃಷ್ಟಿಕರ್ತನಾದ ದೇವರು ಪ್ರತಿಯೊಂದನ್ನು ಸೃಷ್ಟಿಸಿದನು ಎಂದು ಉಪದೇಶಿಸುವ ದೃಷ್ಟಾಂತ ಪಾಠವನ್ನು ಬಳಸಿ***

ಸೃಷ್ಟಿಕರ್ತನಾದ ದೇವರು ಪ್ರತಿಯೊಂದನ್ನು ಸೃಷ್ಟಿಸಿದನು

**ನೋಡಿ ಮತ್ತು ಗ್ರಹಿಸಿಕೊಳ್ಳಿ:** ಮೋಡಗಳನ್ನು ನೋಡಿ, ಪ್ರತಿಯೊಂದು ಮೋಡವು ಒಂದು ಮೋಡವಾಗಿದೆ, ಆದರೆ ಪ್ರತಿಯೊಂದು ಮೋಡವು ಬೇರೆ ರೀತಿಯಾಗಿದೆ. ರಾತ್ರಿಯಲ್ಲಿ ನಕ್ಷತ್ರಗಳನ್ನು ನೋಡಿ, ಪ್ರತಿಯೊಂದು ನಕ್ಷತ್ರವು ಒಂದು ನಕ್ಷತ್ರವಾಗಿದೆ, ಆದರೆ ಪ್ರತಿಯೊಂದು ನಕ್ಷತ್ರವು ಬೇರೆ ರೀತಿಯಾಗಿದೆ. ಹಸುಗಳನ್ನು ನೋಡಿ, ಪ್ರತಿಯೊಂದು ಹಸುವು ಒಂದು ಹಸುವಾಗಿದೆ, ಆದರೆ ಪ್ರತಿಯೊಂದು ಹಸುವು ಬೇರೆ ರೀತಿಯಾಗಿದೆ. ಪುರುಷನನ್ನು ನೋಡಿ, ಪ್ರತಿಯೊಬ್ಬ ಪುರುಷನು ಒಬ್ಬ ಪುರುಷನಾಗಿದ್ದಾನೆ, ಆದರೆ ಪ್ರತಿಯೊಬ್ಬ ಪುರುಷನು ಬೇರೆ ರೀತಿಯಾಗಿದ್ದಾನೆ. ಸ್ತ್ರೀಯನ್ನು ನೋಡಿ, ಪ್ರತಿಯೊಬ್ಬ ಸ್ತ್ರೀಯೂ ಒಬ್ಬ ಸ್ತ್ರೀಯಾಗಿದ್ದಾಳೆ, ಆದರೆ ಪ್ರತಿಯೊಬ್ಬ ಸ್ತ್ರೀಯೂ ಬೇರೆ ರೀತಿಯಾಗಿದ್ದಾಳೆ.

ಸೃಷ್ಟಿಯಾದ ಎಲ್ಲವುಗಳಿಗೆ ಒಬ್ಬನೇ ಸೃಷ್ಟಿಕರ್ತನು. ಸೃಷ್ಟಿಕರ್ತನಾದ ದೇವರು ಪ್ರತಿಯೊಂದನ್ನು ಸೃಷ್ಟಿಸಿದನು. ಸೃಷ್ಟಿಕರ್ತನಾದ ದೇವರು ಎಲ್ಲವನ್ನು ಒಂದೇ ರೀತಿಯಲ್ಲಿ ಸೃಷ್ಟಿಸಿದನು, ಆದರೆ ಪ್ರತಿಯೊಂದೂ ಬೇರೆ ರೀತಿಯಾಗಿದೆ.

## ಬೈಬಲ್ ವಚನವನ್ನು ಕಂಠಪಾಠ ಮಾಡುವ ಆಟ

***ಸೃಷ್ಟಿಕರ್ತನಾದ ದೇವರು ಪ್ರತಿಯೊಂದನ್ನು ಸೃಷ್ಟಿಸಿದನು ಎಂದು ಉಪದೇಶಿಸುವ ಬೈಬಲ್ ವಚನವನ್ನು ಬಳಸಿ***




ಸೃಷ್ಟಿಕರ್ತನಾದ ದೇವರಿಗೆ ಪ್ರಭು ಎಂಬುದು ಮತ್ತೊಂದು ಹೆಸರೆಂದು ವಿವರಿಸಿ.

**ಕೀರ್ತನೆ 146 ವಚನ 1 ರಿಂದ 6** *'ಯೆಹೋವನಿಗೆ ಸ್ತೋತ್ರವಾಗಲಿ! ನನ್ನ* ಮನವೇ, *ಯೆಹೋವನನ್ನು ಸ್ತುತಿಸು! ಯೆಹೋವನು ಆಕಾಶವನ್ನೂ ಭೂಮಿಯನ್ನೂ ಸಮುದ್ರವನ್ನೂ ಅದರಲ್ಲಿರುವ ಪ್ರತಿಯೊಂದನ್ನೂ ಸೃಷ್ಟಿಸಿದನು. ಆತನು ಅವುಗಳನ್ನು ಶಾಶ್ವತವಾಗಿ ಸಂರಕ್ಷಿಸುವನು.'*



**ಭಂಡಾರಕ್ಕಾಗಿ ಹುಡುಕಾಟ:** ಒಂದು ಕಾಗದದ ಚೀಟಿಯ ಮೇಲೆ, 'ಯೆಹೋವನಿಗೆ ಸ್ತೋತ್ರವಾಗಲಿ!' ಎಂದು ಬರೆಯಿರಿ, (ಆ ಕಾಗದದ ಚೀಟಿಯನ್ನು ತಿರುಗಿಸಿ ಆರಾಧಿಸುತ್ತಿರುವ ಒಬ್ಬ ವ್ಯಕ್ತಿಯ ಚಿತ್ರವನ್ನು ಆ ಹಿಂಭಾಗದಲ್ಲಿ ಬರೆಯಿರಿ). ಇನ್ನೊಂದು ಕಾಗದದ ಚೀಟಿಯ ಮೇಲೆ, 'ನನ್ನ ಮನವೇ, ಯೆಹೋವನನ್ನು ಸ್ತುತಿಸು!' ಎಂದು ಬರೆಯಿರಿ, (ಆ ಕಾಗದದ ಚೀಟಿಯನ್ನು ತಿರುಗಿಸಿ ತನ್ನ ಹೃದಯದಿಂದ ಆರಾಧಿಸುತ್ತಿರುವ ಒಬ್ಬ ವ್ಯಕ್ತಿಯ ಚಿತ್ರವನ್ನು ಆ ಹಿಂಭಾಗದಲ್ಲಿ ಬರೆಯಿರಿ). ಇನ್ನೊಂದು ಕಾಗದದ ಚೀಟಿಯ ಮೇಲೆ, 'ಯೆಹೋವನು ಆಕಾಶವನ್ನೂ ಭೂಮಿಯನ್ನೂ' ಎಂದು ಬರೆಯಿರಿ, (ಆ ಕಾಗದದ ಚೀಟಿಯನ್ನು ತಿರುಗಿಸಿ ಪರಲೋಕದ ಮತ್ತು ಭೂಲೋಕದ ಚಿತ್ರಗಳನ್ನು ಆ ಹಿಂಭಾಗದಲ್ಲಿ ಬರೆಯಿರಿ). ಇನ್ನೊಂದು ಕಾಗದದ ಚೀಟಿಯ ಮೇಲೆ, 'ಸಮುದ್ರವನ್ನೂ ಅದರಲ್ಲಿರುವ ಪ್ರತಿಯೊಂದನ್ನೂ ಸೃಷ್ಟಿಸಿದನು' ಎಂದು ಬರೆಯಿರಿ, (ಆ ಕಾಗದದ ಚೀಟಿಯನ್ನು ತಿರುಗಿಸಿ ಸಮುದ್ರದ ಮತ್ತು ಮೀನಿನ ಚಿತ್ರಗಳನ್ನು ಆ ಹಿಂಭಾಗದಲ್ಲಿ ಬರೆಯಿರಿ). ಮಕ್ಕಳು ಬರುವುದಕ್ಕಿಂದ ಮೊದಲೇ ಕಾಗದದ ಪ್ರತಿಯೊಂದು ಚೀಟಿಗಳನ್ನು ಬೇರೆ ಬೇರೆ ಸ್ಥಳಗಳಲ್ಲಿ ಬಚ್ಚಿಡಿ. ಬಚ್ಚಿಟ್ಟಿರುವ ಪ್ರತಿಯೊಂದು ಸ್ಥಳಕ್ಕೆ ಹೋಗಲು ಬೇರೆ ಐದು ಕಾಗದದ ಚೀಟಿಗಳ ಮೇಲೆ ಸರಳವಾದ ನಕ್ಷೆಯನ್ನು ಬರೆಯಿರಿ.



# ಪಾಠ 1

ಮಕ್ಕಳನ್ನು ಐದು ತಂಡಗಳನ್ನಾಗಿ ಮಾಡಿ. (ಐದು ಮಕ್ಕಳಿಗಿಂತ ಕಡಿಮೆ ಇದ್ದರೆ, ಎಲ್ಲ ಮಕ್ಕಳನ್ನು ಒಂದು ತಂಡವನ್ನಾಗಿ ಮಾಡಿ ಪ್ರತಿಯೊಂದು ನಕ್ಷೆಯನ್ನು ಬರೆಯಲು ಹೇಳಿ). ದೊಡ್ಡ ಮಕ್ಕಳು ತಂಡದ ನಾಯಕರಾಗಿದ್ದು ಚಿಕ್ಕಮಕ್ಕಳಿಗೆ ಸಹಾಯಮಾಡಬೇಕು. ಬಚ್ಚಿಟ್ಟಿರುವ ತಮ್ಮ 'ಭಂಡಾರ'ವನ್ನು ಹುಡುಕಲು ಪ್ರತಿಯೊಂದು ತಂಡಕ್ಕೆ ಅವರ ನಕ್ಷೆಯನ್ನು ಕೊಡಿ, ಅಥವಾ ಅಗತ್ಯವೆನಿಸಿದರೆ ಹುಡುಕಲು ಸಹಾಯಕವಾದ ಸೂಚನೆಗಳನ್ನು ಕೊಡಿ.

ಬೈಬಲಿನ ಕಂಠಪಾಠ ಮಾಡುವ ವಚನದ ತಮ್ಮ ಭಾಗವನ್ನು ಮೊದಲು ಹುಡುಕಿದ ತಂಡವು ಗೆಲ್ಲುವುದು.

1, 2, 3 ಆರಂಭಿಸಿ...

ಎಲ್ಲ ಐದು ತಂಡಗಳವರು ಬೈಬಲಿನ ಕಂಠಪಾಠ ಮಾಡುವ ವಚನದ ತಮ್ಮ ಭಾಗವನ್ನು ಕಂಡುಕೊಂಡ ಮೇಲೆ, ಪ್ರತಿಯೊಂದು ತಂಡದ ಮಕ್ಕಳು ತಮ್ಮ ತಂಡಕ್ಕೆ ನಾಯಕನನ್ನು ಆಯ್ಕೆ ಮಾಡಿಕೊಳ್ಳಲಿ. ಬೈಬಲಿನ ಕಂಠಪಾಠ ಮಾಡುವ ವಚನದ ವಾಕ್ಯಗಳನ್ನು ಅಥವಾ ಚಿತ್ರಗಳನ್ನು ಕ್ರಮಬದ್ಧವಾಗಿ ಜೋಡಿಸಲು ಪ್ರತಿಯೊಂದು ತಂಡದ ನಾಯಕರಿಗೆ ಹೇಳಿ. ಪ್ರತಿಯೊಂದು ತಂಡದ ನಾಯಕನು ಇತರ ತಂಡಗಳ ನಾಯಕರೊಂದಿಗೆ ಸಹಕರಿಸಬೇಕು. ಅವರು ಕ್ರಮಬದ್ಧವಾಗಿ ಜೋಡಿಸಿದಾಗ ಸರಿಯಾಗಿದೆಯೆಂದು ಹೇಳಿ.

ಬಳಿಕ ಎಲ್ಲ ಮಕ್ಕಳು ಗಟ್ಟಿಯಾಗಿ ಬೈಬಲಿನ ಕಂಠಪಾಠ ಮಾಡುವ ವಚನವನ್ನು ಹೇಳಲು ಅನುಕೂಲವಾಗುವಂತೆ ತಂಡದ ನಾಯಕರು ಬೈಬಲಿನ ಕಂಠಪಾಠ ಮಾಡುವ ವಚನವನ್ನು ಎತ್ತಿಹಿಡಿದು ತೋರಿಸಲಿ ಅಥವಾ ಬೈಬಲಿನ ಕಂಠಪಾಠ ಮಾಡುವ ವಚನವನ್ನು ಕ್ರಮಬದ್ಧವಾಗಿ ಮತ್ತು ಒಂದೊಂದು ವಾಕ್ಯವಾಗಿ ಹೇಳಲಿ.

ಆದರೆ ಮಕ್ಕಳು ಓದಲು ಇನ್ನೂ ಕಲಿತಿಲ್ಲದಿದ್ದರೆ, ಮಕ್ಕಳು ಆ ವಾಕ್ಯಗಳನ್ನು ಜ್ಞಾಪಕದಲ್ಲಿಟ್ಟುಕೊಳ್ಳಲು ಸಹಾಯಕವಾಗುವಂತೆ ಚಿತ್ರಗಳನ್ನು ತೋರಿಸುತ್ತಾ ಆ ವಾಕ್ಯಗಳನ್ನು ಬಾಯಿಂದ ಹೇಳಿ. ಮಕ್ಕಳು ಬೈಬಲಿನ ಕಂಠಪಾಠ ಮಾಡುವ ವಚನವನ್ನು ಜ್ಞಾಪಕದಲ್ಲಿಟ್ಟುಕೊಳ್ಳುವ ತನಕ ಆ ವಚನವನ್ನು ಮಕ್ಕಳಿಂದ ಮತ್ತೆಮತ್ತೆ ಹೇಳಿಸಿ. ಬೈಬಲಿನ ಕಂಠಪಾಠ ಮಾಡುವ ವಚನವನ್ನು ಮಕ್ಕಳಿಗೆ ಮರೆಮಾಡಿ, ಬೈಬಲಿನ ಕಂಠಪಾಠ ಮಾಡುವ ವಚನವನ್ನು ಹೇಳಲು ಅವರಿಗೆ ತಿಳಿಸಿ.

## ಅನ್ವಯಿಸುಕೊಳ್ಳುವಿಕೆ


ಸೃಷ್ಟಿಕರ್ತನಾದ ದೇವರು ಪ್ರತಿಯೊಂದನ್ನು ಸೃಷ್ಟಿಸಿದನು

***ಸೃಷ್ಟಿಕರ್ತನಾದ ದೇವರು ಪ್ರತಿಯೊಂದನ್ನು ಸೃಷ್ಟಿಸಿದನು ಎಂದು ಉಪದೇಶಿಸುವ ಅನ್ವಯಿಸುಕೊಳ್ಳುವಿಕೆಯನ್ನು ಬಳಸಿ***

ಸೃಷ್ಟಿಕರ್ತನಾದ ದೇವರು ನಿಮ್ಮನ್ನು ಮತ್ತು ನನ್ನನ್ನು ಮೊದಲುಗೊಂಡು ಪ್ರತಿಯೊಂದನ್ನು ಸೃಷ್ಟಿಸಿದನು. ಸೃಷ್ಟಿಕರ್ತನಾದ ದೇವರೊಬ್ಬನು ಮಾತ್ರ ಆರಾಧನೆಗೆ ಯೋಗ್ಯನಾಗಿದ್ದಾನೆ, ಯಾಕಂದರೆ ಸೃಷ್ಟಿಕರ್ತನಾದ ದೇವರು ಪ್ರತಿಯೊಂದನ್ನು ಸೃಷ್ಟಿಸಿದನು.

**ಪ್ರಾರ್ಥನೆ:** ಸೃಷ್ಟಿಕರ್ತನಾದ ದೇವರೇ, ನೀನು ಪ್ರತಿಯೊಂದನ್ನು ಸೃಷ್ಟಿಸಿದೆ. ನಿನ್ನೊಬ್ಬನನ್ನು ಮಾತ್ರ ನಾವು ಆರಾಧಿಸುತ್ತೇವೆ, ಯಾಕಂದರೆ ನೀನು ಪ್ರತಿಯೊಂದನ್ನು ಸೃಷ್ಟಿಸಿದೆ. ನೀನು ಪ್ರತಿಯೊಂದನ್ನು ಸೃಷ್ಟಿಸಿದ್ದಕ್ಕಾಗಿ ನಿನಗೆ ವಂದನೆಗಳು. ನನ್ನನ್ನು ಪ್ರೀತಿಸುವುದಕ್ಕಾಗಿ ನಿನಗೆ ವಂದನೆಗಳು. ಆಮೆನ್.

# ಪಾಠ 2



## ಒಂದು ಉಪದೇಶದ ಅಂಶ

*ಸೃಷ್ಟಿಕರ್ತನಾದ ದೇವರು ಎಲ್ಲ ಶಕ್ತಿಗಳಿಗಿಂತಲೂ ಬಲಶಾಲಿ*

ಸೃಷ್ಟಿಕರ್ತನಾದ ದೇವರು ಎಲ್ಲ ಶಕ್ತಿಗಳಿಗಿಂತಲೂ ಬಲಶಾಲಿ

## ಬೈಬಲಿನ ಕಥೆ

*ಸೃಷ್ಟಿಕರ್ತನಾದ ದೇವರು ಎಲ್ಲ ಶಕ್ತಿಗಳಿಗಿಂತಲೂ ಬಲಶಾಲಿ ಎಂದು ಉಪದೇಶಿಸುವ ಕಥೆಯನ್ನು ಬಳಸಿ*

**ಶುಭವಾರ್ತೆ ಕಥಾಪುಸ್ತಕ ಒಂದು.** ಪುಟಗಳು 10-13. *ಅತ್ಯಂತ ಬಲಶಾಲಿ.*

ಮಕ್ಕಳಿಗೆ 10-13 ಪುಟಗಳಿಂದ ಕಥೆಯನ್ನು ಓದಿ, ನೀವು ಓದುವಾಗ ಮಕ್ಕಳಿಗೆ ಶುಭವಾರ್ತೆ ಕಥಾಪುಸ್ತಕದ ಚಿತ್ರಗಳನ್ನು ತೋರಿಸಿ.

ನೀವು ಕಥೆಯನ್ನು ಓದಿದ ಮೇಲೆ ಮಕ್ಕಳ ಸರದಿ.

**ಮಕ್ಕಳು ಕಥೆಯನ್ನು ಮತ್ತೆ ಹೇಳುವುದು:** ಪ್ರತಿ ಮಗುವಿಗೆ 1 ಮತ್ತು 2, 1 ಮತ್ತು 2, 1 ಮತ್ತು 2, 1 ಮತ್ತು 2, 1 ಮತ್ತು 2, 1 ಮತ್ತು 2... ಸಂಖ್ಯೆಯನ್ನು ಕೊಡಿ. 1 ನ್ನು ಪಡೆದಿರುವ ಮಗು ಸಂಖ್ಯೆ 2 ನ್ನು ಪಡೆದಿರುವ ಮಗುವಿನೊಂದಿಗೆ ಜೊತೆಯಾಗಬೇಕು. ಸಂಖ್ಯೆ 1 ನ್ನು ಪಡೆದಿರುವ ಮಗು ಸಂಖ್ಯೆ 2 ನ್ನು ಪಡೆದಿರುವ ತನ್ನ ಜೊತೆಗಾರನಿಗೆ ಕಥೆಯನ್ನು ಮತ್ತೆ ಹೇಳಬೇಕು. ಅವರು ಹೇಳಿ ಮುಗಿಸಿದ ಮೇಲೆ, ಸಂಖ್ಯೆ 2 ನ್ನು ಪಡೆದಿರುವ ಮಗು ಸಂಖ್ಯೆ 1 ನ್ನು ಪಡೆದಿರುವ ತನ್ನ ಜೊತೆಗಾರನಿಗೆ ಕಥೆಯನ್ನು ಮತ್ತೆ ಹೇಳಬೇಕು. ಪ್ರತಿಯೊಬ್ಬರೂ ಹೇಳಿ ಮುಗಿಸಿದ ಮೇಲೆ, ಎಲ್ಲ ಮಕ್ಕಳು ಒಟ್ಟಾಗಿ ಮತ್ತೆ ಒಂದು ಗುಂಪಾಗಿ ಸೇರಬೇಕು.

### ಪ್ರಶ್ನೋತ್ತರಗಳ ಸ್ಪರ್ಧೆ

ಮಕ್ಕಳಿಗೆ ಕಥೆಯ ಬಗ್ಗೆ ಪ್ರಶ್ನೆಗಳನ್ನು ಕೇಳಿ. ಮಕ್ಕಳ ಎರಡು ತಂಡಗಳಿರಲಿ. ಮೊದಲನೆ ತಂಡಕ್ಕೆ ಒಂದು ಪ್ರಶ್ನೆಯನ್ನು ಕೇಳಿ. ಮೊದಲನೆ ತಂಡದ ಮಕ್ಕಳೆಲ್ಲ ಒಂದು ಉತ್ತರವನ್ನು ನಿರ್ಧರಿಸಬೇಕು. ಅವರು ಸರಿಯಾದ ಉತ್ತರ ಕೊಟ್ಟರೆ, ಅವರ ತಂಡಕ್ಕೆ ಒಂದು ಅಂಕೆಯನ್ನು ಕೊಡಿ. ಮೊದಲನೆ ತಂಡ ಸರಿಯಾದ ಉತ್ತರ ಕೊಡದಿದ್ದರೆ, ಎರಡನೆ ತಂಡಕ್ಕೆ ಅದೇ ಪ್ರಶ್ನೆಯನ್ನು ಕೇಳಿ. ಎರಡನೆ ತಂಡದ ಮಕ್ಕಳೆಲ್ಲ ಒಂದು ಉತ್ತರವನ್ನು ನಿರ್ಧರಿಸಬೇಕು. ಅವರು ಸರಿಯಾದ ಉತ್ತರ ಕೊಟ್ಟರೆ, ಅವರ ತಂಡಕ್ಕೆ ಒಂದು ಅಂಕೆಯನ್ನು ಕೊಡಿ.

ದೊರೆತ ಅಂಕೆಗಳನ್ನು ಕಪ್ಪುಹಲಗೆಯ ಮೇಲೆ ಅಥವಾ ಒಂದು ಕಾಗದದ ಮೇಲೆ ಬರೆದು ಮೊತ್ತ ಹಾಕಿ.

# ಪಾಠ 2



ಬಳಿಕ ಎರಡನೆ ತಂಡಕ್ಕೆ ಕಥೆಯ ಬಗ್ಗೆ ಮತ್ತೊಂದು ಪ್ರಶ್ನೆಯನ್ನು ಕೇಳಿ. ಎರಡನೆ ತಂಡದ ಮಕ್ಕಳೆಲ್ಲ ಒಂದು ಉತ್ತರವನ್ನು ನಿರ್ಧರಿಸಬೇಕು. ಅವರು ಸರಿಯಾದ ಉತ್ತರ ಕೊಟ್ಟರೆ, ಅವರ ತಂಡಕ್ಕೆ ಒಂದು ಅಂಕೆಯನ್ನು ಕೊಡಿ. ಎರಡನೆ ತಂಡ ಸರಿಯಾದ ಉತ್ತರ ಕೊಡದಿದ್ದರೆ, ಮೊದಲನೆ ತಂಡಕ್ಕೆ ಅದೇ ಪ್ರಶ್ನೆಯನ್ನು ಕೇಳಿ. ಮೊದಲನೆ ತಂಡದ ಮಕ್ಕಳೆಲ್ಲ ಒಂದು ಉತ್ತರವನ್ನು ನಿರ್ಧರಿಸಬೇಕು. ಅವರು ಸರಿಯಾದ ಉತ್ತರ ಕೊಟ್ಟರೆ, ಅವರ ತಂಡಕ್ಕೆ ಒಂದು ಅಂಕೆಯನ್ನು ಕೊಡಿ.

ಕಥೆಯ ಬಗ್ಗೆ ಪ್ರಶ್ನೆಗಳನ್ನು ಕೇಳುವಾಗ, ಒಮ್ಮೆ ಮೊದಲನೆ ತಂಡಕ್ಕೆ ಇನ್ನೊಮ್ಮೆ ಎರಡನೆ ತಂಡಕ್ಕೆ ಕೇಳಿ.

ಒಂದು ಮಗುವು ತಪ್ಪು ಉತ್ತರ ಕೊಟ್ಟರೆ, ಆ ಮಗುವನ್ನು ಪ್ರೋತ್ಸಾಹಪಡಿಸಿ, ಒಳ್ಳೆಯ ಪ್ರಯತ್ನ ಆದರೆ ನಾನು ಅಪೇಕ್ಷಿಸುತ್ತಿರುವ ಉತ್ತರ ಅದಲ್ಲ ಎಂದು ಹೇಳಿ. ಒಂದು ಮಗುವು ಸರಿಯಾದ ಉತ್ತರ ಕೊಟ್ಟರೆ, ಸರಿಯಾದ ಉತ್ತರ! ಶಬಾಷ್! ಎಂದು ಹೇಳಿ.

ಉತ್ತರದೊಡನೆ ನೀವು ಕೇಳಬಹುದಾದ ಕೆಲವು ಪ್ರಶ್ನೆಗಳು ಇಲ್ಲಿವೆ.

**‘ನಾನು ಸೃಷ್ಟಿಕರ್ತನಾದ ದೇವರಂತಾಗುವೆ’ ಎಂದು ಯಾರು ಹೇಳುವರು?**
ಕೆಟ್ಟ ಆತ್ಮ.

ಸೃಷ್ಟಿಕರ್ತನಾದ ದೇವರು ಎಲ್ಲ ಶಕ್ತಿಗಳಿಗಿಂತಲೂ ಬಲಶಾಲಿ

**ಈ ನಾಟಕದಿಂದ ನಾವು ಏನು ಕಲಿತುಕೊಳ್ಳುತ್ತೇವೆ?**
ಸೃಷ್ಟಿಕರ್ತನಾದ ದೇವರೇ ಅತ್ಯಂತ ಬಲಿಶಾಲಿ.

**ಆತ್ಮಗಳ ಯುದ್ಧ ಎಲ್ಲಿ ನಡೆಯಿತು?**
ಪರಲೋಕದಲ್ಲಿ.


**ಯಾಕೆ ಸೃಷ್ಟಿಕರ್ತನಾದ ದೇವರೇ ಅತ್ಯಂತ ಬಲಿಶಾಲಿ?**
ಆತನೇ ಅತ್ಯಂತ ಬಲಿಶಾಲಿ ಯಾಕಂದರೆ ಆತನೇ ಪ್ರತಿಯೊಂದನ್ನು ಸೃಷ್ಟಿಸಿದನು.

**ಸೃಷ್ಟಿಕರ್ತನಾದ ದೇವರೇ ಅತ್ಯಂತ ಬಲಿಶಾಲಿ ಎಂದು ತಿಳಿದುಕೊಳ್ಳುವುದರಿಂದ ಇಂದು ನಮಗೆ ಅದು ಹೇಗೆ ಸಹಾಯಕವಾಗುವುದು?**
ಸೃಷ್ಟಿಕರ್ತನಾದ ದೇವರೇ ಅತ್ಯಂತ ಬಲಿಶಾಲಿ ಎಂದು ತಿಳಿದುಕೊಳ್ಳುವುದು ಅಂದರೆ ಕೆಟ್ಟ ಆತ್ಮಕ್ಕೆ ಮತ್ತು ಎಲ್ಲ ಕೆಟ್ಟ ಆತ್ಮಗಳಿಗೆ ನನ್ನ ಮೇಲೆ ಯಾವ ಶಕ್ತಿಯಿಲ್ಲ ಎಂದರ್ಥ. ನಾನು ಸೃಷ್ಟಿಕರ್ತನಾದ ದೇವರೊಬ್ಬನಿಗೆ ಮಾತ್ರ ಹಾಡುತ್ತೇನೆ.

# ಪಾಠ 2

## ಅಭಿನಯಾತ್ಮಕ ಹಾಡು

***ಸೃಷ್ಟಿಕರ್ತನಾದ ದೇವರು ಎಲ್ಲ ಶಕ್ತಿಗಳಿಗಿಂತ ಬಲಶಾಲಿ ಎಂದು ಉಪದೇಶಿಸುವ ಅಭಿನಯಾತ್ಮಕ ಹಾಡನ್ನು ಬಳಸಿ***



ಸೃಷ್ಟಿಕರ್ತನೇ, ನೀನೇ ಅತೀ ಶಕ್ತಿವಂತನು (x3)

ಶಕ್ತಿವಂತನು (x3) ಅತೀ ಶಕ್ತಿವಂತನು!

ಕೆಟ್ಟಾತ್ಮಗಳೇ, ನಿಮಗಿಲ್ಲ ಯಾವ ಶಕ್ತಿಯು (x3)

ನಿಮಗಿಲ್ಲ ಯಾವ ಶಕ್ತಿಯು (x3) ನಿಮಗಿಲ್ಲ ಯಾವ ಶಕ್ತಿಯು!

ಸೃಷ್ಟಿಕರ್ತನೇ, ನೀನೇ ಅತೀ ಶಕ್ತಿವಂತನು (x3)

ಶಕ್ತಿವಂತನು (x3) ಅತೀ ಶಕ್ತಿವಂತನು!

## ದೃಷ್ಟಾಂತ ಪಾಠ

***ಸೃಷ್ಟಿಕರ್ತನಾದ ದೇವರು ಎಲ್ಲ ಶಕ್ತಿಗಳಿಗಿಂತ ಬಲಶಾಲಿ ಎಂದು ಉಪದೇಶಿಸುವ ದೃಷ್ಟಾಂತ ಪಾಠವನ್ನು ಬಳಸಿ***

ಅತ್ಯಂತ ಚಿಕ್ಕ ಹುಡುಗ ಮತ್ತು ಅತ್ಯಂತ ದೊಡ್ಡ ಹುಡುಗ ಅಥವಾ ಅತ್ಯಂತ ಚಿಕ್ಕ ಹುಡುಗಿ ಮತ್ತು ಅತ್ಯಂತ ದೊಡ್ಡ ಹುಡುಗಿ ಇವರ ನಡುವೆ ಕುಸ್ತಿ. ಅತ್ಯಂತ ಬಲಶಾಲಿ ಹೇಗೆ ಗೆಲ್ಲುತ್ತಾನೆ ಎಂಬುದನ್ನು ತೋರಿಸಿ ಮತ್ತು ಸೃಷ್ಟಿಕರ್ತನಾದ ದೇವರು ಅತ್ಯಂತ ಬಲಶಾಲಿಯೆಂದು ಮತ್ತು ಆತನು ಯಾವಾಗಲೂ ಗೆಲ್ಲುತ್ತಾನೆಂದು ವಿವರಿಸಿ. ಕೆಟ್ಟ ಆತ್ಮಗಳು ಸೋಲಿಸಲ್ಪಟ್ಟಿವೆ. ಅವುಗಳಿಗೆ ಹೋರಾಟದಲ್ಲಿ ಅಪಜಯವಾಗಿದೆ.

## ಬೈಬಲ್ ವಚನವನ್ನು ಕಂಠಪಾಠ ಮಾಡುವ ಆಟ

***ಸೃಷ್ಟಿಕರ್ತನಾದ ದೇವರು ಎಲ್ಲ ಶಕ್ತಿಗಳಿಗಿಂತ ಬಲಶಾಲಿ ಎಂದು ಉಪದೇಶಿಸುವ ಬೈಬಲ್ ವಚನವನ್ನು ಬಳಸಿ***

ಸೃಷ್ಟಿಕರ್ತನಾದ ದೇವರು ಎಲ್ಲ ಶಕ್ತಿಗಳಿಗಿಂತಲೂ ಬಲಶಾಲಿ

**ಪ್ರಕಟನೆ 12:8** *'ಆದರೆ ಆ ಘಟಸರ್ಪವೂ ಅದರ ದೂತರೂ ಸೋತುಹೋಗಿ ಪರಲೋಕದಲ್ಲಿ ತಮ್ಮ ಸ್ಥಾನಗಳನ್ನು ಕಳೆದುಕೊಂಡರು.'*

**ರಹಸ್ಯವಾದ ಚಿತ್ರಗಳು:** ಮಕ್ಕಳು ಓದಲು ಇನ್ನೂ ಕಲಿತಿಲ್ಲದಿದ್ದರೆ, ಪದಗಳ ಬದಲು ದೃಷ್ಟಾಂತಗಳನ್ನು ಬಳಸಿ. ಒಂದು ಕಾಗದದ ಚೀಟಿಯ ಮೇಲೆ ಬೈಬಲಿನ ಕಂಠಪಾಠ ಮಾಡುವ ವಚನದ ಒಂದು ಪದವನ್ನು ಬರೆಯಿರಿ. ಇನ್ನೊಂದು ಕಾಗದದ ಚೀಟಿಯ ಮೇಲೆ (ಅದೇ ಅಳತೆಯ) ಬೈಬಲಿನ ಕಂಠಪಾಠ ಮಾಡುವ ವಚನದ ಮತ್ತೊಂದು ಪದವನ್ನು ಬರೆಯಿರಿ. ಇನ್ನೊಂದು ಕಾಗದದ ಚೀಟಿಯ ಮೇಲೆ (ಅದೇ ಅಳತೆಯ) ಬೈಬಲಿನ ಕಂಠಪಾಠ ಮಾಡುವ ವಚನದ ಮತ್ತೊಂದು ಪದವನ್ನು ಬರೆಯಿರಿ, ಹೀಗೆ ಕಾಗದದ ಚೀಟಿಗಳ ಮೇಲೆ ಬೈಬಲಿನ ಕಂಠಪಾಠ ಮಾಡುವ ವಚನದ ಉಳಿದೆಲ್ಲ ಪದಗಳನ್ನು ಬರೆಯಿರಿ. 'ಸೋತುಹೋಗಿ' ಎಂದು ಬರೆದಿರುವ ಕಾಗದದ ಚೀಟಿಯನ್ನು ಬಿಟ್ಟು ಉಳಿದೆಲ್ಲ ಚೀಟಿಗಳ ಮೇಲೆ ಚಿಕ್ಕ ಅಕ್ಷರಗಳಲ್ಲಿ 5 ಅಂಕೆಗಳು ಎಂದು ಬರೆಯಿರಿ. 'ಸೋತುಹೋಗಿ' ಎಂದು ಬರೆದಿರುವ ಚೀಟಿಯ ಮೇಲೆ ಚಿಕ್ಕ ಅಕ್ಷರಗಳಲ್ಲಿ 30 ಅಂಕೆಗಳು ಎಂದು ಬರೆಯಿರಿ.

# ಪಾಠ 2

ಕಾಗದದ ಎಲ್ಲ ಚೀಟಿಗಳನ್ನು ಬೋರಲು ಹಾಕಿ, ಆಗ ಪದಗಳನ್ನು ಮತ್ತು ಅಂಕೆಗಳನ್ನು ನೋಡಲು ಯಾರಿಗೂ ಆಗುವುದಿಲ್ಲ, ಅಲ್ಲದೆ ಪದಗಳನ್ನು ಬರೆದಿರುವ ಆ ಚೀಟಿಗಳನ್ನು ಬೆರಸಿಬಿಡಿ.

ಮಕ್ಕಳನ್ನು ಎರಡು ತಂಡಗಳನ್ನಾಗಿ ಮಾಡಿ. ತಮ್ಮ ತಂಡಕ್ಕಾಗಿ ಕಾಗದದ ಒಂದು ಚೀಟಿಯನ್ನು ಆರಿಸಿಕೊಳ್ಳಲು ಒಂದು ಮಗುವನ್ನು ಆಯ್ಕೆ ಮಾಡಿ. ಆ ಕಾಗದದ ಚೀಟಿಯನ್ನು ತಿರುಗಿಸಿನೋಡಿ ಅದರ ಮೇಲಿರುವ ಅಂಕೆಗಳನ್ನು ಆ ತಂಡಕ್ಕೆ ಕೊಡಿ.

ದೊರೆತ ಅಂಕೆಗಳನ್ನು ಕಪ್ಪುಹಲಗೆಯ ಮೇಲೆ ಅಥವಾ ಒಂದು ಕಾಗದದ ಮೇಲೆ ಬರೆದು ಮೊತ್ತ ಹಾಕಿ.

ತಮ್ಮ ತಂಡಕ್ಕಾಗಿ ಕಾಗದದ ಒಂದು ಚೀಟಿಯನ್ನು ಆರಿಸಿಕೊಳ್ಳಲು ಒಂದು ಮಗುವನ್ನು ಆಯ್ಕೆ ಮಾಡಿ. ಆ ಮಗು ಆರಿಸಿಕೊಂಡ ಕಾಗದದ ಚೀಟಿಯನ್ನು ತಿರುಗಿಸಿನೋಡಿ ಅದರ ಮೇಲಿರುವ ಅಂಕೆಗಳನ್ನು ಆ ತಂಡಕ್ಕೆ ಕೊಡಿ. ಎಲ್ಲ ಪದಗಳು ಗೊತ್ತಾಗುವ ತನಕ ತಂಡಗಳು ಸರದಿ ಪ್ರಕಾರ ಹೀಗೆ ಮಾಡಲಿ.

ಸೃಷ್ಟಿಕರ್ತನಾದ ದೇವರು ಎಲ್ಲ ಶಕ್ತಿಗಳಿಗಿಂತಲೂ ಬಲಶಾಲಿ

ಅವರಲ್ಲಿ ಯಾರು ಕ್ರಮಬದ್ಧವಾಗಿ ಜೋಡಿಸುತ್ತಾರೆಂದು ಕೇಳಿ, ಅವರು (ಮೊದಲು ಕೈ ಎತ್ತಿದವರು) ಯಶ್ವಸಿಯಾದರೆ ಅವರಿಗೆ 10 ಹೆಚ್ಚಿನ ಅಂಕೆಗಳನ್ನು ಕೊಡಿ. ಗೆದ್ದ ತಂಡಕ್ಕೆ ಆ ಅಂಕೆಗಳನ್ನು ಸೇರಿಸಿ.

ಮಕ್ಕಳು ಓದಲು ಇನ್ನೂ ಕಲಿತಿಲ್ಲದಿದ್ದರೆ, ನೀವು ಪದಗಳನ್ನು ಕ್ರಮಬದ್ಧವಾಗಿ ಜೋಡಿಸಿ, ಬೈಬಲಿನ ಕಂಠಪಾಠ ಮಾಡುವ ವಚನವನ್ನು ಮಕ್ಕಳು ಕಂಠಪಾಠ ಮಾಡಲಾಗುವಂತೆ ಹೇಳಿ.

ಗೆದ್ದ ತಂಡಕ್ಕೆ ಪ್ರತಿಯೊಬ್ಬರೂ ಚಪ್ಪಾಳೆ ತಟ್ಟಿ ಸಂತಸ ವ್ಯಕ್ತಪಡಿಸಲಿ. ಬೈಬಲಿನ ಕಂಠಪಾಠ ಮಾಡುವ ವಚನದ ಕಾಗದದ ಚೀಟಿಗಳನ್ನು ಮಕ್ಕಳು ನೋಡಲಾಗುವಂತೆ ಕ್ರಮಬದ್ಧವಾಗಿ ಜೋಡಿಸಿಡಿ.

## ಅನ್ವಯಿಸುಕೊಳ್ಳುವಿಕೆ

***ಸೃಷ್ಟಿಕರ್ತನಾದ ದೇವರು ಎಲ್ಲ ಶಕ್ತಿಗಳಿಗಿಂತ ಬಲಶಾಲಿ ಎಂದು ಉಪದೇಶಿಸುವ ಅನ್ವಯಿಸುಕೊಳ್ಳುವಿಕೆಯನ್ನು ಬಳಸಿ***

ಸೃಷ್ಟಿಕರ್ತನಾದ ದೇವರೇ ಅತ್ಯಂತ ಬಲಿಶಾಲಿ ಎಂದು ತಿಳಿದುಕೊಳ್ಳುವುದು ಅಂದರೆ ಕೆಟ್ಟ ಆತ್ಮಕ್ಕೆ ಮತ್ತು ಎಲ್ಲ ಕೆಟ್ಟ ಆತ್ಮಗಳಿಗೆ ನನ್ನ ಮೇಲೆ ಯಾವ ಶಕ್ತಿಯಿಲ್ಲ ಎಂದರ್ಥ. ನಾನು ಸೃಷ್ಟಿಕರ್ತನಾದ ದೇವರೊಬ್ಬನಿಗೆ ಮಾತ್ರ ಹಾಡುತ್ತೇನೆ.

**ಪ್ರಾರ್ಥನೆ:** ಸೃಷ್ಟಿಕರ್ತನಾದ ದೇವರೇ, ನೀನು ಅತ್ಯಂತ ಬಲಶಾಲಿಯಾಗಿರುವುದಕ್ಕಾಗಿ ನಿನಗೆ ವಂದನೆಗಳು. ನಾನು ನಿನ್ನೊಬ್ಬನಿಗೆ ಮಾತ್ರ ಹಾಡುವುದಕ್ಕಾಗಿ ಮತ್ತು ಕೆಟ್ಟ ಆತ್ಮಕ್ಕೆ ಮತ್ತು ಎಲ್ಲ ಕೆಟ್ಟ ಆತ್ಮಗಳಿಗೆ ನನ್ನ ಮೇಲೆ ಯಾವ ಶಕ್ತಿಯಿಲ್ಲದಿರುವುದಕ್ಕಾಗಿ ನಿನಗೆ ವಂದನೆಗಳು. ನೀನು ಅತ್ಯಂತ ಬಲಶಾಲಿ. ನೀನು ನನಗಾಗಿ ಹೋರಾಟದಲ್ಲಿ ಗೆದ್ದಿರುವೆ. ಆಮೆನ್.

# ಪಾಠ 3



ನಾವು
ಸೃಷ್ಟಿಕರ್ತನಾದ
ದೇವರಿಗೆ
ಅವಿಧೇಯರಾಗಿ
ಕತ್ತಲೆಯಲ್ಲಿ
ತಪ್ಪಿಹೋದರೂ
ಸೃಷ್ಟಿಕರ್ತನಾದ
ದೇವರು ನಮ್ಮನ್ನು
ಪ್ರೀತಿಸುತ್ತಾನೆ









## ಒಂದು ಉಪದೇಶದ ಅಂಶ

***ನಾವು ಸೃಷ್ಟಿಕರ್ತನಾದ ದೇವರಿಗೆ ಅವಿಧೇಯರಾಗಿ ಕತ್ತಲೆಯಲ್ಲಿ ತಪ್ಪಿ ಹೋದರೂ ಸೃಷ್ಟಿಕರ್ತನಾದ ದೇವರು ನಮ್ಮನ್ನು ಪ್ರೀತಿಸುತ್ತಾನೆ***

## ಬೈಬಲಿನ ಕಥೆ

***ನಾವು ಸೃಷ್ಟಿಕರ್ತನಾದ ದೇವರಿಗೆ ಅವಿಧೇಯರಾಗಿ ಕತ್ತಲೆಯಲ್ಲಿ ತಪ್ಪಿ ಹೋದರೂ ಸೃಷ್ಟಿಕರ್ತನಾದ ದೇವರು ನಮ್ಮನ್ನು ಪ್ರೀತಿಸುತ್ತಾನೆ ಎಂದು ಉಪದೇಶಿಸುವ ಕಥೆಯನ್ನು ಬಳಸಿ***

**ಶುಭವಾರ್ತೆ ಕಥಾಪುಸ್ತಕ ಒಂದು.** ಪುಟಗಳು 14-24. *ಕತ್ತಲೆಯಲ್ಲಿ ತಪ್ಪಿಹೋದವರು.*

**ಉಪಕರಣಗಳು:** ಕಪ್ಪುಹಲಗೆ ಮತ್ತು ಚಿತ್ರಿಸಲು ಸೀಮೆಸುಣ್ಣ, ಅಥವಾ ಮರಳು ಮತ್ತು ಚಿತ್ರಿಸಲು ಕಡ್ಡಿ, ಅಥವಾ ಕಾಗದ ಮತ್ತು ಚಿತ್ರಿಸಲು ಪೆನ್ಸಿಲ್. ಮಕ್ಕಳಿಗೆ ಡ್ರಾಯಿಂಗ್ ಪುಸ್ತಕ ಅಥವಾ ಕಾಗದ, ಪೆನ್ಸಿಲ್ ಮತ್ತು ರಬ್ಬರ್ ಅವಶ್ಯಕ. ಚಿತ್ರಿಸಿ ಕಥೆ ಹೇಳಿ.

1, 2, 3 ಕಥೆಯನ್ನು ಆರಂಭಿಸಿ...

ಮೊದಲನೆ ಪುರುಷ ಮತ್ತು ಸ್ತ್ರೀ ನನಗೆ ಕಾಣುತ್ತಿದ್ದಾರೆ.

ಸೃಷ್ಟಿಕರ್ತನಾದ ದೇವರು ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ: 'ಒಳ್ಳೆಯದು ಮತ್ತು ಕೆಟ್ಟದ್ದು ಎಂಬ ಮರದ ಹಣ್ಣನ್ನು ತಿನ್ನಬೇಡಿ.'

ಮೊದಲನೆ ಪುರುಷ ಮತ್ತು ಸ್ತ್ರೀ ಕೇಳಿಸಿಕೊಳ್ಳುತ್ತಿಲ್ಲ...ಕೇಳಿಸಿಕೊಳ್ಳುತ್ತಿಲ್ಲ...ಕೇಳಿಸಿಕೊಳ್ಳುತ್ತಿಲ್ಲ.

ಕೆಟ್ಟ ಆತ್ಮವು ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ: 'ನೀನು ಸೃಷ್ಟಿಕರ್ತನಾದ ದೇವರಂತಾಗುವೆ. ಒಳ್ಳೆಯದು ಮತ್ತು ಕೆಟ್ಟದ್ದು ಎಂಬ ಮರದ ಹಣ್ಣನ್ನು ತಿನ್ನಿರಿ.'

ಮೊದಲನೆ ಸ್ತ್ರೀ ಕೇಳಿಸಿಕೊಳ್ಳುತ್ತಿದ್ದಾಳೆ...ಕೇಳಿಸಿಕೊಳ್ಳುತ್ತಿದ್ದಾಳೆ...ಕೇಳಿಸಿಕೊಳ್ಳುತ್ತಿದ್ದಾಳೆ.

ಮೊದಲನೆ ಸ್ತ್ರೀ ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ: 'ನಾನು ಸೃಷ್ಟಿಕರ್ತನಾದ ದೇವರಂತಾಗುವೆ. ಒಳ್ಳೆಯದು ಮತ್ತು ಕೆಟ್ಟದ್ದು ಎಂಬ ಮರದ ಹಣ್ಣನ್ನು ತಿನ್ನುವೆನು.'


ಮೊದಲನೆ ಸ್ತ್ರೀ ತಿನ್ನುತ್ತಾ...ತಿನ್ನುತ್ತಾ...ತಿನ್ನುತ್ತಾ ಇದ್ದಾಳೆ.

ಮೊದಲನೆ ಪುರುಷ ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ: 'ನಾನು ಸೃಷ್ಟಿಕರ್ತನಾದ ದೇವರಂತಾಗುವೆ. ಒಳ್ಳೆಯದು ಮತ್ತು ಕೆಟ್ಟದ್ದು ಎಂಬ ಮರದ ಹಣ್ಣನ್ನು ತಿನ್ನುವೆನು.'

ಮೊದಲನೆ ಪುರುಷ ತಿನ್ನುತ್ತಾ...ತಿನ್ನುತ್ತಾ...ತಿನ್ನುತ್ತಾ ಇದ್ದಾನೆ.

# ಪಾಠ 3





ಮೊದಲನೆ ಪುರುಷನನ್ನು ಮತ್ತು ಸ್ತ್ರೀಯನ್ನು ನೋಡಲು ಪ್ರಯತ್ನಿಸುತ್ತಿದ್ದೇನೆ. ಮೊದಲನೆ ಪುರುಷ ಮತ್ತು ಸ್ತ್ರೀ ಅವಿತುಕೊಂಡಿದ್ದಾರೆ.

ಸೃಷ್ಟಿಕರ್ತನಾದ ದೇವರು ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ: 'ನಾನು ನಿಮ್ಮನ್ನು ಇನ್ನೂ ಪ್ರೀತಿಸುತ್ತೇನೆ! ನಾನು ನಿಮ್ಮನ್ನು ಕಾಪಾಡುತ್ತೇನೆ. ನೀವು ನನ್ನನ್ನು ಕಂಡುಕೊಳ್ಳುವಿರಿ.'

ಸೃಷ್ಟಿಕರ್ತನಾದ ದೇವರು ಬರುತ್ತಿದ್ದಾನೆ...

## ಪ್ರಶ್ನೋತ್ತರಗಳ ಸ್ಪರ್ಧೆ

ಮಕ್ಕಳಿಗೆ ಕಥೆಯ ಬಗ್ಗೆ ಪ್ರಶ್ನೆಗಳನ್ನು ಕೇಳಿ. ಮಕ್ಕಳ ಎರಡು ತಂಡಗಳಿರಲಿ. ಮೊದಲನೆ ತಂಡಕ್ಕೆ ಒಂದು ಪ್ರಶ್ನೆಯನ್ನು ಕೇಳಿ. ಮೊದಲನೆ ತಂಡದ ಮಕ್ಕಳೆಲ್ಲ ಒಂದು ಉತ್ತರವನ್ನು ನಿರ್ಧರಿಸಬೇಕು. ಅವರು ಸರಿಯಾದ ಉತ್ತರ ಕೊಟ್ಟರೆ, ಅವರ ತಂಡಕ್ಕೆ ಒಂದು ಅಂಕೆಯನ್ನು ಕೊಡಿ. ಮೊದಲನೆ ತಂಡ ಸರಿಯಾದ ಉತ್ತರ ಕೊಡದಿದ್ದರೆ, ಎರಡನೆ ತಂಡಕ್ಕೆ ಅದೇ ಪ್ರಶ್ನೆಯನ್ನು ಕೇಳಿ. ಎರಡನೆ ತಂಡದ ಮಕ್ಕಳೆಲ್ಲ ಒಂದು ಉತ್ತರವನ್ನು ನಿರ್ಧರಿಸಬೇಕು. ಅವರು ಸರಿಯಾದ ಉತ್ತರ ಕೊಟ್ಟರೆ, ಅವರ ತಂಡಕ್ಕೆ ಒಂದು ಅಂಕೆಯನ್ನು ಕೊಡಿ.

ದೊರೆತ ಅಂಕೆಗಳನ್ನು ಕಪ್ಪುಹಲಗೆಯ ಮೇಲೆ ಅಥವಾ ಒಂದು ಕಾಗದದ ಮೇಲೆ ಬರೆದು ಮೊತ್ತ ಹಾಕಿ.

ಬಳಿಕ ಎರಡನೆ ತಂಡಕ್ಕೆ ಕಥೆಯ ಬಗ್ಗೆ ಮತ್ತೊಂದು ಪ್ರಶ್ನೆಯನ್ನು ಕೇಳಿ. ಎರಡನೆ ತಂಡದ ಮಕ್ಕಳೆಲ್ಲ ಒಂದು ಉತ್ತರವನ್ನು ನಿರ್ಧರಿಸಬೇಕು. ಅವರು ಸರಿಯಾದ ಉತ್ತರ ಕೊಟ್ಟರೆ, ಅವರ ತಂಡಕ್ಕೆ ಒಂದು ಅಂಕೆಯನ್ನು ಕೊಡಿ. ಎರಡನೆ ತಂಡ ಸರಿಯಾದ ಉತ್ತರ ಕೊಡದಿದ್ದರೆ, ಮೊದಲನೆ ತಂಡಕ್ಕೆ ಅದೇ ಪ್ರಶ್ನೆಯನ್ನು ಕೇಳಿ. ಮೊದಲನೆ ತಂಡದ ಮಕ್ಕಳೆಲ್ಲ ಒಂದು ಉತ್ತರವನ್ನು ನಿರ್ಧರಿಸಬೇಕು. ಅವರು ಸರಿಯಾದ ಉತ್ತರ ಕೊಟ್ಟರೆ, ಅವರ ತಂಡಕ್ಕೆ ಒಂದು ಅಂಕೆಯನ್ನು ಕೊಡಿ.

ಕಥೆಯ ಬಗ್ಗೆ ಪ್ರಶ್ನೆಗಳನ್ನು ಕೇಳುವಾಗ, ಒಮ್ಮೆ ಮೊದಲನೆ ತಂಡಕ್ಕೆ ಇನ್ನೊಮ್ಮೆ ಎರಡನೆ ತಂಡಕ್ಕೆ ಕೇಳಿ.

ಒಂದು ಮಗುವು ತಪ್ಪು ಉತ್ತರ ಕೊಟ್ಟರೆ, ಆ ಮಗುವನ್ನು ಪ್ರೋತ್ಸಾಹಪಡಿಸಿ, ಒಳ್ಳೆಯ ಪ್ರಯತ್ನ ಆದರೆ ನಾನು ಅಪೇಕ್ಷಿಸುತ್ತಿರುವ ಉತ್ತರ ಅದಲ್ಲ ಎಂದು ಹೇಳಿ. ಒಂದು ಮಗುವು ಸರಿಯಾದ ಉತ್ತರ ಕೊಟ್ಟರೆ, ಸರಿಯಾದ ಉತ್ತರ! ಶಬಾಷ್! ಎಂದು ಹೇಳಿ.

ಮುಂದಿನ ಪುಟದಲ್ಲಿ ಉತ್ತರದೊಡನೆ ನೀವು ಕೇಳಬಹುದಾದ ಕೆಲವು ಪ್ರಶ್ನೆಗಳಿವೆ.

**ನಾವು ಸೃಷ್ಟಿಕರ್ತನಾದ ದೇವರಿಗೆ ಅವಿಧೇಯರಾಗಿ ಕತ್ತಲೆಯಲ್ಲಿ ತಪ್ಪಿಹೋದರೂ ಸೃಷ್ಟಿಕರ್ತನಾದ ದೇವರು ನಮ್ಮನ್ನು ಪ್ರೀತಿಸುತ್ತಾನೆ**

# ಪಾಠ 3

ನಾವು ಸೃಷ್ಟಿಕರ್ತನಾದ ದೇವರಿಗೆ ಅವಿಧೇಯರಾಗಿ ಕತ್ತಲೆಯಲ್ಲಿ ತಪ್ಪಿಹೋದರೂ ಸೃಷ್ಟಿಕರ್ತನಾದ ದೇವರು ನಮ್ಮನ್ನು ಪ್ರೀತಿಸುತ್ತಾನೆ

**‘ನೀನು ಸೃಷ್ಟಿಕರ್ತನಾದ ದೇವರಂತಾಗುವೆ. ಒಳ್ಳೆಯದು ಮತ್ತು ಕೆಟ್ಟದ್ದು ಎಂಬ ಮರದ ಹಣ್ಣನ್ನು ತಿನ್ನು’ ಎಂದು ಯಾರು ಹೇಳಿದರು?**
ಕೆಟ್ಟ ಆತ್ಮ.

**ಮೊದಲನೆ ಪುರುಷ ಮತ್ತು ಸ್ತ್ರೀ ಕಿವಿಗೊಟ್ಟದ್ದು ಸೃಷ್ಟಿಕರ್ತನಾದ ದೇವರಿಗೋ ಕೆಟ್ಟ ಆತ್ಮಕ್ಕೋ?**
ಕೆಟ್ಟ ಆತ್ಮಕ್ಕೆ.

**ಮೊದಲನೆ ಪುರುಷ ಮತ್ತು ಸ್ತ್ರೀ ಸೃಷ್ಟಿಕರ್ತನಾದ ದೇವರಿಗೆ ಮರೆಯಾಗಿ ಅವಿತುಕೊಂಡದ್ದೇಕೆ?**
ಅವರು ಸೃಷ್ಟಿಕರ್ತನಾದ ದೇವರಿಗೆ ಕಿವಿಗೊಡದಿದ್ದರಿಂದ ಮತ್ತು ಸೃಷ್ಟಿಕರ್ತನಾದ ದೇವರು ಮಾಡಬೇಡಿ ಎಂದು ಹೇಳಿದ್ದನ್ನು ಮಾಡಿದ್ದರಿಂದ ಅವರು ನಾಚಿಕೊಂಡಿದ್ದರು.

**ಮೊದಲನೆ ಪುರುಷ ಮತ್ತು ಸ್ತ್ರೀ ಸೃಷ್ಟಿಕರ್ತನಾದ ದೇವರಿಗೆ ಮರೆಯಾಗಿ ಅವಿತುಕೊಂಡಿದ್ದಾಗ ಆತನು ಅವರಿಗೆ ಹೇಳಿದ್ದೇನು?**
‘ನಾನು ನಿಮ್ಮನ್ನು ಇನ್ನೂ ಪ್ರೀತಿಸುತ್ತೇನೆ! ನಾನು ನಿಮ್ಮನ್ನು ಕಾಪಾಡುತ್ತೇನೆ. ನೀವು ನನ್ನನ್ನು ಕಂಡುಕೊಳ್ಳುವಿರಿ.’


**ಸೃಷ್ಟಿಕರ್ತನಾದ ದೇವರ ಬಗ್ಗೆ ಕಥೆಯು ನಮಗೆ ಏನನ್ನು ತೋರಿಸುತ್ತದೆ?**
ಸೃಷ್ಟಿಕರ್ತನಾದ ದೇವರು ನಮ್ಮನ್ನು ಪ್ರೀತಿಸುತ್ತಾನೆ.

**ಸೃಷ್ಟಿಕರ್ತನಾದ ದೇವರು ಅತ್ಯಂತ ಬಲಶಾಲಿ ಎಂದು ತಿಳಿದುಕೊಳ್ಳುವುದು ಇಂದು ನಮಗೆ ಹೇಗೆ ಸಹಾಯಕವಾಗುವುದು?**
ಸೃಷ್ಟಿಕರ್ತನಾದ ದೇವರೇ ಅತ್ಯಂತ ಬಲಿಶಾಲಿ ಎಂದು ತಿಳಿದುಕೊಳ್ಳುವುದು ಅಂದರೆ ಕೆಟ್ಟ ಆತ್ಮಕ್ಕೆ ಮತ್ತು ಎಲ್ಲ ಕೆಟ್ಟ ಆತ್ಮಗಳಿಗೆ ನನ್ನ ಮೇಲೆ ಯಾವ ಶಕ್ತಿಯಿಲ್ಲ ಎಂದರ್ಥ. ನಾನು ಸೃಷ್ಟಿಕರ್ತನಾದ ದೇವರೊಬ್ಬನಿಗೆ ಮಾತ್ರ ಹಾಡುತ್ತೇನೆ.

**ಮಕ್ಕಳಿಗೆ ಕಥೆಯನ್ನು ಚಿತ್ರಿಸಲು ಹೇಳಿ.**

## ಅಭಿನಯಾತ್ಮಕ ಹಾಡು


***ನಾವು ಸೃಷ್ಟಿಕರ್ತನಾದ ದೇವರಿಗೆ ಅವಿಧೇಯರಾಗಿ ಕತ್ತಲೆಯಲ್ಲಿ ತಪ್ಪಿ ಹೋದರೂ ಸೃಷ್ಟಿಕರ್ತನಾದ ದೇವರು ನಮ್ಮನ್ನು ಪ್ರೀತಿಸುತ್ತಾನೆ ಎಂದು ಉಪದೇಶಿಸುವ ಅಭಿನಯಾತ್ಮಕ ಹಾಡನ್ನು ಬಳಸಿ***



x2

ಸೃಷ್ಟಿಕರ್ತನ ಪ್ರೀತಿಯು
ಬಹು ದೊಡ್ಡದು, ಬಹು ದೊಡ್ಡದು, ಬಹು ದೊಡ್ಡದು.

ಸೃಷ್ಟಿಕರ್ತನ ಪ್ರೀತಿಯು
ಬಹು ದೊಡ್ಡದು, ಬಹು ದೊಡ್ಡದು, ಬಹು ದೊಡ್ಡದು.



ಸೃಷ್ಟಿಕರ್ತನ ಪ್ರೀತಿಯು
ಬಹು ದೊಡ್ಡದು, ಬಹು ದೊಡ್ಡದು, ಬಹು ದೊಡ್ಡದು.

ಸೃಷ್ಟಿಕರ್ತನ ಪ್ರೀತಿಯು
ಕಾಪಾಡುವುದು ನನ್ನನ್ನು, ಕಾಪಾಡುವುದು ನನ್ನನ್ನು, ಕಾಪಾಡುವುದು ನನ್ನನ್ನು!

# ಪಾಠ 3

## ದೃಷ್ಟಾಂತ ಪಾಠ

***ನಾವು ಸೃಷ್ಟಿಕರ್ತನಾದ ದೇವರಿಗೆ ಅವಿಧೇಯರಾಗಿ ಕತ್ತಲೆಯಲ್ಲಿ ತಪ್ಪಿ ಹೋದರೂ ಸೃಷ್ಟಿಕರ್ತನಾದ ದೇವರು ನಮ್ಮನ್ನು ಪ್ರೀತಿಸುತ್ತಾನೆ ಎಂದು ಉಪದೇಶಿಸುವ ದೃಷ್ಟಾಂತ ಪಾಠವನ್ನು ಬಳಸಿ***

**ಉಪಕರಣಗಳು:** ಒಂದು ದೊಡ್ಡ ಕಾಗದದ ಹಾಳೆ. ಒಂದು ಜೊತೆ ಕತ್ತರಿ.

ಹೃದಯಾಕಾರದ ಚಿತ್ರವನ್ನು ಬರೆದು, 'ಸೃಷ್ಟಿಕರ್ತನಾದ ದೇವರ ಪ್ರೀತಿ' ಎಂದು ಹೃದಯದೊಳಗೆ ಬರೆಯಿರಿ. ಸೃಷ್ಟಿಕರ್ತನಾದ ದೇವರ ಪ್ರೀತಿ ಎಂದು ಬರೆದಿರುವ ಕಾಗದವನ್ನು ಮಕ್ಕಳಿಗೆ ತೋರಿಸಿ. ಸೃಷ್ಟಿಕರ್ತನಾದ ದೇವರ ಪ್ರೀತಿಯು ನಾವೆಲ್ಲರೂ ಹೊಂದಿಕೊಳ್ಳಬಹುದಾದದ್ದು ಮತ್ತು ಇತರರಿಗೆ ಕೊಡಬಹುದಾದದ್ದು ಸಹ ಆಗಿದೆ ಎಂಬುದನ್ನು ವಿವರಿಸಿ. ಕಾಗದದ ನಾಲ್ಕು ಮೂಲೆಗಳಿಗೂ ಬೆರಳುಮಾಡಿ ತೋರಿಸಿ.

ಟೀಚರ್: ನನ್ನಲ್ಲಿರುವ ಸೃಷ್ಟಿಕರ್ತನ ಪ್ರೀತಿಯ ನಾಲ್ಕು ಮೂಲೆಗಳಲ್ಲಿ ನಾನು ನಿಮಗೆ ಒಂದನ್ನು ಕೊಟ್ಟರೆ, ನನ್ನಲ್ಲಿ ಉಳಿದಿರುವ ಮೂಲೆಗಳೆಷ್ಟು?

ಮಕ್ಕಳ ಉತ್ತರ: 4 – 1 = 3.

ಮೂಲೆಗಳಲ್ಲಿ ಒಂದನ್ನು ಕತ್ತರಿಯಿಂದ ಕತ್ತರಿಸಿ ಮಕ್ಕಳಲ್ಲಿ ಒಬ್ಬರಿಗೆ ಕೊಡಿ.

ಟೀಚರ್: ಈಗ ಎಷ್ಟು ಮೂಲೆಗಳಿವೆ ಎಣಿಸಿ?

ಮಕ್ಕಳ ಉತ್ತರ: 1, 2, 3, 4… 5!

ಟೀಚರ್: ನನ್ನಲ್ಲಿ ನಾಲ್ಕು ಮೂಲೆಗಳಿದ್ದವು, ಒಂದು ಮೂಲೆಯನ್ನು ಕೊಟ್ಟುಬಿಟ್ಟೆನು, ಆದರೆ ಈಗ ನನ್ನಲ್ಲಿ ಐದು ಮೂಲೆಗಳಿವೆ!

ಉಳಿದ ಮೂರು ಮೂಲೆಗಳನ್ನು ಕತ್ತರಿಸಿ.

ಟೀಚರ್: ಈಗ ನನ್ನಲ್ಲಿ ಎಷ್ಟು ಮೂಲೆಗಳಿವೆ ಎಣಿಸಿ?


ಮಕ್ಕಳ ಉತ್ತರ: 1, 2, 3, 4, 5, 6, 7… 8!


ಕಾಗದದ ಮೂಲೆಗಳಂತೆ, ದೇವರ ಪ್ರೀತಿಯನ್ನು ಕೊಡುತ್ತಲೇ ಇದ್ದರೆ ಅದು ದೊಡ್ಡದಾಗುತ್ತಾ ಹೋಗುತ್ತದೆ.

ಸೃಷ್ಟಿಕರ್ತನ ಪ್ರೀತಿಯು ಎಷ್ಟು ದೊಡ್ಡದೆಂದರೆ, ಅದು ಎಷ್ಟು ದೊಡ್ಡದೆಂದು ಎಣಿಸಲು ನಮಗೆ ಸಾಧ್ಯವಿಲ್ಲ.

ನಾವು ಸೃಷ್ಟಿಕರ್ತನಾದ ದೇವರಿಗೆ ಅವಿಧೇಯರಾಗಿ ಕತ್ತಲೆಯಲ್ಲಿ ತಪ್ಪಿಹೋದರೂ ಸೃಷ್ಟಿಕರ್ತನಾದ ದೇವರು ನಮ್ಮನ್ನು ಪ್ರೀತಿಸುತ್ತಾನೆ

# ಪಾಠ 3







## ಬೈಬಲ್ ವಚನವನ್ನು ಕಂಠಪಾಠ ಮಾಡುವ ಆಟ

***ನಾವು ಸೃಷ್ಟಿಕರ್ತನಾದ ದೇವರಿಗೆ ಅವಿಧೇಯರಾಗಿ ಕತ್ತಲೆಯಲ್ಲಿ ತಪ್ಪಿ ಹೋದರೂ ಸೃಷ್ಟಿಕರ್ತನಾದ ದೇವರು ನಮ್ಮನ್ನು ಪ್ರೀತಿಸುತ್ತಾನೆ ಎಂದು ಉಪದೇಶಿಸುವ ಬೈಬಲಿನ ವಚನವನ್ನು ಬಳಸಿ***

**ಕೀರ್ತನೆ 103:4** *'ಆತನು ನಮ್ಮ ಜೀವವನ್ನು ನಾಶನದಿಂದ ರಕ್ಷಿಸಿ ನಮಗೆ ಪ್ರೀತಿಯನ್ನೂ ಕನಿಕರವನ್ನೂ ತೋರುವನು.'*

**ವೃತ್ತಾಕಾರದ ವಾಕ್ಯಚಿತ್ರ:** ಮಕ್ಕಳಿಗೆ ವೃತ್ತಾಕಾರವಾಗಿ ಕುಳಿತುಕೊಳ್ಳಲು ಹೇಳಿ. ಬೈಬಲಿನ ಕಂಠಪಾಠ ಮಾಡುವ ವಚನವನ್ನು ಮಕ್ಕಳಿಗೆ ತೋರಿಸಿ, ಒಂದೊಂದು ಪದವಾಗಿ ಓದಿ. ಮಕ್ಕಳು ಕಲಿತುಕೊಳ್ಳುವ ತನಕ ಆ ವಚನವನ್ನು ಮಕ್ಕಳಿಂದ ಮತ್ತೆಮತ್ತೆ ಹೇಳಿಸಿ. ಬೈಬಲಿನ ಕಂಠಪಾಠ ಮಾಡುವ ವಚನವನ್ನು ಮಕ್ಕಳಿಗೆ ಕಾಣದಂತೆ ಬಚ್ಚಿಡಿ.

ಚೆಂಡನ್ನು ಅಥವಾ ಕಾಗದದ ಚೀಟಿಯನ್ನು ಚೆಂಡಿಗೆ ಅಂಟಿಸಿ ಅದನ್ನು ಒಂದು ಮಗುವಿಗೆ ಎಸೆಯಿರಿ.

ಆ ಮಗುವು ಚೆಂಡನ್ನು ಕ್ಯಾಚ್ ಮಾಡಿ ಬೈಬಲಿನ ಕಂಠಪಾಠ ಮಾಡುವ ವಚನದ ಮೊದಲನೆ ಪದವನ್ನು ಹೇಳಬೇಕು. ಬಳಿಕ ಆ ಮಗುವು ಚೆಂಡನ್ನು ನಿಮಗೆ ಎಸೆಯಬೇಕು. ಆಗ ನೀವು ಆ ಚೆಂಡನ್ನು ಮತ್ತೊಂದು ಮಗುವಿಗೆ ಎಸೆಯಬೇಕು ಮತ್ತು ಆ ಮಗುವು ಚೆಂಡನ್ನು ಕ್ಯಾಚ್ ಮಾಡಿ ಬೈಬಲಿನ ಕಂಠಪಾಠ ಮಾಡುವ ವಚನದ ಮುಂದಿನ ಪದವನ್ನು ಹೇಳಬೇಕು. ಬಳಿಕ ಆ ಮಗುವು ಚೆಂಡನ್ನು ನಿಮಗೆ ಎಸೆಯಬೇಕು. ಆಗ ನೀವು ಆ ಚೆಂಡನ್ನು ಮತ್ತೊಂದು ಮಗುವಿಗೆ ಎಸೆಯಬೇಕು ಮತ್ತು ಆ ಮಗುವು ಚೆಂಡನ್ನು ಕ್ಯಾಚ್ ಮಾಡಿ ಬೈಬಲಿನ ಕಂಠಪಾಠ ಮಾಡುವ ವಚನದ ಮುಂದಿನ ಪದವನ್ನು ಹೇಳಬೇಕು. ಬೈಬಲಿನ ಕಂಠಪಾಠ ಮಾಡುವ ವಚನದ ಎಲ್ಲ ಪದಗಳು ಮತ್ತು ಕೀರ್ತನೆ ಪುಸ್ತಕದ ಅಧ್ಯಾಯದ ಸಂಖ್ಯೆ 103 ಹಾಗೂ ವಚನದ ಸಂಖ್ಯೆ 4 ಮುಗಿಯುವ ತನಕ ಹೀಗೆಯೇ ಮಾಡಿ.

ನಾವು
ಸೃಷ್ಟಿಕರ್ತನಾದ
ದೇವರಿಗೆ
ಅವಿಧೇಯರಾಗಿ
ಕತ್ತಲೆಯಲ್ಲಿ
ತಪ್ಪಿಹೋದರೂ
ಸೃಷ್ಟಿಕರ್ತನಾದ
ದೇವರು ನಮ್ಮನ್ನು
ಪ್ರೀತಿಸುತ್ತಾನೆ

## ಅನ್ವಯಿಸುಕೊಳ್ಳುವಿಕೆ

***ನಾವು ಸೃಷ್ಟಿಕರ್ತನಾದ ದೇವರಿಗೆ ಅವಿಧೇಯರಾಗಿ ಕತ್ತಲೆಯಲ್ಲಿ ತಪ್ಪಿ ಹೋದರೂ ಸೃಷ್ಟಿಕರ್ತನಾದ ದೇವರು ನಮ್ಮನ್ನು ಪ್ರೀತಿಸುತ್ತಾನೆ ಎಂದು ಉಪದೇಶಿಸುವ ಅನ್ವಯಿಸುಕೊಳ್ಳುವಿಕೆಯನ್ನು ಬಳಸಿ***

ಸೃಷ್ಟಿಕರ್ತನಾದ ದೇವರು ನಮ್ಮನ್ನು ಪ್ರೀತಿಸುತ್ತಾನೆ ಎಂದು ತಿಳಿದುಕೊಳ್ಳುವುದು ಅಂದರೆ ಸೃಷ್ಟಿಕರ್ತನಾದ ದೇವರು ನಮ್ಮನ್ನು ಕಾಪಾಡುತ್ತಾನೆ ಎಂದು ನಂಬತಕ್ಕದ್ದು ಎಂದರ್ಥ.

**ಪ್ರಾರ್ಥನೆ:** ಸೃಷ್ಟಿಕರ್ತನಾದ ದೇವರೇ, ನೀನು ನನ್ನನ್ನು ಯಾವಾಗಲೂ ಪ್ರೀತಿಸುವುದಕ್ಕಾಗಿ ನಿನಗೆ ವಂದನೆಗಳು. ನಾನು ನಿನಗೆ ಅಥವಾ ಇತರರಿಗೆ ವಿರೋಧವಾಗಿ ಏನಾದರೂ ಹೇಳುವಾಗಲೂ ಯೋಚಿಸುವಾಗಲೂ ಅಥವಾ ಮಾಡುವಾಗಲೂ ನೀನು ನನ್ನನ್ನು ಪ್ರೀತಿಸುವೆ. ನೀನು ನನ್ನನ್ನು ಯಾವಾಗಲೂ ಕಾಪಾಡುವುದಕ್ಕಾಗಿ ನಿನಗೆ ವಂದನೆಗಳು. ಸೃಷ್ಟಿಕರ್ತನಾದ ದೇವರೇ, ನೀನು ಯಾರೆಂಬುದನ್ನು, ನೀನು ನನ್ನನ್ನು ಎಷ್ಟೊಂದು ಪ್ರೀತಿಸುವೆ ಎಂಬುದನ್ನು ಮತ್ತು ನೀನು ನನಗಾಗಿ ಮಾಡಿರುವುದನ್ನು ತಿಳಿದುಕೊಳ್ಳಲು ನನಗೆ ಸಹಾಯಮಾಡು. ಆಮೆನ್.

**ಬಹುಮಾನ:** ಪ್ರತಿಯೊಂದು ಮಗುವಿಗೆ ಅವರ ಸ್ವಂತಕ್ಕೆ ಶುಭವಾರ್ತೆ ಕಥಾಪುಸ್ತಕ–ಒಂದರ ಪ್ರತಿಯನ್ನು ಕೊಡಿ. ಪ್ರತಿಯೊಂದು ಮಗುವಿಗೆ ಅವರ ಸ್ವಂತ ಶುಭವಾರ್ತೆ ಕಥಾಪುಸ್ತಕ–ಒಂದರ ಪ್ರತಿಯನ್ನು ಓದಲು ಸಹಾಯಮಾಡಿ.

# ಪಾಠ 4



## ಒಂದು ಉಪದೇಶದ ಅಂಶ

***ನಮ್ಮನ್ನು ಕಾಪಾಡುವ ಸೃಷ್ಟಿಕರ್ತನಾದ ದೇವರನ್ನು ನಂಬಿ***

ನಮ್ಮನ್ನು ಕಾಪಾಡುವ ಸೃಷ್ಟಿಕರ್ತನಾದ ದೇವರನ್ನು ನಂಬಿ

## ಬೈಬಲಿನ ಕಥೆ

***ನಮ್ಮನ್ನು ಕಾಪಾಡುವ ಸೃಷ್ಟಿಕರ್ತನಾದ ದೇವರನ್ನು ನಂಬಿ ಎಂದು ಉಪದೇಶಿಸುವ ಕಥೆಯನ್ನು ಬಳಸಿ***

**ಶುಭವಾರ್ತೆ ಕಥಾಪುಸ್ತಕ ಎರಡು.** ಪುಟಗಳು 2-15. *ದೊಡ್ಡ, ದೊಡ್ಡ, ದೊಡ್ಡ ಬಿರುಗಾಳಿ.*

ಮಕ್ಕಳಿಗೆ 2-17 ಪುಟಗಳಿಂದ ಕಥೆಯನ್ನು ಓದಿ, ನೀವು ಓದುವಾಗ ಮಕ್ಕಳಿಗೆ *ಶುಭವಾರ್ತೆ ಕಥಾಪುಸ್ತಕ—ಎರಡರಿಂದ* ಚಿತ್ರಗಳನ್ನು ತೋರಿಸಿ.

1, 2, 3 ಓದಲು ಆರಂಭಿಸಿ...

ನೋಹನು ಹೇಳುವ—ಪ್ರಾಣಿಗಳ ನಾಟಕವಾಡಲು ಕಥೆ ಹೇಳುವುದನ್ನು 7ನೇ ಪುಟದ ಕೊನೆಯಲ್ಲಿ ನಿಲ್ಲಿಸಿ.

**ನೋಹನು ಹೇಳುವ—ಪ್ರಾಣಿಗಳ ನಾಟಕ:** ಮಕ್ಕಳಲ್ಲಿ ನಾಲ್ಕು ತಂಡಗಳಿರಲಿ. ಒಂದು ತಂಡ ನಾಯಿಗಳ ತಂಡ, ಇನ್ನೊಂದು ತಂಡ ಬಾತುಕೋಳಿಗಳ ತಂಡ, ಇನ್ನೊಂದು ತಂಡ ಹುಲಿಗಳ ತಂಡ, ಇನ್ನೊಂದು ತಂಡ ಕಪಿಗಳ ತಂಡ.

ಟೀಚರ್: **ನಾಯಿಗಳು ಏನು ಮಾಡುತ್ತವೆ ಎಂದು ತೋರಿಸಿ?** ಮಕ್ಕಳು ಅಭಿನಯಿಸುತ್ತಾರೆ: ನಾಯಿಯಂತೆ ನಡುಗಿರಿ.

ಟೀಚರ್: **ನಾಯಿಗಳು ಏನು ಹೇಳುತ್ತವೆ?** ಮಕ್ಕಳು ಹೇಳುವರು: ವೌ ವೌ.

ಟೀಚರ್: **ಬಾತುಕೋಳಿಗಳು ಹೇಗೆ ನಡೆಯುತ್ತವೆ?** ಮಕ್ಕಳು ಅಭಿನಯಿಸುತ್ತಾರೆ: ಬಾತುಕೋಳಿಯಂತೆ ನಡೆಯಿರಿ.

ಟೀಚರ್: **ಬಾತುಕೋಳಿಗಳು ಏನು ಹೇಳುತ್ತವೆ?** ಮಕ್ಕಳು ಹೇಳುವರು: ಕ್ವಕ್ ಕ್ವಕ್.


ಟೀಚರ್: **ಹುಲಿಗಳು ಹೇಗೆ ನಡೆಯುತ್ತವೆ?** ಮಕ್ಕಳು ಅಭಿನಯಿಸುತ್ತಾರೆ: ಹುಲಿಯಂತೆ ನಡೆಯಿರಿ.

ಟೀಚರ್: **ಹುಲಿಗಳು ಏನು ಹೇಳುತ್ತವೆ?** ಮಕ್ಕಳು ಹೇಳುವರು: ಘುರ್ ಘುರ್.

ಟೀಚರ್: **ಕಪಿಗಳು ಹೇಗೆ ನಡೆಯುತ್ತವೆ?** ಮಕ್ಕಳು ಅಭಿನಯಿಸುತ್ತಾರೆ: ಕಪಿಯಂತೆ ನಡೆಯಿರಿ.

ಟೀಚರ್: **ಕಪಿಗಳು ಏನು ಹೇಳುತ್ತವೆ?** ಮಕ್ಕಳು ಹೇಳುವರು: ಊ ಊ ಊ, ಈ ಈ ಈ, ಆ ಆ ಆ.

# ಪಾಠ 4



ನಮ್ಮನ್ನು ಕಾಪಾಡುವ ಸೃಷ್ಟಿಕರ್ತನಾದ ದೇವರನ್ನು ನಂಬಿ

ಆಟದ ನಿಯಮಗಳನ್ನು ವಿವರಿಸಿ.

ನಾನು, **'ನೋಹನು ಹೇಳುವನು, ನಾಯಿಗಳು ಏನು ಮಾಡುತ್ತವೆ?'** ಎಂದು ಕೇಳುವಾಗ, ಎಲ್ಲ ಮಕ್ಕಳು ನಾಯಿಯಂತೆ ನಡುಗಬೇಕು. ನಾನು, **'ನಾಯಿಗಳು ಏನು ಮಾಡುತ್ತವೆ?'** ಎಂದು ಕೇಳುವಾಗ, ನಾಯಿ ತಂಡದವರು ಮಾತ್ರ ನಾಯಿಯಂತೆ ನಡುಗಬೇಕು. ನಾನು, **'ನೋಹನು ಹೇಳುವನು, ನಾಯಿಗಳು ಏನು ಹೇಳುತ್ತವೆ?'** ಎಂದು ಕೇಳುವಾಗ, ಎಲ್ಲ ಮಕ್ಕಳು 'ವೌ ವೌ' ಎಂದು ಹೇಳಬೇಕು. ನಾನು, **'ನಾಯಿಗಳು ಏನು ಹೇಳುತ್ತವೆ?'** ಎಂದು ಕೇಳುವಾಗ, ನಾಯಿ ತಂಡದವರು ಮಾತ್ರ 'ವೌ ವೌ' ಎಂದು ಹೇಳಬೇಕು.

ನಾನು, **'ನೋಹನು ಹೇಳುವನು, ಬಾತುಕೋಳಿಗಳು ಏನು ಮಾಡುತ್ತವೆ?'** ಎಂದು ಕೇಳುವಾಗ, ಎಲ್ಲ ಮಕ್ಕಳು ಬಾತುಕೋಳಿಯಂತೆ ನಡೆಯಬೇಕು. ನಾನು, **'ಬಾತುಕೋಳಿಗಳು ಏನು ಮಾಡುತ್ತವೆ?'** ಎಂದು ಕೇಳುವಾಗ, ಬಾತುಕೋಳಿ ತಂಡದವರು ಮಾತ್ರ ಬಾತುಕೋಳಿಯಂತೆ ನಡೆಯಬೇಕು. ನಾನು, **'ನೋಹನು ಹೇಳುವನು, ಬಾತುಕೋಳಿಗಳು ಏನು ಹೇಳುತ್ತವೆ?'** ಎಂದು ಕೇಳುವಾಗ, ಎಲ್ಲ ಮಕ್ಕಳು 'ಕ್ವಕ್ ಕ್ವಕ್' ಎಂದು ಹೇಳಬೇಕು. ನಾನು, **'ಬಾತುಕೋಳಿಗಳು ಏನು ಹೇಳುತ್ತವೆ?'** ಎಂದು ಕೇಳುವಾಗ, ಬಾತುಕೋಳಿ ತಂಡದವರು ಮಾತ್ರ 'ಕ್ವಕ್ ಕ್ವಕ್' ಎಂದು ಹೇಳಬೇಕು.

ನಾನು, **'ನೋಹನು ಹೇಳುವನು, ಹುಲಿಗಳು ಏನು ಮಾಡುತ್ತವೆ?'** ಎಂದು ಕೇಳುವಾಗ, ಎಲ್ಲ ಮಕ್ಕಳು ಹುಲಿಯಂತೆ ನಡೆಯಬೇಕು. ನಾನು, **'ಹುಲಿಗಳು ಏನು ಮಾಡುತ್ತವೆ?'** ಎಂದು ಕೇಳುವಾಗ, ಹುಲಿ ತಂಡದವರು ಮಾತ್ರ ಹುಲಿಯಂತೆ ನಡೆಯಬೇಕು. ನಾನು, **'ನೋಹನು ಹೇಳುವನು, ಹುಲಿಗಳು ಏನು ಹೇಳುತ್ತವೆ?'** ಎಂದು ಕೇಳುವಾಗ, ಎಲ್ಲ ಮಕ್ಕಳು 'ಘುರ್ ಘುರ್' ಎಂದು ಹೇಳಬೇಕು. ನಾನು, **'ಹುಲಿಗಳು ಏನು ಹೇಳುತ್ತವೆ?'** ಎಂದು ಕೇಳುವಾಗ, ಹುಲಿ ತಂಡದವರು ಮಾತ್ರ 'ಘುರ್ ಘುರ್' ಎಂದು ಹೇಳಬೇಕು.

ನಾನು, **'ನೋಹನು ಹೇಳುವನು, ಕಪಿಗಳು ಏನು ಮಾಡುತ್ತವೆ?'** ಎಂದು ಕೇಳುವಾಗ, ಎಲ್ಲ ಮಕ್ಕಳು ಕಪಿಯಂತೆ ನಡೆಯಬೇಕು. ನಾನು, **'ಕಪಿಗಳು ಏನು ಮಾಡುತ್ತವೆ?'** ಎಂದು ಕೇಳುವಾಗ, ಕಪಿ ತಂಡದವರು ಮಾತ್ರ ಕಪಿಯಂತೆ ನಡೆಯಬೇಕು. ನಾನು, **'ನೋಹನು ಹೇಳುವನು, ಕಪಿಗಳು ಏನು ಹೇಳುತ್ತವೆ?'** ಎಂದು ಕೇಳುವಾಗ, ಎಲ್ಲ ಮಕ್ಕಳು **'ಊ ಊ ಊ, ಈ ಈ ಈ, ಆ ಆ ಆ'** ಎಂದು ಹೇಳಬೇಕು. ನಾನು, **'ಕಪಿಗಳು ಏನು ಹೇಳುತ್ತವೆ?'** ಎಂದು ಕೇಳುವಾಗ, ಕಪಿ ತಂಡದವರು ಮಾತ್ರ 'ಊ ಊ ಊ, ಈ ಈ ಈ, ಆ ಆ ಆ' ಎಂದು ಹೇಳಬೇಕು.

ಒಂದು ಮಗುವು ತಪ್ಪು ಅಭಿನಯ ಮಾಡಿದರೆ ಅಥವಾ ತಪ್ಪು ಪದಗಳನ್ನು ಹೇಳಿದರೆ, ಆ ಮಗು ಮುಂದೆ ಬಂದು ಮುಂದಿನ ಸರದಿಯಲ್ಲಿ ಯಾರು ತಪ್ಪು ಹೇಳುತ್ತಾರೆ ಅಥವಾ ತಪ್ಪು ಅಭಿನಯ ಮಾಡುತ್ತಾರೆ ಎಂದು ಗಮನಿಸಲು ನಿಮಗೆ (ಟೀಚರ್) ಸಹಾಯಮಾಡಲಿ. ಹೀಗೆ ತಪ್ಪುಮಾಡಿದವರೆಲ್ಲ ಮುಂದೆ ಬರಲಿ. ಆಟದಲ್ಲಿ ತಪ್ಪು ಮಾಡದೆ ಕೊನೆಗುಳಿಯುವ ಮಗುವೇ ಅವರ ತಂಡಕ್ಕೆ ಜಯತಂದುಕೊಟ್ಟವನಾಗುವನು.

# ಪಾಠ 4

ಆಜ್ಞೆಗಳನ್ನು ಮಿಶ್ರಣಗೊಳಿಸಿ, ಆಗ ಮಕ್ಕಳು ಬಹಳ ಎಚ್ಚರಿಕೆಯಿಂದ ಕಿವಿಗೊಡಬೇಕಾಗುವುದು. ಒಬ್ಬರು ಸರಿಯಾಗಿ ಅಭಿನಯಿಸುವವರೆಗೆ ಮತ್ತು ಧ್ವನಿ ಮಾಡುವವರೆಗೆ ಆಟ ಮುಂದುವರಿಯುವುದು. ಅವರ ತಂಡ ಗೆದ್ದ ತಂಡವಾಗುವುದು. ಪ್ರತಿಯೊಬ್ಬರಿಗೂ ಆಟ ಅರ್ಥವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಿ.

ಒಂದೇ ಮಗು ಉಳಿದುಕೊಂಡ ಮೇಲೆ, ಜಯಗಳಿಸಿದ ತಂಡವನ್ನು ಘೋಷಿಸಿ. ಪ್ರತಿಯೊಬ್ಬರೂ ಮತ್ತೆ ಕುಳಿತುಕೊಳ್ಳಲಿ.

**ನೋಹನ ಜ್ಞಾಪಕವಿದೆಯೇ? ನೋಹನ ಕಥೆಯಲ್ಲಿ ನಿಮಗೆ ಯಾವುದು ಜ್ಞಾಪಕವಿದೆ ಮತ್ತು ನಾವು ಆ ಕಥೆಯಲ್ಲಿ ಎಲ್ಲಿಯವರೆಗೆ ಬಂದಿದ್ದೇವೆ?**

ಮಕ್ಕಳಿಗೆ ಕಥೆಯ 8-15 ಪುಟಗಳನ್ನು ಓದಿಮುಗಿಸಿ, ನೀವು ಓದುವಾಗ ಮಕ್ಕಳಿಗೆ *ಶುಭವಾರ್ತೆ ಕಥಾಪುಸ್ತಕ—ಎರಡರಿಂದ* ಚಿತ್ರಗಳನ್ನು ತೋರಿಸಿ.

1, 2, 3 ಓದಲು ಆರಂಭಿಸಿ...

## ಪ್ರಶ್ನೋತ್ತರಗಳ ಸ್ಪರ್ಧೆ

ಮಕ್ಕಳಿಗೆ ಕಥೆಯ ಬಗ್ಗೆ ಪ್ರಶ್ನೆಗಳನ್ನು ಕೇಳಿ. ಮಕ್ಕಳ ಎರಡು ತಂಡಗಳಿರಲಿ. ಮೊದಲನೆ ತಂಡಕ್ಕೆ ಒಂದು ಪ್ರಶ್ನೆಯನ್ನು ಕೇಳಿ. ಮೊದಲನೆ ತಂಡದ ಮಕ್ಕಳೆಲ್ಲ ಒಂದು ಉತ್ತರವನ್ನು ನಿರ್ಧರಿಸಬೇಕು. ಅವರು ಸರಿಯಾದ ಉತ್ತರ ಕೊಟ್ಟರೆ, ಅವರ ತಂಡಕ್ಕೆ ಒಂದು ಅಂಕೆಯನ್ನು ಕೊಡಿ. ಮೊದಲನೆ ತಂಡ ಸರಿಯಾದ ಉತ್ತರ ಕೊಡದಿದ್ದರೆ, ಎರಡನೆ ತಂಡಕ್ಕೆ ಅದೇ ಪ್ರಶ್ನೆಯನ್ನು ಕೇಳಿ. ಎರಡನೆ ತಂಡದ ಮಕ್ಕಳೆಲ್ಲ ಒಂದು ಉತ್ತರವನ್ನು ನಿರ್ಧರಿಸಬೇಕು. ಅವರು ಸರಿಯಾದ ಉತ್ತರ ಕೊಟ್ಟರೆ, ಅವರ ತಂಡಕ್ಕೆ ಒಂದು ಅಂಕೆಯನ್ನು ಕೊಡಿ.

ದೊರೆತ ಅಂಕೆಗಳನ್ನು ಕಪ್ಪುಹಲಗೆಯ ಮೇಲೆ ಅಥವಾ ಒಂದು ಕಾಗದ ಮೇಲೆ ಬರೆದು ಮೊತ್ತ ಹಾಕಿ.

ಬಳಿಕ ಎರಡನೆ ತಂಡಕ್ಕೆ ಕಥೆಯ ಬಗ್ಗೆ ಮತ್ತೊಂದು ಪ್ರಶ್ನೆಯನ್ನು ಕೇಳಿ. ಎರಡನೆ ತಂಡದ ಮಕ್ಕಳೆಲ್ಲ ಒಂದು ಉತ್ತರವನ್ನು ನಿರ್ಧರಿಸಬೇಕು. ಅವರು ಸರಿಯಾದ ಉತ್ತರ ಕೊಟ್ಟರೆ, ಅವರ ತಂಡಕ್ಕೆ ಒಂದು ಅಂಕೆಯನ್ನು ಕೊಡಿ. ಎರಡನೆ ತಂಡ ಸರಿಯಾದ ಉತ್ತರ ಕೊಡದಿದ್ದರೆ, ಮೊದಲನೆ ತಂಡಕ್ಕೆ ಅದೇ ಪ್ರಶ್ನೆಯನ್ನು ಕೇಳಿ. ಮೊದಲನೆ ತಂಡದ ಮಕ್ಕಳೆಲ್ಲ ಒಂದು ಉತ್ತರವನ್ನು ನಿರ್ಧರಿಸಬೇಕು. ಅವರು ಸರಿಯಾದ ಉತ್ತರ ಕೊಟ್ಟರೆ, ಅವರ ತಂಡಕ್ಕೆ ಒಂದು ಅಂಕೆಯನ್ನು ಕೊಡಿ.

ನಮ್ಮನ್ನು ಕಾಪಾಡುವ ಸೃಷ್ಟಿಕರ್ತನಾದ ದೇವರನ್ನು ನಂಬಿ

ಕಥೆಯ ಬಗ್ಗೆ ಪ್ರಶ್ನೆಗಳನ್ನು ಕೇಳುವಾಗ, ಒಮ್ಮೆ ಮೊದಲನೆ ತಂಡಕ್ಕೆ ಇನ್ನೊಮ್ಮೆ ಎರಡನೆ ತಂಡಕ್ಕೆ ಕೇಳಿ.

ಒಂದು ಮಗುವು ತಪ್ಪು ಉತ್ತರ ಕೊಟ್ಟರೆ, ಆ ಮಗುವನ್ನು ಪ್ರೋತ್ಸಾಹಪಡಿಸಿ, ಒಳ್ಳೆಯ ಪ್ರಯತ್ನ ಆದರೆ ನಾನು ಅಪೇಕ್ಷಿಸುತ್ತಿರುವ ಉತ್ತರ ಅದಲ್ಲ ಎಂದು ಹೇಳಿ. ಒಂದು ಮಗುವು ಸರಿಯಾದ ಉತ್ತರ ಕೊಟ್ಟರೆ, ಸರಿಯಾದ ಉತ್ತರ! ಶಬಾಷ್! ಎಂದು ಹೇಳಿ.

ಮುಂದಿನ ಪುಟದಲ್ಲಿ ಉತ್ತರದೊಡನೆ ನೀವು ಕೇಳಬಹುದಾದ ಕೆಲವು ಪ್ರಶ್ನೆಗಳಿವೆ.

# ಪಾಠ 4

ನಮ್ಮನ್ನು ಕಾಪಾಡುವ ಸೃಷ್ಟಿಕರ್ತನಾದ ದೇವರನ್ನು ನಂಬಿ

**ನೋಹನು ಯಾರಿಗೆ ಹಾಡಿದನು?**

ಸೃಷ್ಟಿಕರ್ತನಾದ ದೇವರಿಗೆ.


**ಸೃಷ್ಟಿಕರ್ತನಾದ ದೇವರು ನೋಹನಿಗೆ ದೊಡ್ಡ, ದೊಡ್ಡ, ದೊಡ್ಡ ನಾವೆ ಕಟ್ಟಲು ಯಾಕೆ ಹೇಳಿದನು?**
ದೊಡ್ಡ ಬಿರುಗಾಳಿ ಬರಲಿತ್ತು, ಆದ್ದರಿಂದ ಸೃಷ್ಟಿಕರ್ತನಾದ ದೇವರು ನೋಹನನ್ನು, ನೋಹನ ಕುಟುಂಬವನ್ನು ಮತ್ತು ಎಲ್ಲ ಪ್ರಾಣಿಗಳನ್ನು ಕಾಪಾಡಬೇಕೆಂದಿದ್ದನು.

**ಸೃಷ್ಟಿಕರ್ತನಾದ ದೇವರು ತನಗೆ ನೋಹನ ಮೇಲಿರುವ ಪ್ರೀತಿಯನ್ನು ಹೇಗೆ ತೋರಿಸಿಕೊಟ್ಟನು?**
ಸೃಷ್ಟಿಕರ್ತನಾದ ದೇವರು ನೋಹನನ್ನು ಮತ್ತು ನೋಹನ ಕುಟುಂಬವನ್ನು ಮತ್ತು ಎಲ್ಲ ಪ್ರಾಣಿಗಳನ್ನು ಕಾಪಾಡಿದನು.

**ನೋಹನ ಕಥೆಯು ಯಾವಾಗ ಆರಂಭವಾಯಿತು?**

ನಮ್ಮ ಪೂರ್ವಿಕರ ಕಾಲದಲ್ಲಿ.

**ನೋಹನ ಕಥೆಯಿಂದ ಏನನ್ನು ಕಲಿತುಕೊಳ್ಳುತ್ತೇವೆ?**
ಸಂಭವಿಸುವುದೆಲ್ಲಾ ಸೃಷ್ಟಿಕರ್ತನಾದ ದೇವರಿಗೆ ಗೊತ್ತಿದೆ. ಸೃಷ್ಟಿಕರ್ತನಾದ ದೇವರು ನಮ್ಮನ್ನು ಪ್ರೀತಿಸುತ್ತಾನೆ. ಸೃಷ್ಟಿಕರ್ತನಾದ ದೇವರು ಹೇಳಿದ್ದನ್ನು ಮಾಡಿದ್ದರಿಂದ ನೋಹನು ಸುರಕ್ಷಿತವಾಗಿದ್ದನು. ಸೃಷ್ಟಿಕರ್ತನಾದ ದೇವರು ನಮ್ಮನ್ನು ಕಾಪಾಡುವನು. ಸೃಷ್ಟಿಕರ್ತನಾದ ದೇವರು ತಾನು ಮಾಡುತ್ತೇನೆಂದು ಹೇಳಿದ್ದನ್ನು ಮಾಡುವನು.



## ಅಭಿನಯಾತ್ಮಕ ಹಾಡು

***ನಮ್ಮನ್ನು ಕಾಪಾಡುವ ಸೃಷ್ಟಿಕರ್ತನಾದ ದೇವರನ್ನು ನಂಬಿ ಎಂದು ಉಪದೇಶಿಸುವ ಅಭಿನಯಾತ್ಮಕ ಹಾಡನ್ನು ಬಳಸಿ***

ಓ ನೋಡಿದಿರಾ ನೀವು ಪ್ರಾಣಿಗಳನ್ನು, ಪ್ರಾಣಿಗಳನ್ನು, ಪ್ರಾಣಿಗಳನ್ನು.
ನೋಡಿದಿರಾ ನೀವು ಹಡಗಿನಿಂದ ಹೊರಬರುವ ಪ್ರಾಣಿಗಳನ್ನು.

ದೇವರುಳಿಸಿದನು ಪ್ರಾಣಿಗಳನ್ನೆಲ್ಲ, ಪ್ರಾಣಿಗಳೆನ್ನೆಲ್ಲ, ಪ್ರಾಣಿಗಳನ್ನೆಲ್ಲ.
ದೇವರುಳಿಸಿದನು ಪ್ರಾಣಿಗಳನ್ನೆಲ್ಲ, ಉಳಿಸಿದನು ಅವುಗಳನ್ನೆಲ್ಲ ಜಲಪ್ರಳಯದಿಂದ.

## ದೃಷ್ಟಾಂತ ಪಾಠ

***ನಮ್ಮನ್ನು ಕಾಪಾಡುವ ಸೃಷ್ಟಿಕರ್ತನಾದ ದೇವರನ್ನು ನಂಬಿ ಎಂದು ಉಪದೇಶಿಸುವ ದೃಷ್ಟಾಂತ ಪಾಠವನ್ನು ಬಳಸಿ***

ನಿಮಗೆ ಸಹಾಯಕರಾಗಿರಲು ಇಬ್ಬರು ಮಕ್ಕಳಿಗೆ ಹೇಳಿ. ಒಂದು ಮಗುವಿನ ಕಣ್ಣುಗಳಿಗೆ ಬಟ್ಟೆಕಟ್ಟಿ. ಕಣ್ಣುಗಳಿಗೆ ಬಟ್ಟೆಕಟ್ಟಲ್ಪಟ್ಟ ಮಗುವನ್ನು ಕೋಣೆಯ ಸುತ್ತಲೂ ಅಥವಾ ಹಳ್ಳಿಯ ಸುತ್ತಲೂ ನಡೆಸಿಕೊಂಡು ಹೋಗಲು ಇನ್ನೊಂದು ಮಗುವಿಗೆ ಹೇಳಿ.

ಆ ಇಬ್ಬರು ಮಕ್ಕಳು ಸುತ್ತಾಡಿದ ಮೇಲೆ, ಕಣ್ಣುಗಳಿಗೆ ಬಟ್ಟೆಕಟ್ಟಲ್ಪಟ್ಟ ಮಗುವಿಗೆ ಪ್ರಶ್ನೆಗಳನ್ನು ಕೇಳಿ, ಆ ಮಗುವಿನ ಉತ್ತರವನ್ನು ಉಳಿದ ಮಕ್ಕಳೆಲ್ಲ ಕೇಳಿಸಿಕೊಳ್ಳಲಿ.

ನೀವು ಕೇಳಬಹುದಾದ ಕೆಲವು ಪ್ರಶ್ನೆಗಳು ಇಲ್ಲಿವೆ.

**ನೀನು ಎಲ್ಲಿಗೆ ಹೋಗುತ್ತಿರುವೆ ಎಂದು ನಿನಗೆ ಗೊತ್ತಿಲ್ಲದಿದ್ದಾಗ ನಿನಗೇನನ್ನಿಸಿತು?**

**ನಿನ್ನ ಗೆಳೆಯನನ್ನು ನಂಬಿದ್ದರಿಂದ ಹೋಗಲು ಸುಲಭವಾಯಿತೇ?**

# ಪಾಠ 4

**ನಿಜಜೀವನದಲ್ಲಿ, ಮುಂದೆ ಸಂಭವಿಸುವಂಥದ್ದು ನಿನಗೆ ಯಾವಾಗಲೂ ಗೊತ್ತಿರುತ್ತದೆಯಾ?**

**ಸೃಷ್ಟಿಕರ್ತನಾದ ದೇವರನ್ನು ನಂಬಲು ನೀನು ಏನು ಮಾಡಬಹುದು?**

## ಬೈಬಲ್ ವಚನವನ್ನು ಕಂಠಪಾಠ ಮಾಡುವ ಆಟ

***ನಮ್ಮನ್ನು ಕಾಪಾಡುವ ಸೃಷ್ಟಿಕರ್ತನಾದ ದೇವರನ್ನು ನಂಬಿ ಎಂದು ಉಪದೇಶಿಸುವ ಬೈಬಲ್ ವಚನವನ್ನು ಬಳಸಿ***

ಸೃಷ್ಟಿಕರ್ತನಾದ ದೇವರಿಗೆ ಪ್ರಭು ಎಂಬುದು ಮತ್ತೊಂದು ಹೆಸರೆಂದು ವಿವರಿಸಿ.

**ಆದಿಕಾಂಡ 6:22** *'ದೇವರು ಆಜ್ಞಾಪಿಸಿದಂತೆಯೇ ನೋಹನು ಮಾಡಿದನು.'*

ಬೈಬಲಿನ ಕಂಠಪಾಠ ಮಾಡುವ ವಚನವನ್ನು ಹೇಳಿ/ಹಾಡಿ ಮತ್ತು ನೀವು (ಟೀಚರ್) ಹಾಡಿದ ನಂತರ ಹಾಡಲು ಮಕ್ಕಳಿಗೆ ಹೇಳಿ. ಬೈಬಲಿನ ಕಂಠಪಾಠ ಮಾಡುವ ವಚನವನ್ನು ಮಕ್ಕಳು ನೆನಪಿಟ್ಟುಕೊಳ್ಳುವ ತನಕ ಮತ್ತೆಮತ್ತೆ ಹೇಳಿ/ಹಾಡಿ.

ಬೈಬಲಿನ ಕಂಠಪಾಠ ಮಾಡುವ ವಚನಕ್ಕೆ ತಬಲದ ತಾಳವನ್ನು ಮತ್ತು ಅಭಿನಯವನ್ನು ಅಳವಡಿಸಿ, ಆಗ ಮಕ್ಕಳಿಗೆ ಅದನ್ನು ಹಾಡಲು ಸಾಧ್ಯವಾಗುವುದು.

ಟೀಚರ್: 'ದೇವರು'
ಮಕ್ಕಳು: 'ದೇವರು'

ಟೀಚರ್: 'ಆಜ್ಞಾಪಿಸಿದಂತೆಯೇ'
ಮಕ್ಕಳು: 'ಆಜ್ಞಾಪಿಸಿದಂತೆಯೇ'

ಟೀಚರ್: 'ನೋಹನು ಮಾಡಿದನು.'
ಮಕ್ಕಳು: 'ನೋಹನು ಮಾಡಿದನು.'

ಟೀಚರ್: 'ಆದಿಕಾಂಡ 6:22'
ಮಕ್ಕಳು: 'ಆದಿಕಾಂಡ 6:22'

## ಅನ್ವಯಿಸುಕೊಳ್ಳುವಿಕೆ


***ನಮ್ಮನ್ನು ಕಾಪಾಡುವ ಸೃಷ್ಟಿಕರ್ತನಾದ ದೇವರನ್ನು ನಂಬಿ ಎಂದು ಉಪದೇಶಿಸುವ ಅನ್ವಯಿಸುಕೊಳ್ಳುವಿಕೆಯನ್ನು ಬಳಸಿ***

ನಮ್ಮನ್ನು ಕಾಪಾಡುವ ಸೃಷ್ಟಿಕರ್ತನಾದ ದೇವರನ್ನು ನಂಬಿ

ಸೃಷ್ಟಿಕರ್ತನಾದ ದೇವರು ನಮ್ಮನ್ನು ಕಾಪಾಡುತ್ತಾನೆ ಎಂದು ತಿಳಿದುಕೊಳ್ಳುವುದೆಂದರೆ ಸೃಷ್ಟಿಕರ್ತನಾದ ದೇವರನ್ನು ನಂಬತಕ್ಕದ್ದು ಎಂದರ್ಥ. ಸೃಷ್ಟಿಕರ್ತನಾದ ದೇವರಿಗೆ ಪ್ರತಿಯೊಂದು ಗೊತ್ತಿದೆ. ಸೃಷ್ಟಿಕರ್ತನಾದ ದೇವರು ಪ್ರತಿಯೊಂದನ್ನು ನೋಡುತ್ತಾನೆ. ನೋಹನು ತನ್ನನ್ನು ನಡೆಸಲು ಸೃಷ್ಟಿಕರ್ತನಾದ ದೇವರಿಗೆ ಬಿಟ್ಟುಕೊಟ್ಟಂತೆ, ನಾವು ನಮ್ಮನ್ನು ನಡೆಸಲು ಸೃಷ್ಟಿಕರ್ತನಾದ ದೇವರಿಗೆ ಬಿಟ್ಟುಕೊಟ್ಟರೆ, ನಾವು ಬಿರುಗಾಳಿಯಲ್ಲಿದ್ದರೂ ನಮಗೆ ಶಾಂತಿ ಇರುವುದು.

**ಪ್ರಾರ್ಥನೆ:** ಸೃಷ್ಟಿಕರ್ತನಾದ ದೇವರೇ, ನೀನು ಜನರನ್ನು ಮತ್ತು ಪ್ರಾಣಿಗಳನ್ನು ಕಾಪಾಡುತ್ತಿರುವುದಕ್ಕಾಗಿ ನಿನಗೆ ವಂದನೆಗಳು. ಸೃಷ್ಟಿಕರ್ತನಾದ ದೇವರೇ, ನಾನು ನಿನ್ನಲ್ಲಿ ನಂಬಿಕೆ ಇಟ್ಟಿದ್ದೇನೆ. ಸೃಷ್ಟಿಕರ್ತನಾದ ದೇವರೇ, ನನ್ನ ಜೀವಿತದ ಎಲ್ಲ ದಿನಗಳಲ್ಲಿಯೂ ನನ್ನನ್ನು ನಡೆಸು. ಆಮೆನ್.

# ಪಾಠ 5



## ಒಂದು ಉಪದೇಶದ ಅಂಶ

*ಸೃಷ್ಟಿಕರ್ತನಾದ ದೇವರು ಏನುಬೇಕಾದರೂ ಮಾಡಬಲ್ಲನು*

## ಬೈಬಲಿನ ಕಥೆ

*ಸೃಷ್ಟಿಕರ್ತನಾದ ದೇವರು ಏನುಬೇಕಾದರೂ ಮಾಡಬಲ್ಲನು ಎಂದು ಉಪದೇಶಿಸುವ ಕಥೆಯನ್ನು ಬಳಸಿ*

ಸೃಷ್ಟಿಕರ್ತನಾದ ದೇವರು ಏನುಬೇಕಾದರೂ ಮಾಡಬಲ್ಲನು

**ಶುಭವಾರ್ತೆ ಕಥಾಪುಸ್ತಕ ಎರಡು.** ಪುಟಗಳು 16-32. *ವಿಶೇಷ ಕೊಡುಗೆ.*

**ಕಾಯುವ ಆಟ:** ಎಲ್ಲ ಮಕ್ಕಳು ನಿಮ್ಮನ್ನು ನೋಡಲಾಗುವಂಥ ಸ್ಥಳದಲ್ಲಿ ನೀವು ನಿಂತುಕೊಳ್ಳಿ. ನಿಮ್ಮ ವಾಚನ್ನು ಬಹು ಎಚ್ಚರಿಕೆಯಿಂದ ನೋಡುತ್ತಿರುವಂತೆ ನಟಿಸಿ (ಅಥವಾ ನಿಮ್ಮಲ್ಲಿ ವಾಚಿಲ್ಲದಿದ್ದರೆ, ವಾಚು ಇರುವವರಂತೆ ನಟಿಸಿ). ಏನೋ ಸಂಭವಿಸುವುದನ್ನು ಕಾಯುತ್ತಿರುವವರಂತೆ ನಟಿಸಿ. ನೀವು ಯಾವುದಕ್ಕಾಗಿ ಕಾಯುತ್ತಿದ್ದೀರೆಂದು ಮಕ್ಕಳಲ್ಲಿ ಒಬ್ಬರು ಕೇಳುವ ತನಕ ಕಾಯಿರಿ. (ಇದಕ್ಕೆ ಸ್ವಲ್ಪ ಸಮಯ ಬೇಕಾಗಬಹುದು.) ಬಳಿಕ, 'ಯಾವುದಕ್ಕಾಗಿ ಕಾಯುತ್ತಿದ್ದೀರಿ ಎಂದು ನೀವು ಕೇಳಲೆಂದು ಕಾಯುತ್ತಿದ್ದೆ!' ಎಂದು ಹೇಳಿ.

ಈ ದಿನದ ಕಥೆಯಲ್ಲಿ ಒಬ್ಬ ವ್ಯಕ್ತಿಯ ಬಗ್ಗೆ ಕಲಿಯುತ್ತೇವೆ. ಅವನ ಹೆಸರು ಅಬ್ರಹಾಮ. ಯಾವುದೋ ಒಂದಕ್ಕಾಗಿ ಅವನು ಅನೇಕ ವರ್ಷಗಳಿಂದ ಕಾಯುತ್ತಿದ್ದನು. ಅಬ್ರಹಾಮನು ಯಾವುದಕ್ಕಾಗಿ ಕಾಯುತ್ತಿದ್ದನು ಎಂಬುದನ್ನು ನಾವು ಕಂಡುಹಿಡಿಯುವಾಗ ಗಮನವಿಟ್ಟು ಕೇಳಿಸಿಕೊಳ್ಳಿ.

ನೀವು ಮಕ್ಕಳಿಗೆ ನಾನು ನಿಮ್ಮ ಕಡೆಗೆ ಬೆರಳುಮಾಡಿ ಸೂಚಿಸುವ ಪ್ರತಿ ಸಲವೂ ನೀವೆಲ್ಲರೂ, 'ಸೃಷ್ಟಿಕರ್ತನಾದ ದೇವರು ಏನುಬೇಕಾದರೂ ಮಾಡಬಲ್ಲನು' ಎಂದು ಹೇಳಬೇಕೆಂದು ತಿಳಿಸಿ. *ಶುಭವಾರ್ತೆ ಕಥಾಪುಸ್ತಕ–ಎರಡರಿಂದ 'ವಿಶೇಷ ಕೊಡುಗೆ'* ಯನ್ನು ಓದಿ ಕಥೆ ಹೇಳಿ.

'ಸೃಷ್ಟಿಕರ್ತನಾದ ದೇವರು ಏನುಬೇಕಾದರೂ ಮಾಡಬಲ್ಲನು' ಎಂದು ಕಥೆಯಲ್ಲಿ ಬಂದ ಪ್ರತಿ ಸಲವೂ ಮಕ್ಕಳ ಕಡೆಗೆ ಬೆರಳುಮಾಡಿ ಸೂಚಿಸಿ. 'ಸೃಷ್ಟಿಕರ್ತನಾದ ದೇವರು ಏನುಬೇಕಾದರೂ ಮಾಡಬಲ್ಲನು' ಎಂದು ಮಕ್ಕಳು ಹೇಳಲಿ.

1, 2, 3 ಕಥೆಯನ್ನು ಆರಂಭಿಸಿ...

ಕಥೆ ಹೇಳಿದ ಮೇಲೆ, ಮಕ್ಕಳಿಗೆ ಈ ಪ್ರಶ್ನೆ ಕೇಳಿ.

**'ಅಬ್ರಹಾಮನು ಯಾವುದಕ್ಕಾಗಿ ಕಾಯುತ್ತಿದ್ದನು?'**
ಒಂದು ಮಗುವಿಗಾಗಿ.


ಅವನ ಮಕ್ಕಳ ಮೂಲಕ ಅನೇಕ ಜನರನ್ನು ದೇವರು ಕಾಪಾಡಲೆಂದು.

ಯಜ್ಞಕಾಗಿ ಒಂದು ಕುರಿಯನ್ನು.

ಸೃಷ್ಟಿಕರ್ತನಾದ ದೇವರು ಭೂಲೋಕಕ್ಕೆ ಇಳಿದುಬರಲೆಂದು.

# ಪಾಠ 5





## ಅಭಿನಯಾತ್ಮಕ ಹಾಡು

***ಸೃಷ್ಟಿಕರ್ತನಾದ ದೇವರು ಏನುಬೇಕಾದರೂ ಮಾಡಬಲ್ಲನು ಎಂದು ಉಪದೇಶಿಸುವ ಅಭಿನಯಾತ್ಮಕ ಹಾಡನ್ನು ಬಳಸಿ***

ಸೃಷ್ಟಿಕರ್ತನಾದ ದೇವರಿಗೆ ಪ್ರಭು ಎಂಬುದು ಮತ್ತೊಂದು ಹೆಸರೆಂದು ವಿವರಿಸಿ.

ತಂದೆ ಅಬ್ರಹಾಮನಿಗೆ ಅನೇಕ ಗಂಡುಮಕ್ಕಳು, ಅನೇಕ ಗಂಡುಮಕ್ಕಳು ತಂದೆ ಅಬ್ರಹಾಮನಿಗೆ.
ನಾನು ಅವರಲ್ಲೊಬ್ಬನು, ನೀವೂ ಅವರಲ್ಲೊಬ್ಬರು. ನಾವೆಲ್ಲ ಸ್ತುತಿಸೋಣ ದೇವರನ್ನು ಅದಕ್ಕಾಗಿಯೇ.
ಬಲಗೈ!
ತಂದೆ ಅಬ್ರಹಾಮನಿಗೆ ಅನೇಕ ಗಂಡುಮಕ್ಕಳು, ಅನೇಕ ಗಂಡುಮಕ್ಕಳು ತಂದೆ ಅಬ್ರಹಾಮನಿಗೆ.
ನಾನು ಅವರಲ್ಲೊಬ್ಬನು, ನೀವೂ ಅವರಲ್ಲೊಬ್ಬರು. ನಾವೆಲ್ಲ ಸ್ತುತಿಸೋಣ ದೇವರನ್ನು ಅದಕ್ಕಾಗಿಯೇ.
ಬಲಗೈ, ಎಡಗೈ!
ತಂದೆ ಅಬ್ರಹಾಮನಿಗೆ ಅನೇಕ ಗಂಡುಮಕ್ಕಳು, ಅನೇಕ ಗಂಡುಮಕ್ಕಳು ತಂದೆ ಅಬ್ರಹಾಮನಿಗೆ.
ನಾನು ಅವರಲ್ಲೊಬ್ಬನು, ನೀವೂ ಅವರಲ್ಲೊಬ್ಬರು. ನಾವೆಲ್ಲ ಸ್ತುತಿಸೋಣ ದೇವರನ್ನು ಅದಕ್ಕಾಗಿಯೇ.
ಬಲಗೈ, ಎಡಗೈ, ಬಲಗಾಲು!
ತಂದೆ ಅಬ್ರಹಾಮನಿಗೆ ಅನೇಕ ಗಂಡುಮಕ್ಕಳು, ಅನೇಕ ಗಂಡುಮಕ್ಕಳು ತಂದೆ ಅಬ್ರಹಾಮನಿಗೆ.
ನಾನು ಅವರಲ್ಲೊಬ್ಬನು, ನೀವೂ ಅವರಲ್ಲೊಬ್ಬರು. ನಾವೆಲ್ಲ ಸ್ತುತಿಸೋಣ ದೇವರನ್ನು ಅದಕ್ಕಾಗಿಯೇ.
ಬಲಗೈ, ಎಡಗೈ, ಬಲಗಾಲು, ಎಡಗಾಲು!
ತಂದೆ ಅಬ್ರಹಾಮನಿಗೆ ಅನೇಕ ಗಂಡುಮಕ್ಕಳು, ಅನೇಕ ಗಂಡುಮಕ್ಕಳು ತಂದೆ ಅಬ್ರಹಾಮನಿಗೆ.
ನಾನು ಅವರಲ್ಲೊಬ್ಬನು, ನೀವೂ ಅವರಲ್ಲೊಬ್ಬರು. ನಾವೆಲ್ಲ ಸ್ತುತಿಸೋಣ ದೇವರನ್ನು ಅದಕ್ಕಾಗಿಯೇ.
ಬಲಗೈ, ಎಡಗೈ, ಬಲಗಾಲು, ಎಡಗಾಲು, ನಿಮ್ಮ ತಲೆಯಾಡಿಸಿ!
ತಂದೆ ಅಬ್ರಹಾಮನಿಗೆ ಅನೇಕ ಗಂಡುಮಕ್ಕಳು, ಅನೇಕ ಗಂಡುಮಕ್ಕಳು ತಂದೆ ಅಬ್ರಹಾಮನಿಗೆ.
ನಾನು ಅವರಲ್ಲೊಬ್ಬನು, ನೀವೂ ಅವರಲ್ಲೊಬ್ಬರು. ನಾವೆಲ್ಲ ಸ್ತುತಿಸೋಣ ದೇವರನ್ನು ಅದಕ್ಕಾಗಿಯೇ.
ಬಲಗೈ, ಎಡಗೈ, ಬಲಗಾಲು ಎಡಗಾಲು, ನಿಮ್ಮ ತಲೆಯಾಡಿಸಿ, ಸುತ್ತಲೂ ತಿರುಗಿ!
ನಾವೆಲ್ಲ ಸ್ತುತಿಸೋಣ ದೇವರನ್ನು ಅದಕ್ಕಾಗಿಯೇ.

# ಪಾಠ 5

## ದೃಷ್ಟಾಂತ ಪಾಠ

***ಸೃಷ್ಟಿಕರ್ತನಾದ ದೇವರು ಏನುಬೇಕಾದರೂ ಮಾಡಬಲ್ಲನು ಎಂದು ಉಪದೇಶಿಸುವ ದೃಷ್ಟಾಂತ ಪಾಠವನ್ನು ಬಳಸಿ***

ಸೃಷ್ಟಿಕರ್ತನಾದ ದೇವರು ಏನುಬೇಕಾದರೂ ಮಾಡಬಲ್ಲನು

**ನಿಮಗೆ ಏನು ಕಾಣುತ್ತಿದೆ?** ಒಂದು ಮಗುವು ತಪ್ಪು ಉತ್ತರ ಕೊಟ್ಟರೆ, ಆ ಮಗುವನ್ನು ಪ್ರೋತ್ಸಾಹಪಡಿಸಿ, ಒಳ್ಳೆಯ ಪ್ರಯತ್ನ ಆದರೆ ನಾನು ಅಪೇಕ್ಷಿಸುತ್ತಿರುವ ಉತ್ತರ ಅದಲ್ಲ ಎಂದು ಹೇಳಿ. ಒಂದು ಮಗುವು ಸರಿಯಾದ ಉತ್ತರ ಕೊಟ್ಟರೆ, ಸರಿಯಾದ ಉತ್ತರ! ಶಬಾಷ್! ಎಂದು ಹೇಳಿ. ಒಂದು ಮಗುವು ಸರಿಯಾದ ಉತ್ತರ ಕೊಡುವ ತನಕ ಅದೇ ಪ್ರಶ್ನೆಯನ್ನು ಕೇಳುತ್ತಿರಿ.

ಆಕಾಶದ ಕಡೆಗೆ ನೋಡಿ. **ನಿಮಗೆ ಏನು ಕಾಣುತ್ತಿದೆ?**
ಕೊಡಬಹುದಾದ ಉತ್ತರಗಳು: ಸೂರ್ಯ, ಆಕಾಶ, ಮೋಡಗಳು, ಪಕ್ಷಿಗಳು,

**ಇಂದು ಮುಂಜಾನೆ ಸೂರ್ಯನನ್ನು ಮೇಲೇರಿಸಿದವನು ಯಾರು?**
ಇಂದು ಮುಂಜಾನೆ ಸೂರ್ಯನನ್ನು ಮೇಲೇರಿಸಿದವನು ಸೃಷ್ಟಿಕರ್ತನಾದ ದೇವರು.

**ಪ್ರತಿ ರಾತ್ರಿ ಸೂರ್ಯನನ್ನು ಕೆಳಗಿಳಿಸುವವನು ಯಾರು?**
ಪ್ರತಿ ರಾತ್ರಿ ಸೂರ್ಯನನ್ನು ಕೆಳಗಿಳಿಸುವವನು ಸೃಷ್ಟಿಕರ್ತನಾದ ದೇವರು.

**ಮೋಡಗಳನ್ನು ಆಕಾಶದಲ್ಲೆಲ್ಲಾ ಚಲಿಸುವವನು ಯಾರು?**
ಮೋಡಗಳನ್ನು ಆಕಾಶದಲ್ಲೆಲ್ಲಾ ಚಲಿಸುವವನು ಸೃಷ್ಟಿಕರ್ತನಾದ ದೇವರು.

**ಮೋಡಗಳಿಂದ ಮಳೆಯಾಗುವಂತೆ ಮಾಡುವವನು ಯಾರು?**
ಮೋಡಗಳಿಂದ ಮಳೆಯಾಗುವಂತೆ ಮಾಡುವವನು ಸೃಷ್ಟಿಕರ್ತನಾದ ದೇವರು.

**ಆಕಾಶದಲ್ಲಿ ಹಾರಾಡುವ ಪಕ್ಷಿಗಳನ್ನು ನೋಡಿಕೊಳ್ಳುವವನು ಯಾರು?**
ಆಕಾಶದಲ್ಲಿ ಹಾರಾಡುವ ಪಕ್ಷಿಗಳನ್ನು ನೋಡಿಕೊಳ್ಳುವವನು ಸೃಷ್ಟಿಕರ್ತನಾದ ದೇವರು.

ಸೃಷ್ಟಿಕರ್ತನಾದ ದೇವರು ಏನುಬೇಕಾದರೂ ಮಾಡಬಲ್ಲನು.

## ಬೈಬಲ್ ವಚನವನ್ನು ಕಂಠಪಾಠ ಮಾಡುವ ಆಟ

***ಸೃಷ್ಟಿಕರ್ತನಾದ ದೇವರು ಏನುಬೇಕಾದರೂ ಮಾಡಬಲ್ಲನು ಎಂದು ಉಪದೇಶಿಸುವ ಬೈಬಲ್ ವಚನವನ್ನು ಬಳಸಿ***

ಸೃಷ್ಟಿಕರ್ತನಾದ ದೇವರಿಗೆ ಪ್ರಭು ಎಂಬುದು ಮತ್ತೊಂದು ಹೆಸರೆಂದು ವಿವರಿಸಿ.

**ಆದಿಕಾಂಡ 15:6** *‘ಅಬ್ರಾಮನು ಯೆಹೋವನನ್ನು ನಂಬಿದನು. ಆ ನಂಬಿಕೆಯ ನಿಮಿತ್ತವೇ ಯೆಹೋವನು ಅಬ್ರಾಮನನ್ನು ನೀತಿವಂತನೆಂದು ಪರಿಗಣಿಸಿದನು.’*

**ಉಪಕರಣಗಳು:** ಕಪ್ಪುಹಲಗೆ ಮತ್ತು ಬರೆಯಲು ಸೀಮೆಸುಣ್ಣ, ಅಥವಾ ಮರಳು ಮತ್ತು ಚಿತ್ರಿಸಲು ಕಡ್ಡಿ, ಅಥವಾ ಕಾಗದ ಮತ್ತು ಬರೆಯಲು ಪೆನ್ಸಿಲ್.

ಬೈಬಲಿನ ಕಂಠಪಾಠ ಮಾಡುವ ವಚನವನ್ನು ಕಪ್ಪುಹಲಗೆಯ ಮೇಲೆ ಅಥವಾ ಮರಳಿನಲ್ಲಿ ಅಥವಾ ಕಾಗದದ ಮೇಲೆ ಬರೆಯಿರಿ. ಬೈಬಲಿನ ಕಂಠಪಾಠ ಮಾಡುವ ವಚನದ ಪ್ರತಿಯೊಂದು ಪದಕ್ಕೆ ಬೆರಳುಮಾಡಿ ವಚನವನ್ನು ಹೇಳಿ. ಮಕ್ಕಳಿಗೆ ಓದಲು ಇನ್ನೂ ಕಲಿಸಿಲ್ಲದಿದ್ದರೆ, ಬೈಬಲಿನ ಕಂಠಪಾಠ ಮಾಡುವ ವಚನವನ್ನು ಬರೆಯುವ ಅಗತ್ಯವಿಲ್ಲ. ನೀವು ಒಂದು ವಾಕ್ಯದ ಪದಗಳನ್ನು ಹೇಳಿ ನಿಲ್ಲಿಸಿದ ನಂತರ ಮಕ್ಕಳು ಆ ವಾಕ್ಯದ ಪದಗಳನ್ನು ಮತ್ತೆ ಹೇಳಲಿ.

# ಪಾಠ 5

ಅಬ್ರಾಮನು ಯೆಹೋವನನ್ನು ನಂಬಿದನು. (x3)
ಆ ನಂಬಿಕೆಯ ನಿಮಿತ್ತವೇ (x3)
ಯೆಹೋವನು ಅಬ್ರಾಮನನ್ನು (x3)
ನೀತಿವಂತನೆಂದು ಪರಿಗಣಿಸಿದನು. (x3)

ಈಗ ಎಲ್ಲ ಮಕ್ಕಳು ಎದ್ದು ನಿಂತುಕೊಳ್ಳಲಿ. ನಿಮ್ಮನ್ನು ಅನುಸರಿಸಲು ಮಕ್ಕಳಿಗೆ ಹೇಳಿ.

ಬೈಬಲಿನ ಕಂಠಪಾಠ ಮಾಡುವ ವಚನವನ್ನು ಹೇಳುತ್ತಾ ನಿಮ್ಮ ಹೊಟ್ಟೆಯ ಮೇಲೆ ಕೈಯಾಡಿಸಿ. ಆ ಬಳಿಕ ಮಕ್ಕಳು ಬೈಬಲಿನ ಕಂಠಪಾಠ ಮಾಡುವ ವಚನವನ್ನು ಹೇಳುತ್ತಾ ತಮ್ಮ ಹೊಟ್ಟೆಯ ಮೇಲೆ ಕೈಯಾಡಿಸಲಿ.

ಬೈಬಲಿನ ಕಂಠಪಾಠ ಮಾಡುವ ವಚನವನ್ನು ಹೇಳುತ್ತಾ ಒಂದು ಸುತ್ತು ಸುತ್ತಿರಿ. ಆ ಬಳಿಕ ಮಕ್ಕಳು ಬೈಬಲಿನ ಕಂಠಪಾಠ ಮಾಡುವ ವಚನವನ್ನು ಹೇಳುತ್ತಾ ಒಂದು ಸುತ್ತು ಸುತ್ತಲಿ.

ಬೈಬಲಿನ ಕಂಠಪಾಠ ಮಾಡುವ ವಚನವನ್ನು ಹೇಳುತ್ತಾ ಮೇಲಕ್ಕೆ ಕೆಳಕ್ಕೆ ನೆಗೆಯಿರಿ. ಆ ಬಳಿಕ ಮಕ್ಕಳು ಬೈಬಲಿನ ಕಂಠಪಾಠ ಮಾಡುವ ವಚನವನ್ನು ಹೇಳುತ್ತಾ ಮೇಲಕ್ಕೆ ಕೆಳಕ್ಕೆ ನೆಗೆಯಲಿ. ಇವೆರಡನ್ನೂ ಒಟ್ಟಿಗೆ ಮಾಡಬೇಕು.

ಬರೆದಿರುವ ಬೈಬಲಿನ ಕಂಠಪಾಠ ಮಾಡುವ ವಚನವನ್ನು ಅಳಿಸಿಹಾಕಿ ಕೊನೆಯದಾಗಿ ಬೈಬಲಿನ ಕಂಠಪಾಠ ಮಾಡುವ ವಚನವನ್ನು ಹೇಳಲು ಮಕ್ಕಳಿಗೆ ತಿಳಿಸಿ.

## ಅನ್ವಯಿಸುಕೊಳ್ಳುವಿಕೆ

***ಸೃಷ್ಟಿಕರ್ತನಾದ ದೇವರು ಏನುಬೇಕಾದರೂ ಮಾಡಬಲ್ಲನು ಎಂದು ಉಪದೇಶಿಸುವ ಅನ್ವಯಿಸುಕೊಳ್ಳುವಿಕೆಯನ್ನು ಬಳಸಿ***


ಸೃಷ್ಟಿಕರ್ತನಾದ ದೇವರು ಏನುಬೇಕಾದರೂ ಮಾಡಬಲ್ಲನು ಯಾಕಂದರೆ ಸೃಷ್ಟಿಕರ್ತನಾದ ದೇವರು ಪ್ರತಿಯೊಂದನ್ನು ಸೃಷ್ಟಿಸಿದನು. ಸೃಷ್ಟಿಕರ್ತನಾದ ದೇವರು ನಮ್ಮನ್ನು ಬಹಳವಾಗಿ ಪ್ರೀತಿಸುತ್ತಾನೆ. ಸೃಷ್ಟಿಕರ್ತನಾದ ದೇವರು ನಮ್ಮನ್ನು ಸದಾಕಾಲ ಮತ್ತು ಎಂದೆಂದಿಗೂ ಕಾಪಾಡುತ್ತಾನೆ.

ಸೃಷ್ಟಿಕರ್ತನಾದ ದೇವರು ಏನುಬೇಕಾದರೂ ಮಾಡಬಲ್ಲನು

**ಪ್ರಾರ್ಥನೆ:** ಸೃಷ್ಟಿಕರ್ತನಾದ ದೇವರೇ, ನನ್ನನ್ನು ಬಹಳವಾಗಿ ಪ್ರೀತಿಸುವುದಕ್ಕಾಗಿ ವಂದನೆಗಳು. ಸೃಷ್ಟಿಕರ್ತನಾದ ದೇವರೇ, ನೀನು ಏನುಬೇಕಾದರೂ ಮಾಡಬಲ್ಲೆ ಯಾಕಂದರೆ ನೀನು ಪ್ರತಿಯೊಂದನ್ನು ಸೃಷ್ಟಿಸಿದವನು, ಅದಕ್ಕಾಗಿ ನಿನಗೆ ವಂದನೆಗಳು. ನಾನು ನಿನ್ನಲ್ಲಿ ನಂಬಿಕೆ ಇಟ್ಟಿದ್ದೇನೆ. ನಾನು ನಿನ್ನಲ್ಲಿ ಭರವಸೆ ಇಟ್ಟಿದ್ದೇನೆ. ಆಮೆನ್.

**ಬಹುಮಾನ:** ಪ್ರತಿಯೊಂದು ಮಗುವಿಗೆ ಅವರ ಸ್ವಂತಕ್ಕೆ *ಶುಭವಾರ್ತೆ ಕಥಾಪುಸ್ತಕ–ಎರಡರ* ಪ್ರತಿಯನ್ನು ಕೊಡಿ. ಪ್ರತಿಯೊಂದು ಮಗುವಿಗೆ ಅವರ ಸ್ವಂತ *ಶುಭವಾರ್ತೆ ಕಥಾಪುಸ್ತಕ–ಎರಡನ್ನು* ಓದಲು ಸಹಾಯಮಾಡಿ.

# ಪಾಠ 6



## ಒಂದು ಉಪದೇಶದ ಅಂಶ

***ಸೃಷ್ಟಿಕರ್ತನಾದ ದೇವರು ತನ್ನ ಜನರನ್ನು ಸಂರಕ್ಷಿಸುತ್ತಾನೆ***

## ಬೈಬಲಿನ ಕಥೆ

***ಸೃಷ್ಟಿಕರ್ತನಾದ ದೇವರು ತನ್ನ ಜನರನ್ನು ಸಂರಕ್ಷಿಸುತ್ತಾನೆ ಎಂದು ಉಪದೇಶಿಸುವ ಕಥೆಯನ್ನು ಬಳಸಿ***

ಸೃಷ್ಟಿಕರ್ತನಾದ ದೇವರು ತನ್ನ ಜನರನ್ನು ಸಂರಕ್ಷಿಸುತ್ತಾನೆ

**ಶುಭವಾರ್ತೆ ಕಥಾಪುಸ್ತಕ ಮೂರು.** ಪುಟಗಳು 2-27. ದುಷ್ಟ ರಾಜ.

*ಶುಭವಾರ್ತೆ ಕಥಾಪುಸ್ತಕ–ಮೂರರಿಂದ* ನೀವು ದುಷ್ಟ ರಾಜನ ಕಥೆ ಹೇಳುವಾಗ, ಮಕ್ಕಳು ಕಥೆಯನ್ನು ಅಭಿನಯದ ಮೂಲಕ ವ್ಯಕ್ತಪಡಿಸಲಿ.


**ಪಾತ್ರಧಾರಿಗಳು:** ಕಥೆಗಾರ ಮತ್ತು ನಾಟಕದ ನಿರ್ದೇಶಕ (ಟೀಚರ್ ಆಗಿರುವ ನೀವು). ದುಷ್ಟರಾಜ (ಮಕ್ಕಳಲ್ಲಿ ಒಬ್ಬರು). ಮೋಶೆ (ಮಕ್ಕಳಲ್ಲಿ ಒಬ್ಬರು). ಆರೋನ (ಮಕ್ಕಳಲ್ಲಿ ಒಬ್ಬರು). ಮೂರು ಮಾಂತ್ರಿಕರು (ಮಕ್ಕಳಲ್ಲಿ ಮೂವರು). ಸೃಷ್ಟಿಕರ್ತನಾದ ದೇವರಿಗೆ ಹಾಡುವ ಮಕ್ಕಳು (ನಾಟಕದಲ್ಲಿ ಪಾತ್ರಧಾರಿಗಳಾಗಿಲ್ಲದ ಎಲ್ಲ ಮಕ್ಕಳು).

ದುಷ್ಟ ರಾಜನಿಗೆ ಮುಂದೆಬಂದು ಕುಳಿತುಕೊಳ್ಳಲು ಹೇಳಿ. ಮಕ್ಕಳ ಮುಂದಿರುವ ಈ ಸ್ಥಳವು ದುಷ್ಟ ರಾಜನ ಅರಮನೆಯೆಂದು ಮಕ್ಕಳಿಗೆ ವಿವರಿಸಿ. ದುಷ್ಟ ರಾಜನ ಅರಮನೆಯನ್ನು ಪ್ರವೇಶಿಸಲು ಮಕ್ಕಳಿಗೆ ಅನುಮತಿಯಿಲ್ಲ. ಮೋಶೆಗೆ ಮತ್ತು ಆರೋನನಿಗೆ ಮಕ್ಕಳ ಪಕ್ಕದಲ್ಲಿ ನಿಂತುಕೊಳ್ಳಲು ಹೇಳಿ, ಆಗ ಮಕ್ಕಳಿಗೆ ಮೋಶೆಯನ್ನು ಮತ್ತು ಆರೋನನನ್ನು ನೋಡಲು ಸಾಧ್ಯವಾಗುತ್ತದೆ. ಮೂರು ಮಾಂತ್ರಿಕರಿಗೆ ದುಷ್ಟ ರಾಜನ ಅರಮನೆಯೊಳಗೆ ದುಷ್ಟ ರಾಜನ ಹಿಂಭಾಗದಲ್ಲಿ ನಿಂತುಕೊಳ್ಳಲು ಹೇಳಿ.

ನಾಟಕದಲ್ಲಿ ಎಲ್ಲ ಮಕ್ಕಳಿಗೂ ಪಾತ್ರಗಳಿವೆ. ನೀವು ಓದುತ್ತಾ ಕಥೆ ಹೇಳುವಾಗ, ಕಥೆಯಲ್ಲಿ ಪಾತ್ರಧಾರಿಗಳಾಗಿ ಬರುವ ಮಕ್ಕಳಿಗೆ ಸೂಚನೆ ನೀಡುತ್ತಾ ನಿರ್ದೇಶಿಸಿ. ಪಾತ್ರಧಾರಿಗಳು ಮಾಡುವುದಕ್ಕೂ ಹೇಳುವುದಕ್ಕೂ ಮಕ್ಕಳು ಗಮನಕೊಡಬೇಕು. ಬಳಿಕ ಕಥೆಯಲ್ಲಿ ಪಾತ್ರಧಾರಿಗಳು ಮಾಡಿದಂತೆ ಮತ್ತು ಹೇಳಿದಂತೆ ಮಕ್ಕಳು ಮಾಡಬೇಕು ಮತ್ತು ಹೇಳಬೇಕು.

*ಉದಾಹರಣೆ:* 2-3 ಪುಟಗಳನ್ನು ಓದುತ್ತಾ ಕಥೆ ಹೇಳಿ. ನೀವು (ಟೀಚರ್), 'ಮಕ್ಕಳು ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ', 'ಸೃಷ್ಟಿಕರ್ತನಾದ ದೇವರೇ, ನಮ್ಮನ್ನು ಕಾಪಾಡು' ಎಂದು ಓದಿಹೇಳಿದ ಮೇಲೆ ನಿಲ್ಲಿಸಿ, ಮತ್ತು ನಾಟಕದಲ್ಲಿ ಸೃಷ್ಟಿಕರ್ತನಾದ ದೇವರಿಗೆ ಹಾಡಬೇಕಾದ ಮಕ್ಕಳ ಕಡೆಗೆ ಬೆರಳುಮಾಡಿ ಸೂಚಿಸಿ. ಸೃಷ್ಟಿಕರ್ತನಾದ ದೇವರಿಗೆ ಹಾಡುವ ಮಕ್ಕಳ ಪಾತ್ರ ವಹಿಸಿರುವ ಮಕ್ಕಳು, 'ಸೃಷ್ಟಿಕರ್ತನಾದ ದೇವರೇ, ದಯವಿಟ್ಟು ನಮ್ಮನ್ನು ಕಾಪಾಡು' ಎಂದು ಹೇಳಲಿ.

# ಪಾಠ 6



*ಉದಾಹರಣೆ:* 4-6 ಪುಟಗಳನ್ನು ಓದುತ್ತಾ ಕಥೆ ಹೇಳಿ. ನೀವು (ಟೀಚರ್), 'ಮೋಶೆಯು ಬೆಂಕಿಯ ಮರವನ್ನು ನೋಡುತ್ತಿರುವುದು ನನಗೆ ಕಾಣುತ್ತಿದೆ' ಎಂದು ಓದಿಹೇಳಿದ ಮೇಲೆ ನಿಲ್ಲಿಸಿ, ಮತ್ತು ನಾಟಕದಲ್ಲಿ ಮೋಶೆಯ ಪಾತ್ರ ವಹಿಸಿರುವ ಮಗುವಿನ ಕಡೆಗೆ ಬೆರಳುಮಾಡಿ ಸೂಚಿಸಿ. ಮೋಶೆಯ ಪಾತ್ರ ವಹಿಸಿರುವ ಮಗುವು ಆಗ ಬೆಂಕಿಯ ಮರವನ್ನು ಆಶ್ಚರ್ಯದಿಂದ ನೋಡುವಂತೆ ನಟಿಸಬೇಕು.

ಓದುತ್ತಾ ಕಥೆ ಹೇಳುವುದನ್ನು ಮುಂದುವರಿಸಿ, ಪ್ರತಿ ಸಲ ನಿಲ್ಲಿಸಿ ಮತ್ತು ನಾಟಕದಲ್ಲಿ ಪಾತ್ರ ವಹಿಸಿರುವ ಮಗುವಿನ ಕಡೆಗೆ ಬೆರಳುಮಾಡಿ ಸೂಚಿಸಿ. ಕಥೆಯಲ್ಲಿ ಬರುವ ಅವರ ಪಾತ್ರಧಾರಿಯು ಮಾಡುವಂತೆ ಮತ್ತು ಹೇಳುವಂತೆ ಅವರು ಅಭಿನಯಿಸಬೇಕು ಮತ್ತು ಹೇಳಬೇಕು.

1, 2, 3, ನಾಟಕವನ್ನು ಆರಂಭಿಸಿ...

ಕಥೆಯನ್ನು ಓದುವುದು, ಹೇಳುವುದು ಮತ್ತು ಅಭಿನಯಿಸುವುದು ಮುಗಿದ ಮೇಲೆ, ಕಥೆಯ ಬಗ್ಗೆ ಮಕ್ಕಳಿಗೆ ಪ್ರಶ್ನೆಗಳನ್ನು ಕೇಳಿ. ಒಂದು ಮಗುವು ತಪ್ಪು ಉತ್ತರ ಕೊಟ್ಟರೆ, ಆ ಮಗುವನ್ನು ಪ್ರೋತ್ಸಾಹಪಡಿಸಿ, ಒಳ್ಳೆಯ ಪ್ರಯತ್ನ ಆದರೆ ನಾನು ಅಪೇಕ್ಷಿಸುತ್ತಿರುವ ಉತ್ತರ ಅದಲ್ಲ ಎಂದು ಹೇಳಿ. ಒಂದು ಮಗುವು ಸರಿಯಾದ ಉತ್ತರ ಕೊಟ್ಟರೆ, ಸರಿಯಾದ ಉತ್ತರ! ಶಬಾಷ್! ಎಂದು ಹೇಳಿ. ಒಂದು ಮಗುವು ಸರಿಯಾದ ಉತ್ತರ ಕೊಡುವ ತನಕ ಅದೇ ಪ್ರಶ್ನೆಯನ್ನು ಕೇಳುತ್ತಿರಿ.

ನೀವು ಕೇಳಬಹುದಾದ ಕೆಲವು ಪ್ರಶ್ನೆಗಳು ಇಲ್ಲಿವೆ.

ಸೃಷ್ಟಿಕರ್ತನಾದ ದೇವರು ತನ್ನ ಜನರನ್ನು ಸಂರಕ್ಷಿಸುತ್ತಾನೆ

**ದುಷ್ಟ ರಾಜನು ಯಾರನ್ನು ದ್ವೇಷಿಸುತ್ತಾನೆ?**
ಸೃಷ್ಟಿಕರ್ತನಾದ ದೇವರಿಗೆ ಹಾಡುವ ಪ್ರತಿಯೊಬ್ಬರನ್ನು.

**ತನ್ನ ಜನರು ಸ್ವತಂತ್ರರಾಗಿ ಹೋಗಲು ಬಿಡಬೇಕೆಂದು ಸೃಷ್ಟಿಕರ್ತನಾದ ದೇವರು ದುಷ್ಟ ರಾಜನಿಗೆ ತಿಳಿಸಲು ಯಾರನ್ನು ಕಳುಹಿಸಿದನು?**
ಮೋಶೆಯನ್ನು ಮತ್ತು ಆರೋನನನ್ನು.

**ಸೃಷ್ಟಿಕರ್ತನಾದ ದೇವರು ಆರೋನನಿಗೆ ಏನು ಹೇಳಿದನು?**
ನಿನ್ನ ಊರುಗೋಲನ್ನು ಬಿಸಾಡು.

**ಆರೋನನು ಏನು ಮಾಡಿದನು?**
ಆರೋನನು ತನ್ನ ಊರುಗೋಲನ್ನು ಬಿಸಾಡಿದನು.

**ಆರೋನನ ಊರುಗೋಲಿಗೆ ಏನಾಯಿತು?**
ಆರೋನನ ಊರುಗೋಲು ಹಾವಾಯಿತು.

# ಪಾಠ 6






**ತನ್ನ ಜನರನ್ನು ಮರಣದಿಂದ ಸಂರಕ್ಷಿಸಲು ಸೃಷ್ಟಿಕರ್ತನಾದ ದೇವರು ಅವರಿಗೆ ಏನು ಮಾಡಬೇಕೆಂದು ಹೇಳಿದನು?**
ಕುರಿಗಳ ರಕ್ತವನ್ನು ಮನೆಗಳ ಬಾಗಿಲಿನ ನಿಲುವುಗಳಿಗೆ ಹಚ್ಚಬೇಕೆಂದು.

**ಈ ಕಥೆಯಿಂದ ನಾವು ಏನು ಕಲಿತುಕೊಳ್ಳುತ್ತೇವೆ?**
ನಾವು ಸೃಷ್ಟಿಕರ್ತನಾದ ದೇವರೊಡನೆ ಮಾತಾಡುವಾಗ ಆತನು ನಮಗೆ ಕಿವಿಗೊಡುತ್ತಾನೆ.
ಸೃಷ್ಟಿಕರ್ತನಾದ ದೇವರು ತನ್ನ ಜನರನ್ನು ಸಂರಕ್ಷಿಸುತ್ತಾನೆ ಮತ್ತು ಕಾಪಾಡುತ್ತಾನೆ.

## ಅಭಿನಯಾತ್ಮಕ ಹಾಡು

***ಸೃಷ್ಟಿಕರ್ತನಾದ ದೇವರು ತನ್ನ ಜನರನ್ನು ಸಂರಕ್ಷಿಸುತ್ತಾನೆ ಎಂದು ಉಪದೇಶಿಸುವ ಅಭಿನಯಾತ್ಮಕ ಹಾಡನ್ನು ಬಳಸಿ***



ಶಕ್ತಿ ಶಕ್ತಿ ಅದ್ಭುತ ಶಕ್ತಿಯು
ಕುರಿಮರಿಯ ರಕ್ತದಲಿ
ಶಕ್ತಿ ಶಕ್ತಿ ಅದ್ಭುತ ಶಕ್ತಿಯು
ಕುರಿಮರಿಯ ರಕ್ತದಲಿ!

x2

## ದೃಷ್ಟಾಂತ ಪಾಠ

***ಸೃಷ್ಟಿಕರ್ತನಾದ ದೇವರು ತನ್ನ ಜನರನ್ನು ಸಂರಕ್ಷಿಸುತ್ತಾನೆ ಎಂದು ಉಪದೇಶಿಸುವ ದೃಷ್ಟಾಂತ ಪಾಠವನ್ನು ಬಳಸಿ***

ಸೃಷ್ಟಿಕರ್ತನಾದ ದೇವರು ತನ್ನ ಜನರನ್ನು ಸಂರಕ್ಷಿಸುತ್ತಾನೆ

**ಉಪಕರಣ:** ಮಗುವಿಗೆ ಪೂರ್ತಿಯಾಗಿ ಹೊದಿಸತಕ್ಕ ಒಂದು ಕಂಬಳಿ.

ಸೃಷ್ಟಿಕರ್ತನಾದ ದೇವರಿಗೆ ಹಾಡುವ ಜನರನ್ನು ಸೃಷ್ಟಿಕರ್ತನಾದ ದೇವರು ದುಷ್ಟ ರಾಜನ ಸೈನ್ಯದಿಂದ ಸಂರಕ್ಷಿಸಿದ ಕಥೆಯು ನಿಮಗೆ ನೆನಪಿದೆಯೇ? ಅದು ಯಾವ ರೀತಿಯಾಗಿತ್ತೆಂದು ನಾನು ನಿಮಗೆ ತೋರಿಸುವೆ. ನಿಮಗೆ ಸಹಾಯಕನಾಗಿರುವಂತೆ ಒಂದು ಮಗುವಿಗೆ ಹೇಳಿ, ನಿಮಗೆ ಸಹಾಯಮಾಡಲು ನಿಮ್ಮ ಪಕ್ಕಕ್ಕೆ ಬಂದು ನಿಂತುಕೊಳ್ಳಲು ಆ ಮಗುವಿಗೆ ಹೇಳಿ.


**ಈ ಕಂಬಳಿ ಕಾಣುತ್ತಿದೆಯೇ?** (ಮಕ್ಕಳಿಗೆ ತೋರಿಸಲು ಮೇಲೆತ್ತಿ ಹಿಡಿದುಕೊಳ್ಳಿ). ಮಕ್ಕಳು ಉತ್ತರಿಸುವರು: ಹೌದು.

ಬಳಿಕ ಕಂಬಳಿಯನ್ನು ನಿಮ್ಮ ಸಹಾಯಕನ ಮೇಲೆ ಹಾಕಿ ಅವನ ದೇಹಕ್ಕೆ ಪೂರ್ತಿಯಾಗಿ ಹೊದಿಸಿ.

ನಿಮ್ಮ ಸಹಾಯಕನನ್ನು, **'ಕಂಬಳಿಯ ಕೆಳಗೆ ಗಾಳಿ ಬರುತ್ತಿದೆಯೇ?'** ಎಂದು ಕೇಳಿ.
ನಿಮ್ಮ ಸಹಾಯಕನ ಉತ್ತರ: ಇಲ್ಲ.

ಕಂಬಳಿಯು ನಮ್ಮನ್ನು ಸಂರಕ್ಷಿಸುವ ಸೃಷ್ಟಿಕರ್ತನಾದ ದೇವರಂತಿದೆ. ಸೃಷ್ಟಿಕರ್ತನಾದ ದೇವರು ನಮ್ಮನ್ನು ತನ್ನ ಪ್ರೀತಿಯಿಂದ ಹೊದಿಸುವನು ಮತ್ತು ಕೆಟ್ಟ ಆತ್ಮಗಳಿಂದ ಮತ್ತು ದುಷ್ಟ ಶಕ್ತಿಗಳಿಂದ ನಮ್ಮನ್ನು ಸಂರಕ್ಷಿಸುತ್ತಾನೆ.

# ಪಾಠ 6



## ಬೈಬಲ್ ವಚನವನ್ನು ಕಂಠಪಾಠ ಮಾಡುವ ಆಟ

***ಸೃಷ್ಟಿಕರ್ತನಾದ ದೇವರು ತನ್ನ ಜನರನ್ನು ಸಂರಕ್ಷಿಸುತ್ತಾನೆ ಎಂದು ಉಪದೇಶಿಸುವ ಬೈಬಲ್ ವಚನವನ್ನು ಬಳಸಿ***

ಸೃಷ್ಟಿಕರ್ತನಾದ ದೇವರು ತನ್ನ ಜನರನ್ನು ಸಂರಕ್ಷಿಸುತ್ತಾನೆ

ಸೃಷ್ಟಿಕರ್ತನಾದ ದೇವರಿಗೆ ಪ್ರಭು ಎಂಬುದು ಮತ್ತೊಂದು ಹೆಸರೆಂದು ವಿವರಿಸಿ.

**ವಿಮೋಚನಕಾಂಡ 14:14** *'ಯೆಹೋವನು ನಿಮಗೋಸ್ಕರ ಯುದ್ಧಮಾಡುವನು. ಆದ್ದರಿಂದ ನೀವು ಸುಮ್ಮನೆ ಇರಿ.'*

**ಉಪಕರಣಗಳು:** ಕಪ್ಪುಹಲಗೆ ಮತ್ತು ಬರೆಯಲು ಸೀಮೆಸುಣ್ಣ, ಅಥವಾ ಮರಳು ಮತ್ತು ಚಿತ್ರಿಸಲು ಕಡ್ಡಿ, ಅಥವಾ ಕಾಗದ ಮತ್ತು ಬರೆಯಲು ಪೆನ್ಸಿಲ್. ಬೈಬಲಿನ ಕಂಠಪಾಠ ಮಾಡುವ ವಚನವನ್ನು ನೀವು ಹೇಳುತ್ತಾ ಬರೆಯಿರಿ ಮತ್ತು ನೀವು ಬರೆಯುತ್ತಾ ಹೋದಂತೆ ಮಕ್ಕಳು ಅವುಗಳನ್ನು ಮತ್ತೆ ಹೇಳಲಿ. ಮಕ್ಕಳು ಓದಲು ಇನ್ನೂ ಕಲಿತಿಲ್ಲದಿದ್ದರೆ, ಬೈಬಲಿನ ಕಂಠಪಾಠ ಮಾಡುವ ವಚನವನ್ನು ಬರೆಯುವ ಅಗತ್ಯವಿಲ್ಲ. ಬೈಬಲಿನ ಕಂಠಪಾಠ ಮಾಡುವ ವಚನವನ್ನು ಬಾಯಿಂದ ಹೇಳಿ.

ಟೀಚರ್: ಯೆಹೋವನು. ಮಕ್ಕಳು: ಯೆಹೋವನು.
ಟೀಚರ್: ನಿಮಗೋಸ್ಕರ. ಮಕ್ಕಳು: ನಿಮಗೋಸ್ಕರ.
ಟೀಚರ್: ಯುದ್ಧ. ಮಕ್ಕಳು: ಯುದ್ಧ.
ಟೀಚರ್: ಮಾಡುವನು. ಮಕ್ಕಳು: ಮಾಡುವನು.
ಟೀಚರ್: ಆದ್ದರಿಂದ. ಮಕ್ಕಳು: ಆದ್ದರಿಂದ.
ಟೀಚರ್: ನೀವು. ಮಕ್ಕಳು: ನೀವು.
ಟೀಚರ್: ಸುಮ್ಮನೆ ಇರಿ. ಮಕ್ಕಳು: ಸುಮ್ಮನೆ ಇರಿ.

ಯಾವುದಾದರೂ ಮೂರು ಪದಗಳನ್ನು ಅಳಿಸಿಹಾಕಿ. ಕಾಣೆಯಾಗಿರುವ ಪದಗಳನ್ನು ತುಂಬಲು ಒಬ್ಬ ಹುಡುಗನನ್ನು ಆರಿಸಿಕೊಳ್ಳಿ, ತುಂಬಿದಾದ ಮೇಲೆ ಎಲ್ಲರೂ ಬೈಬಲಿನ ಕಂಠಪಾಠ ಮಾಡುವ ವಚನವನ್ನು ಹೇಳಲಿ. ಮೂರು ಬೇರೆಬೇರೆ ಪದಗಳನ್ನು ಅಳಿಸಿಹಾಕಿ. ಕಾಣೆಯಾಗಿರುವ ಪದಗಳನ್ನು ತುಂಬಲು ಒಬ್ಬ ಹುಡುಗಿಯನ್ನು ಆರಿಸಿಕೊಳ್ಳಿ, ತುಂಬಿದಾದ ಮೇಲೆ ಎಲ್ಲರೂ ಬೈಬಲಿನ ಕಂಠಪಾಠ ಮಾಡುವ ವಚನವನ್ನು ಹೇಳಲಿ.

## ಅನ್ವಯಿಸುಕೊಳ್ಳುವಿಕೆ

***ಸೃಷ್ಟಿಕರ್ತನಾದ ದೇವರು ತನ್ನ ಜನರನ್ನು ಸಂರಕ್ಷಿಸುತ್ತಾನೆ ಎಂದು ಉಪದೇಶಿಸುವ ಅನ್ವಯಿಸುಕೊಳ್ಳುವಿಕೆಯನ್ನು ಬಳಸಿ***

ನಾವು ಭಯಗೊಂಡಿರುವಾಗ ಸೃಷ್ಟಿಕರ್ತನಾದ ದೇವರಿಗೆ ಹಾಡಿದರೆ, ಆತನು ನಮ್ಮ ಭಯವನ್ನು ತೆಗೆದುಹಾಕುವನು. ನಮಗೆ ಶಾಂತಿ ಇರುತ್ತದೆ, ಯಾಕಂದರೆ ಸೃಷ್ಟಿಕರ್ತನಾದ ದೇವರು ನಮ್ಮನ್ನು ಸಂರಕ್ಷಿಸುತ್ತಾನೆ.

**ಪ್ರಾರ್ಥನೆ:** ಸೃಷ್ಟಿಕರ್ತನಾದ ದೇವರೇ, ಈ ಲೋಕದ ಕೆಟ್ಟ ಆತ್ಮಗಳಿಂದ ಮತ್ತು ದುಷ್ಟ ಶಕ್ತಿಗಳಿಂದ ನೀನು ನನ್ನನ್ನು ಸಂರಕ್ಷಿಸುವುದಕ್ಕಾಗಿ ನಿನಗೆ ವಂದನೆಗಳು. ನೀನು ನನ್ನನ್ನು ಪ್ರೀತಿಸುವುದಕ್ಕಾಗಿ ನಿನಗೆ ವಂದನೆಗಳು. ಆಮೆನ್.

# ಪಾಠ 7



## ಒಂದು ಉಪದೇಶದ ಅಂಶ

***ಸೃಷ್ಟಿಕರ್ತನಾದ ದೇವರು ನನಗೆ ಜೀವ ಕೊಡುವನು***

## ಬೈಬಲಿನ ಕಥೆ

ಸೃಷ್ಟಿಕರ್ತನಾದ ದೇವರು ನನಗೆ ಜೀವ ಕೊಡುವನು

***ಸೃಷ್ಟಿಕರ್ತನಾದ ದೇವರು ನನಗೆ ಜೀವ ಕೊಡುವನು ಎಂದು ಉಪದೇಶಿಸುವ ಕಥೆಯನ್ನು ಬಳಸಿ***

**ಶುಭವಾರ್ತೆ ಕಥಾಪುಸ್ತಕ ಮೂರು.** ಪುಟಗಳು 28-32. ಕುರುಬ ಬಾಲಕ.

**ಉಪಕರಣಗಳು:** ಕಪ್ಪುಹಲಗೆ ಮತ್ತು ಚಿತ್ರಿಸಲು ಸೀಮೆಸುಣ್ಣ, ಅಥವಾ ಮರಳು ಮತ್ತು ಚಿತ್ರಿಸಲು ಕಡ್ಡಿ, ಅಥವಾ ಕಾಗದ ಮತ್ತು ಚಿತ್ರಿಸಲು ಪೆನ್ಸಿಲ್. ಮಕ್ಕಳಿಗೆ ಡ್ರಾಯಿಂಗ್ ಪುಸ್ತಕ ಅಥವಾ ಕಾಗದ, ಪೆನ್ಸಿಲ್ ಮತ್ತು ರಬ್ಬರ್ ಅವಶ್ಯಕ.

ಚಿತ್ರಿಸಿ ಕಥೆ ಹೇಳಿ.



1, 2, 3 ಕಥೆಯನ್ನು ಆರಂಭಿಸಿ...

ಕುರುಬ ಬಾಲಕ ನನಗೆ ಕಾಣುತ್ತಿದ್ದಾನೆ. ಅವನ ಹೆಸರು ದಾವೀದ.



ದಾವೀದನು ಅಬ್ರಹಾಮನ ಕುಟುಂಬದವನು.

ಅನೇಕ ವರ್ಷಗಳು ಕಳೆದವು. ಕುರುಬ ಬಾಲಕನಾದ ದಾವೀದ ಈಗ ರಾಜನಾಗಿದ್ದಾನೆ.



ದಾವೀದ ರಾಜನು ಸೃಷ್ಟಿಕರ್ತನಾದ ದೇವರಿಗೆ ಹಾಡುತ್ತಿರುವುದು ನನಗೆ ಕೇಳಿಸುತ್ತಿದೆ.
'ಸೃಷ್ಟಿಕರ್ತನಾದ ದೇವರೇ, ನನಗೆ ಪ್ರತಿಯೊಂದೂ ನೀನೇ ಆಗಿರುವೆ.
ಸೃಷ್ಟಿಕರ್ತನಾದ ದೇವರೇ, ನನಗೆ ಜೀವ ಕೊಡುವಾತನು ನೀನೇ.
ಸೃಷ್ಟಿಕರ್ತನಾದ ದೇವರೇ, ನನಗೆ ಶಾಂತಿ ಕೊಡುವಾತನು ನೀನೇ.
ಸೃಷ್ಟಿಕರ್ತನಾದ ದೇವರೇ, ನನ್ನನ್ನು ಕಾಪಾಡುವಾತನು ನೀನೇ.
ಸೃಷ್ಟಿಕರ್ತನಾದ ದೇವರೇ, ನನ್ನನ್ನು ರಕ್ಷಿಸುವಾತನು ನೀನೇ.
ಸೃಷ್ಟಿಕರ್ತನಾದ ದೇವರೇ, ನನ್ನನ್ನು ಪ್ರೀತಿಸುವಾತನು ನೀನೇ.
ಸೃಷ್ಟಿಕರ್ತನಾದ ದೇವರೇ, ನೀನು ಸದಾಕಾಲ ಮತ್ತು ಎಂದೆಂದಿಗೂ ನನ್ನೊಂದಿಗಿರುವೆ.'



ಸೃಷ್ಟಿಕರ್ತನಾದ ದೇವರು ದಾವೀದ ರಾಜನಿಗೆ ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

'ನಿನ್ನ ಕುಟುಂಬದ ಮೂಲಕವಾಗಿ ನಾನು ಪ್ರತಿಯೊಬ್ಬರನ್ನೂ ಸದಾಕಾಲ ಮತ್ತು ಎಂದೆಂದಿಗೂ ಕಾಪಾಡುವೆ.'


ಸೃಷ್ಟಿಕರ್ತನಾದ ದೇವರು ಬರುತ್ತಿದ್ದಾನೆ...

**ಮಕ್ಕಳಿಗೆ ಕಥೆಯನ್ನು ಚಿತ್ರಿಸಲು ಹೇಳಿ.**

# ಪಾಠ 7







## ಅಭಿನಯಾತ್ಮಕ ಹಾಡು

***ಸೃಷ್ಟಿಕರ್ತನಾದ ದೇವರು ನನಗೆ ಜೀವ ಕೊಡುವನು ಎಂದು ಉಪದೇಶಿಸುವ ಅಭಿನಯಾತ್ಮಕ ಹಾಡನ್ನು ಬಳಸಿ***

ಸೃಷ್ಟಿಕರ್ತ ದೇವರೇ ಇಂಪಾದ ಪಕ್ಷಿಗಳಿಗಾಗಿ ನಿನಗೆ ಸ್ತೋತ್ರ
ಸೃಷ್ಟಿಕರ್ತ ದೇವರೇ ನಿನ್ನೆಲ್ಲ ಉಪಕಾರಕ್ಕಾಗಿ ನಿನಗೆ ಸ್ತೋತ್ರ

ಸೃಷ್ಟಿಕರ್ತ ದೇವರೇ ಜೀವ ಕೊಡುವಾತನೇ ನಿನಗೆ ಸ್ತೋತ್ರ
ಸೃಷ್ಟಿಕರ್ತ ದೇವರೇ ನನ್ನ ಪ್ರಾಣಪ್ರಿಯನೇ ನಿನಗೆ ಸ್ತೋತ್ರ

ಸೃಷ್ಟಿಕರ್ತ ದೇವರೇ ಹೊಳೆಯುವ ನಕ್ಷತ್ರಗಳಿಗಾಗಿ ನಿನಗೆ ಸ್ತೋತ್ರ
ಸೃಷ್ಟಿಕರ್ತ ದೇವರೇ ಎಂದೆಂದಿಗೂ ನನ್ನವನೇ ನಿನಗೆ ಸ್ತೋತ್ರ.

## ದೃಷ್ಟಾಂತ ಪಾಠ

***ಸೃಷ್ಟಿಕರ್ತನಾದ ದೇವರು ನನಗೆ ಜೀವ ಕೊಡುವನು ಎಂದು ಉಪದೇಶಿಸುವ ದೃಷ್ಟಾಂತ ಪಾಠವನ್ನು ಬಳಸಿ***

**ಉಪಕರಣಗಳು:** ಬಲೂನ್.

ಖಾಲಿ ಬಲೂನನ್ನು ನೆಲದ ಮೇಲೆ ಬಿಸಾಡಿ. ಮಕ್ಕಳಿಗೆ, 'ನೋಡಿ, ಈ ಬಲೂನಿನಲ್ಲಿ ಗಾಳಿಯಿಲ್ಲದಿರುವುದು ಕಾಣುತ್ತಿದೆಯೇ? ಇದು ಚಲಿಸುವುದಿಲ್ಲ, ಇದು ಏನೂ ಮಾಡುವುದಿಲ್ಲ. ಈಗ ನೋಡಿ' ಎಂದು ಹೇಳಿ.

ಬಲೂನಿಗೆ ಗಾಳಿ ಊದಿ, ಗಾಳಿ ಹೊರಹೋಗದಂತೆ ಅದರ ಬಾಯಿಗೆ ದಾರ ಕಟ್ಟಿ. ಮಕ್ಕಳಿಗೆ, 'ನೋಡಿ, ನಾನು ಬಲೂನಿಗೆ ಹೇಗೆ ಗಾಳಿ ಊದಿದ್ದೇನೆ. ಈಗ ಬಲೂನು ಚಲಿಸುತ್ತದೆ ಮತ್ತು ನರ್ತಿಸುತ್ತದೆ. ಸೃಷ್ಟಿಕರ್ತನಾದ ದೇವರು ಮೊದಲನೆ ಪುರುಷನನ್ನು ಮತ್ತು ಸ್ತ್ರೀಯನ್ನು ಸೃಷ್ಟಿಸಿದಾಗ, ಅವರಿಗೆ ತನ್ನ ಜೀವಶ್ವಾಸವನ್ನು ಊದಿದನು, ಆಗ ಅವರಿಗೆ ಜೀವ ಬಂದಿತು. ಸೃಷ್ಟಿಕರ್ತನಾದ ದೇವರು ನಮಗೆ ಜೀವವನ್ನು ಕೊಡುತ್ತಾನೆ.

ಸೃಷ್ಟಿಕರ್ತನಾದ ದೇವರು ನನಗೆ ಜೀವ ಕೊಡುವನು

## ಬೈಬಲ್ ವಚನವನ್ನು ಕಂಠಪಾಠ ಮಾಡುವ ಆಟ

***ಸೃಷ್ಟಿಕರ್ತನಾದ ದೇವರು ನನಗೆ ಜೀವ ಕೊಡುವನು ಎಂದು ಉಪದೇಶಿಸುವ ಬೈಬಲ್ ವಚನವನ್ನು ಬಳಸಿ***

ಸೃಷ್ಟಿಕರ್ತನಾದ ದೇವರಿಗೆ ಪ್ರಭು ಎಂಬುದು ಮತ್ತೊಂದು ಹೆಸರೆಂದು ವಿವರಿಸಿ.

**ಕೀರ್ತನೆ 23:6** *'ನಿಶ್ಚಯವಾಗಿ ನನ್ನ ಜೀವಮಾನದಲ್ಲೆಲ್ಲಾ ನಿನ್ನ ಶುಭವೂ ಕೃಪೆಯೂ ನನ್ನೊಂದಿಗಿರುತ್ತವೆ. ನನ್ನ ಜೀವಮಾನವೆಲ್ಲಾ ಯೆಹೋವನ ಆಲಯದಲ್ಲೇ ವಾಸಿಸುವೆ.'*

# ಪಾಠ 7

## ಪದಗಳಿಲ್ಲದ ಸ್ಪರ್ಧೆ

ಮಕ್ಕಳನ್ನು ಎರಡು ತಂಡಗಳನ್ನಾಗಿ ಮಾಡಿ. ಮೊದಲನೆ ತಂಡಕ್ಕೆ ತಮ್ಮ ನಾಯಕನನ್ನು ಆರಿಸಿಕೊಳ್ಳಲು ಹೇಳಿ. ಮೊದಲನೆ ತಂಡದ ನಾಯಕನು ಮುಂದೆ ಬರಬೇಕು. ಮೊದಲನೆ ತಂಡದ ನಾಯಕನಿಗೆ ಬೈಬಲಿನ ಕಂಠಪಾಠ ಮಾಡುವ ವಚನದ ಮೊದಲನೆ ಭಾಗವನ್ನು ಹೇಳಿ: 'ನಿಶ್ಚಯವಾಗಿ ನನ್ನ ಜೀವಮಾನದಲ್ಲೆಲ್ಲಾ ನಿನ್ನ (ಸೃಷ್ಟಿಕರ್ತನಾದ ದೇವರು) ಶುಭವೂ ಕೃಪೆಯೂ ನನ್ನೊಂದಿಗಿರುತ್ತವೆ.' ಬೇರೆ ಯಾವ ಮಕ್ಕಳಿಗೂ ಅದು ಕೇಳಿಸದಂತೆ ನೋಡಿಕೊಳ್ಳಿ. ಬೈಬಲಿನ ಕಂಠಪಾಠ ಮಾಡುವ ವಚನವನ್ನು ಅಭಿನಯದ (ಬಾಯಿಂದ ಹೇಳದೆ) ಮೂಲಕ ತೋರಿಸುವಂತೆ ಮೊದಲನೆ ತಂಡದ ನಾಯಕನಿಗೆ ಹೇಳಿ. ಮೊದಲನೆ ತಂಡದ ಮಕ್ಕಳು ಆ ವಾಕ್ಯವನ್ನು ಊಹಿಸಲು ಪ್ರಯತ್ನಿಸಲಿ.

ಸ್ವಲ್ಪ ಸಮಯ ಕೊಟ್ಟರೂ ಮೊದಲನೆ ತಂಡಕ್ಕೆ ಆ ವಾಕ್ಯವನ್ನು ಊಹಿಸಲು ಸಾಧ್ಯವಾಗದಿದ್ದರೆ, ಎರಡನೆ ತಂಡದ ಮಕ್ಕಳಿಗೆ ಆ ವಾಕ್ಯವನ್ನು ಊಹಿಸಲು ಪ್ರಯತ್ನಿಸುವಂತೆ ತಿಳಿಸಿ. ಸ್ವಲ್ಪ ಸಮಯ ಕೊಟ್ಟರೂ ಎರಡನೆ ತಂಡಕ್ಕೆ ಆ ವಾಕ್ಯವನ್ನು ಊಹಿಸಲು ಸಾಧ್ಯವಾಗದಿದ್ದರೆ, ಮಕ್ಕಳಿಗೆ ಊಹಿಸಲು ಸಹಾಯಕವಾದ ಕೆಲವು ಸೂಚನೆಗಳನ್ನು ಕೊಡಿ.

ನೀವು ಮಕ್ಕಳಿಗೆ ಆ ವಾಕ್ಯವನ್ನು ತಿಳಿಸಿದ ಮೇಲೆ ಅಥವಾ ಅವರು ಸರಿಯಾಗಿ ಊಹಿಸಿದ ಮೇಲೆ, ಎರಡನೆ ತಂಡದ ನಾಯಕನು ಮುಂದೆ ಬರುವನು. ಎರಡನೆ ತಂಡದ ನಾಯಕನಿಗೆ ಬೈಬಲಿನ ಕಂಠಪಾಠ ಮಾಡುವ ವಚನದ ಎರಡನೆ ಭಾಗವನ್ನು ಹೇಳಿ: 'ನನ್ನ ಜೀವಮಾನವೆಲ್ಲಾ ಯೆಹೋವನ (ಸೃಷ್ಟಿಕರ್ತನಾದ ದೇವರ) ಆಲಯದಲ್ಲೇ ವಾಸಿಸುವೆ.' ಬೇರೆ ಯಾವ ಮಕ್ಕಳಿಗೂ ಅದು ಕೇಳಿಸದಂತೆ ನೋಡಿಕೊಳ್ಳಿ. ಬೈಬಲಿನ ಕಂಠಪಾಠ ಮಾಡುವ ವಚನವನ್ನು ಅಭಿನಯದ (ಬಾಯಿಂದ ಹೇಳದೆ) ಮೂಲಕ ತೋರಿಸುವಂತೆ ಎರಡನೆ ತಂಡದ ನಾಯಕನಿಗೆ ಹೇಳಿ. ಎರಡನೆ ತಂಡದ ಮಕ್ಕಳು ಆ ವಾಕ್ಯವನ್ನು ಊಹಿಸಲು ಪ್ರಯತ್ನಿಸಲಿ.

ಸ್ವಲ್ಪ ಸಮಯ ಕೊಟ್ಟರೂ ಎರಡನೆ ತಂಡಕ್ಕೆ ಆ ವಾಕ್ಯವನ್ನು ಊಹಿಸಲು ಸಾಧ್ಯವಾಗದಿದ್ದರೆ, ಮೊದಲನೆ ತಂಡದ ಮಕ್ಕಳಿಗೆ ಆ ವಾಕ್ಯವನ್ನು ಊಹಿಸಲು ಪ್ರಯತ್ನಿಸುವಂತೆ ತಿಳಿಸಿ. ಸ್ವಲ್ಪ ಸಮಯ ಕೊಟ್ಟರೂ ಮೊದಲನೆ ತಂಡಕ್ಕೆ ಆ ವಾಕ್ಯವನ್ನು ಊಹಿಸಲು ಸಾಧ್ಯವಾಗದಿದ್ದರೆ, ಮಕ್ಕಳಿಗೆ ಊಹಿಸಲು ಸಹಾಯಕವಾದ ಕೆಲವು ಸೂಚನೆಗಳನ್ನು ಕೊಡಿ.

ನೀವು ಮಕ್ಕಳಿಗೆ ಆ ವಾಕ್ಯವನ್ನು ತಿಳಿಸಿದ ಮೇಲೆ ಅಥವಾ ಅವರು ಸರಿಯಾಗಿ ಊಹಿಸಿದ ಮೇಲೆ, ಬೈಬಲಿನ ಕಂಠಪಾಠ ಮಾಡುವ ವಚನವನ್ನು ಹೇಳಲು ಮಕ್ಕಳಿಗೆ ತಿಳಿಸಿ.

ಸೃಷ್ಟಿಕರ್ತನಾದ ದೇವರು ನನಗೆ ಜೀವ ಕೊಡುವನು

## ಅನ್ವಯಿಸುಕೊಳ್ಳುವಿಕೆ

***ಸೃಷ್ಟಿಕರ್ತನಾದ ದೇವರು ನನಗೆ ಜೀವ ಕೊಡುವನು ಎಂದು ಉಪದೇಶಿಸುವ ಅನ್ವಯಿಸುಕೊಳ್ಳುವಿಕೆಯನ್ನು ಬಳಸಿ***

ಸೃಷ್ಟಿಕರ್ತನಾದ ದೇವರು ನಮಗೆ ಜೀವ ಕೊಡುವನು. ನಾವು ಆತನಿಗೆ ಮಾತ್ರ ಹಾಡುತ್ತೇವೆ ಯಾಕಂದರೆ ಆತನು ನಮಗೆ ಜೀವ ಕೊಡುವನು.

**ಪ್ರಾರ್ಥನೆ:** ಸೃಷ್ಟಿಕರ್ತನಾದ ದೇವರೇ, ನೀನು ನನ್ನನ್ನು ಪ್ರೀತಿಸುವುದಕ್ಕಾಗಿ ಮತ್ತು ನನಗೆ ಜೀವಶ್ವಾಸ ಊದಿದ್ದಕ್ಕಾಗಿ ನಿನಗೆ ವಂದನೆಗಳು. ನಿನ್ನ ಒಳ್ಳೆಯತನವು ಮತ್ತು ಕರುಣೆ ನನ್ನೊಂದಿಗೆ ಎಂದೆಂದಿಗೂ ಇರುವುದಕ್ಕಾಗಿ ನಿನಗೆ ವಂದನೆಗಳು. ಆಮೆನ್.

**ಬಹುಮಾನ:** ಪ್ರತಿಯೊಂದು ಮಗುವಿಗೆ ಅವರ ಸ್ವಂತಕ್ಕೆ *ಶುಭವಾರ್ತೆ ಕಥಾಪುಸ್ತಕ*—ಮೂರನೆ ಪ್ರತಿಯನ್ನು ಕೊಡಿ. ಪ್ರತಿಯೊಂದು ಮಗುವಿಗೆ ಅವರ ಸ್ವಂತ *ಶುಭವಾರ್ತೆ ಕಥಾಪುಸ್ತಕ*—ಮೂರನ್ನು ಓದಲು ಸಹಾಯಮಾಡಿ.

# ಪಾಠ 8



## ಒಂದು ಉಪದೇಶದ ಅಂಶ

***ಸೃಷ್ಟಿಕರ್ತನಾದ ದೇವರೇ ನಿಜವಾದ ದೇವರು***

ಸೃಷ್ಟಿಕರ್ತನಾದ ದೇವರೇ ನಿಜವಾದ ದೇವರು

## ಬೈಬಲಿನ ಕಥೆ

***ಸೃಷ್ಟಿಕರ್ತನಾದ ದೇವರೇ ನಿಜವಾದ ದೇವರು ಎಂದು ಉಪದೇಶಿಸುವ ಕಥೆಯನ್ನು ಬಳಸಿ***

**ಶುಭವಾರ್ತೆ ಕಥಾಪುಸ್ತಕ ನಾಲ್ಕು.** ಪುಟಗಳು 2-17. *ಪರಲೋಕದಿಂದ ಬೆಂಕಿ.*

2-5 ಪುಟಗಳಿಂದ ಕಥೆಯನ್ನು ಓದಿ, ನೀವು ಓದುವಾಗ ಮಕ್ಕಳಿಗೆ *ಶುಭವಾರ್ತೆ ಕಥಾಪುಸ್ತಕ–ನಾಲ್ಕರಲ್ಲಿರುವ* ಚಿತ್ರಗಳನ್ನು ತೋರಿಸಿ. ಪುಟ 6ರಲ್ಲಿ ನೀವು ಕ್ರಿಯಾತ್ಮಕ ಪದಗಳನ್ನು ಓದುವಾಗ ಅಭಿನಯಿಸಿ. ಉದಾಹರಣೆ: ಬೇರೆ ದೇವರುಗಳಿಗೆ ಹಾಡುವ ಜನರು ಹಾಡುತ್ತಾ (ಹಾಡುವಂತೆ ಅಭಿನಯಿಸಿ), ಪ್ರಾರ್ಥಿಸುತ್ತಾ (ಪ್ರಾರ್ಥಿಸುವಂತೆ ಅಭಿನಯಿಸಿ), ನರ್ತಿಸುತ್ತಾ (ನರ್ತಿಸುವಂತೆ ಅಭಿನಯಿಸಿ), ಮತ್ತು ನೆಗೆಯುತ್ತಾ (ಮೇಲಕ್ಕೆ ಕೆಳಕ್ಕೆ...ಮೇಲಕ್ಕೆ ಕೆಳಕ್ಕೆ...ಮೇಲಕ್ಕೆ ಕೆಳಕ್ಕೆ ನೆಗೆಯಿರಿ) ಇರುವುದು ನನಗೆ ಕಾಣುತ್ತಿದೆ.

7-9 ಪುಟಗಳಿಂದ ಮಕ್ಕಳಿಗೆ ಕಥೆಯನ್ನು ಓದಿ, ನೀವು ಓದುವಾಗ ಮಕ್ಕಳಿಗೆ *ಶುಭವಾರ್ತೆ ಕಥಾಪುಸ್ತಕ–ನಾಲ್ಕರಲ್ಲಿರುವ* ಚಿತ್ರಗಳನ್ನು ತೋರಿಸಿ. ಪುಟ 10ರಲ್ಲಿ ನೀವು ಕ್ರಿಯಾತ್ಮಕ ಪದಗಳನ್ನು ಓದುವಾಗ ಅಭಿನಯಿಸಿ. ಉದಾಹರಣೆ: ಬೇರೆ ದೇವರುಗಳಿಗೆ ಹಾಡುವ ಜನರು ಗಟ್ಟಿಯಾಗಿ ಪ್ರಾರ್ಥಿಸುತ್ತಾ (ಗಟ್ಟಿಯಾಗಿ ಪ್ರಾರ್ಥಿಸುತ್ತಿರುವಂತೆ ಅಭಿನಯಿಸಿ), ಇನ್ನಷ್ಟು ನರ್ತಿಸುತ್ತಾ (ಬಹಳ ಸಮಯ ನರ್ತಿಸುವಂತೆ ಅಭಿನಯಿಸಿ), ಮತ್ತು ಇನ್ನೂ ಎತ್ತರಕ್ಕೆ ನೆಗೆಯುತ್ತಾ (ಬಹು ಮೇಲಕ್ಕೆ ಕೆಳಕ್ಕೆ...ಮೇಲಕ್ಕೆ ಕೆಳಕ್ಕೆ...ಮೇಲಕ್ಕೆ ಕೆಳಕ್ಕೆ ನೆಗೆಯಿರಿ) ಇರುವುದು ನನಗೆ ಕಾಣುತ್ತಿದೆ.

11-12 ಪುಟಗಳಿಂದ ಮಕ್ಕಳಿಗೆ ಕಥೆಯನ್ನು ಓದಿ, ನೀವು ಓದುವಾಗ ಮಕ್ಕಳಿಗೆ *ಶುಭವಾರ್ತೆ ಕಥಾಪುಸ್ತಕ–ನಾಲ್ಕರಲ್ಲಿರುವ* ಚಿತ್ರಗಳನ್ನು ತೋರಿಸಿ. ಪುಟ 13ರಲ್ಲಿ ನೀವು ಕ್ರಿಯಾತ್ಮಕ ಪದಗಳನ್ನು ಓದುವಾಗ ಅಭಿನಯಿಸಿ. ಉದಾಹರಣೆ: ಯಜ್ಞವೇದಿಕೆಯ ಸುತ್ತಲೂ ನೀರನ್ನು ಸುರಿಯುತ್ತಾ (ಬಾವಿಯಿಂದ ನೀರನ್ನು ಪಂಪ್ ಮಾಡಿ ಕೊಡದಲ್ಲಿ ನೀರನ್ನು ಹೊತ್ತುಕೊಂಡು ಬಂದು ವೇದಿಕೆಯ ಸುತ್ತಲೂ ನೀರನ್ನು ಸುರಿಯುವಂತೆ ಅಭಿನಯಿಸಿ) ಇರುವುದು ನನಗೆ ಕಾಣುತ್ತಿದೆ.

14-17 ಪುಟಗಳಿಂದ ಮಕ್ಕಳಿಗೆ ಕಥೆಯನ್ನು ಓದಿ, ನೀವು ಓದುವಾಗ ಮಕ್ಕಳಿಗೆ *ಶುಭವಾರ್ತೆ ಕಥಾಪುಸ್ತಕ–ನಾಲ್ಕರಲ್ಲಿರುವ* ಚಿತ್ರಗಳನ್ನು ತೋರಿಸಿ ಮತ್ತು ಅಭಿನಯಿಸಿ.

1, 2, 3 ಕಥೆಯನ್ನು ಆರಂಭಿಸಿ...

# ಪಾಠ 8



ಸೃಷ್ಟಿಕರ್ತನಾದ ದೇವರೇ ನಿಜವಾದ ದೇವರು

**ಪ್ರಶ್ನೋತ್ತರಗಳ ಸ್ಪರ್ಧೆ**

ಮಕ್ಕಳಿಗೆ ಕಥೆಯ ಬಗ್ಗೆ ಪ್ರಶ್ನೆಗಳನ್ನು ಕೇಳಿ. ಮಕ್ಕಳ ಎರಡು ತಂಡಗಳಿರಲಿ. ಮೊದಲನೆ ತಂಡಕ್ಕೆ ಒಂದು ಪ್ರಶ್ನೆಯನ್ನು ಕೇಳಿ. ಮೊದಲನೆ ತಂಡದ ಮಕ್ಕಳೆಲ್ಲ ಒಂದು ಉತ್ತರವನ್ನು ನಿರ್ಧರಿಸಬೇಕು. ಅವರು ಸರಿಯಾದ ಉತ್ತರ ಕೊಟ್ಟರೆ, ಅವರ ತಂಡಕ್ಕೆ ಒಂದು ಅಂಕೆಯನ್ನು ಕೊಡಿ. ಮೊದಲನೆ ತಂಡ ಸರಿಯಾದ ಉತ್ತರ ಕೊಡದಿದ್ದರೆ, ಎರಡನೆ ತಂಡಕ್ಕೆ ಅದೇ ಪ್ರಶ್ನೆಯನ್ನು ಕೇಳಿ. ಎರಡನೆ ತಂಡದ ಮಕ್ಕಳೆಲ್ಲ ಒಂದು ಉತ್ತರವನ್ನು ನಿರ್ಧರಿಸಬೇಕು. ಅವರು ಸರಿಯಾದ ಉತ್ತರ ಕೊಟ್ಟರೆ, ಅವರ ತಂಡಕ್ಕೆ ಒಂದು ಅಂಕೆಯನ್ನು ಕೊಡಿ.

ದೊರೆತ ಅಂಕೆಗಳನ್ನು ಕಪ್ಪುಹಲಗೆಯ ಮೇಲೆ ಅಥವಾ ಒಂದು ಕಾಗದ ಮೇಲೆ ಬರೆದು ಮೊತ್ತ ಹಾಕಿ.

ಬಳಿಕ ಎರಡನೆ ತಂಡಕ್ಕೆ ಕಥೆಯ ಬಗ್ಗೆ ಮತ್ತೊಂದು ಪ್ರಶ್ನೆಯನ್ನು ಕೇಳಿ. ಎರಡನೆ ತಂಡದ ಮಕ್ಕಳೆಲ್ಲ ಒಂದು ಉತ್ತರವನ್ನು ನಿರ್ಧರಿಸಬೇಕು. ಅವರು ಸರಿಯಾದ ಉತ್ತರ ಕೊಟ್ಟರೆ, ಅವರ ತಂಡಕ್ಕೆ ಒಂದು ಅಂಕೆಯನ್ನು ಕೊಡಿ. ಎರಡನೆ ತಂಡ ಸರಿಯಾದ ಉತ್ತರ ಕೊಡದಿದ್ದರೆ, ಮೊದಲನೆ ತಂಡಕ್ಕೆ ಅದೇ ಪ್ರಶ್ನೆಯನ್ನು ಕೇಳಿ. ಮೊದಲನೆ ತಂಡದ ಮಕ್ಕಳೆಲ್ಲ ಒಂದು ಉತ್ತರವನ್ನು ನಿರ್ಧರಿಸಬೇಕು. ಅವರು ಸರಿಯಾದ ಉತ್ತರ ಕೊಟ್ಟರೆ, ಅವರ ತಂಡಕ್ಕೆ ಒಂದು ಅಂಕೆಯನ್ನು ಕೊಡಿ. ಕಥೆಯ ಬಗ್ಗೆ ಪ್ರಶ್ನೆಗಳನ್ನು ಕೇಳುವಾಗ, ಒಮ್ಮೆ ಮೊದಲನೆ ತಂಡಕ್ಕೆ ಇನ್ನೊಮ್ಮೆ ಎರಡನೆ ತಂಡಕ್ಕೆ ಕೇಳಿ.

ಒಂದು ಮಗುವು ತಪ್ಪು ಉತ್ತರ ಕೊಟ್ಟರೆ, ಆ ಮಗುವನ್ನು ಪ್ರೋತ್ಸಾಹಪಡಿಸಿ, ಒಳ್ಳೆಯ ಪ್ರಯತ್ನ ಆದರೆ ನಾನು ಅಪೇಕ್ಷಿಸುತ್ತಿರುವ ಉತ್ತರ ಅದಲ್ಲ ಎಂದು ಹೇಳಿ. ಒಂದು ಮಗುವು ಸರಿಯಾದ ಉತ್ತರ ಕೊಟ್ಟರೆ, ಸರಿಯಾದ ಉತ್ತರ! ಶಬಾಷ್! ಎಂದು ಹೇಳಿ.

ಉತ್ತರದೊಡನೆ ನೀವು ಕೇಳಬಹುದಾದ ಕೆಲವು ಪ್ರಶ್ನೆಗಳು ಇಲ್ಲಿವೆ.

**ಎಲೀಯನು ಯಾರಿಗೆ ಹಾಡಿದನು?** ಸೃಷ್ಟಿಕರ್ತನಾದ ದೇವರಿಗೆ.

**ಜನರು ಯಾರಿಗೆ ಹಾಡಿದರು?** ಇತರ ದೇವರುಗಳಿಗೆ.

**ಬೇರೆ ದೇವರುಗಳು ಏನು ಮಾಡಿದರು?** ಏನೂ ಇಲ್ಲ.

**ಬೇರೆ ದೇವರುಗಳು ಪರೇಲೋಕದಿಂದ ಬೆಂಕಿಯನ್ನು ಬರಮಾಡಿದರೇ?** ಇಲ್ಲ.

**ಸೃಷ್ಟಿಕರ್ತನಾದ ದೇವರು ಪರಲೋಕದಿಂದ ಬೆಂಕಿಯನ್ನು ಬರಮಾಡಿದನೇ?** ಹೌದು.

**ಬೇರೆ ದೇವರುಗಳು ಇತರ ದೇವರುಗಳಿಗೆ ಹಾಡುವ ಜನರಿಗೆ ಉತ್ತರ ಕೊಟ್ಟರೇ?** ಇಲ್ಲ.

**ಸೃಷ್ಟಿಕರ್ತನಾದ ದೇವರು ಸೃಷ್ಟಿಕರ್ತನಾದ ದೇವರಿಗೆ ಮಾತ್ರ ಹಾಡುವ ಜನರಿಗೆ ಉತ್ತರ ಕೊಟ್ಟನೇ?** ಹೌದು.

# ಪಾಠ 8


**ಸೃಷ್ಟಿಕರ್ತನಾದ ದೇವರ ಬಗ್ಗೆ ಈ ಕಥೆಯಿಂದ ನೀವು ಏನು ಕಲಿತುಕೊಂಡಿರಿ?**

ನಾವು ಸೃಷ್ಟಿಕರ್ತನಾದ ದೇವರಿಗೆ ಮಾತ್ರ ಹಾಡುವಾಗ ಆತನು ನಮಗೆ ಉತ್ತರಿಸುವನು.

ಪರಲೋಕದಿಂದ ಬೆಂಕಿಯನ್ನು ಬರಮಾಡಲು ಸೃಷ್ಟಿಕರ್ತನಾದ ದೇವರಿಗೆ ಮಾತ್ರ ಶಕ್ತಿಯಿದೆ.

ಸೃಷ್ಟಿಕರ್ತನಾದ ದೇವರಿಗೆ ಮಾತ್ರ ಹಾಡಿರಿ (ಆರಾಧಿಸಿ), ಯಾಕಂದರೆ ಆತನೇ ನಿಜವಾದ ದೇವರು.

'ಸೃಷ್ಟಿಕರ್ತನಾದ ದೇವರಿಗೆ ಮಾತ್ರ ಹಾಡಿರಿ' ಅಂದರೆ 'ಸೃಷ್ಟಿಕರ್ತನಾದ ದೇವರನ್ನು ಮಾತ್ರ ಆರಾಧಿಸಿರಿ' ಎಂದರ್ಥವೆಂದು ವಿವರಿಸಿ.



## ಅಭಿನಯಾತ್ಮಕ ಹಾಡು

***ಸೃಷ್ಟಿಕರ್ತನಾದ ದೇವರೇ ನಿಜವಾದ ದೇವರು ಎಂದು ಉಪದೇಶಿಸುವ ಅಭಿನಯಾತ್ಮಕ ಹಾಡನ್ನು ಬಳಸಿ***

ನಾನ ನಾ ನಾನ ನಾ ನಾನ ನಾ (2)
ಪೂರ್ವದಿಂದ ಪಶ್ಚಿಮದವರೆಗೂ
ಸೃಷ್ಟಿಕರ್ತ ದೇವರೇ ಶ್ರೇಷ್ಠನು.

ನಾನ ನಾ ನಾನ ನಾ ನಾನ ನಾ (2)
ಉತ್ತರದಿಂದ ದಕ್ಷಿಣದವರೆಗೂ
ನಾನಾತನನ್ನು ಬಾಯಾರೆ ಸ್ತುತಿಸುವೆ.

## ದೃಷ್ಟಾಂತ ಪಾಠ

***ಸೃಷ್ಟಿಕರ್ತನಾದ ದೇವರೇ ನಿಜವಾದ ದೇವರು ಎಂದು ಉಪದೇಶಿಸುವ ದೃಷ್ಟಾಂತ ಪಾಠವನ್ನು ಬಳಸಿ***

ಸೃಷ್ಟಿಕರ್ತನಾದ ದೇವರೇ ನಿಜವಾದ ದೇವರು

ನಿಮಗೆ ಸಹಾಯಕನಾಗಿರಲು ಒಂದು ಮಗುವಿಗೆ ಹೇಳಿ. ಆಟದ ನಿಯಮಗಳನ್ನು ವಿವರಿಸಿ.

ನೀವು (ಟೀಚರ್) ಒಂದು ಪದವನ್ನು (ದೇವರಿಂದ ಸೃಷ್ಟಿಸಲ್ಪಟ್ಟು ಪ್ರತಿಯೊಬ್ಬರಿಗೂ ಕಾಣುವಂಥ ಯಾವುದಾದರೂ ಒಂದನ್ನು) ಸಹಾಯಕನ ಕಿವಿಯಲ್ಲಿ ಪಿಸುಗುಟ್ಟಿ. ಬಳಿಕ ಸಹಾಯಕನು ಮಕ್ಕಳ ಮುಂದೆ ನಿಂತುಕೊಂಡು, 'ನನಗೆ ಯಾವುದೋ ಒಂದು ಕಾಣುತ್ತಿದೆ, ಅದರ (ಆ ವಸ್ತುವಿನ ಬಣ್ಣ) ಬಣ್ಣವಿದು' ಎಂದು ಹೇಳಲಿ.

*ಉದಾಹರಣೆ:* ಸೂರ್ಯ ಎಂದು ಪಿಸುಗುಟ್ಟಿ. ಬಳಿಕ ಸಹಾಯಕನು, 'ಹಳದಿ ಬಣ್ಣದ ಯಾವುದೋ ಒಂದು ನನಗೆ ಕಾಣುತ್ತಿದೆ' ಎಂದು ಹೇಳಲಿ.

ಉಳಿದ ಮಕ್ಕಳು ಸುತ್ತಮುತ್ತ ನೋಡುತ್ತಾ 'ಹಳದಿ ಬಣ್ಣದ ಅದು' ಯಾವುದೆಂದು ಊಹಿಸಬೇಕು.

ಸರಿಯಾಗಿ ಮೊದಲು ಊಹಿಸುವವನು ಮುಂದಿನ ಸರದಿಯಲ್ಲಿ ಸಹಾಯಕನಾಗಿರಲಿ.

ಮಕ್ಕಳು ಇಷ್ಟಪಡುವಷ್ಟು ಸಲ ಸರದಿಗಳನ್ನು ಮಾಡಿ.

ಎಲ್ಲ ಸರದಿಗಳು ಮುಗಿದ ಮೇಲೆ, ಪ್ರತಿಯೊಂದನ್ನು ಸೃಷ್ಟಿಕರ್ತನಾದ ದೇವರು ಸೃಷ್ಟಿಸಿದನೆಂದು ವಿವರಿಸಿ. ಸೃಷ್ಟಿಕರ್ತನಾದ ದೇವರಿಗೆ ಪ್ರತಿಯೊಂದರ ಮೇಲೆ ಅಧಿಕಾರವಿದೆ ಯಾಕಂದರೆ ಸೃಷ್ಟಿಕರ್ತನಾದ ದೇವರೊಬ್ಬನೇ ಪ್ರತಿಯೊಂದನ್ನು ಸೃಷ್ಟಿಸಿದನು. ಸೃಷ್ಟಿಕರ್ತನಾದ ದೇವರೊಬ್ಬನೇ ನಿಜವಾದ ದೇವರು, ಯಾಕಂದರೆ ಸೃಷ್ಟಿಕರ್ತನಾದ ದೇವರೊಬ್ಬನಿಗೆ ಮಾತ್ರ ಅಧಿಕಾರವಿದೆ!

# ಪಾಠ 8

## ಬೈಬಲ್ ವಚನವನ್ನು ಕಂಠಪಾಠ ಮಾಡುವ ಆಟ

***ಸೃಷ್ಟಿಕರ್ತನಾದ ದೇವರೇ ನಿಜವಾದ ದೇವರು ಎಂದು ಉಪದೇಶಿಸುವ ಬೈಬಲ್ ವಚನವನ್ನು ಬಳಸಿ***



ಸೃಷ್ಟಿಕರ್ತನಾದ ದೇವರಿಗೆ ಪ್ರಭು ಎಂಬುದು ಮತ್ತೊಂದು ಹೆಸರೆಂದು ವಿವರಿಸಿ.

**1 ರಾಜರುಗಳು 18:39** *‘ಈ ದೃಶ್ಯವನ್ನು ಜನರೆಲ್ಲರೂ ನೋಡಿದರು. ಜನರು ನೆಲಕ್ಕೆ ಬಾಗಿ ನಮಸ್ಕರಿಸುತ್ತಾ, “ಯೆಹೋವನೇ ದೇವರು! ಯೆಹೋವನೇ ದೇವರು!” ಎಂದು ಕೂಗಿದರು.’*

**ಉಪಕರಣಗಳು:** 7 ಬಲೂನುಗಳು, 7 ಕಲ್ಲುಗಳು ಮತ್ತು ಅಳಿಸಲಾಗದ ಕಪ್ಪು ಇಂಕಿನ ಪೆನ್ನು.

**ಚಿತ್ರವಾಕ್ಯಗಳ ಪಜಲ್ :** ಏಳು ಬಲೂನುಗಳಿಗೆ ಗಾಳಿ ಊದಲು ಮತ್ತು ಗಾಳಿಹೋಗದಂತೆ ಅದರ ಬಾಯಿಗೆ ದಾರಕಟ್ಟಲು ಮಕ್ಕಳಿಗೆ ಹೇಳಿ. ಪ್ರತಿಯೊಂದು ಬಲೂನನ್ನು ತೆಗೆದುಕೊಂಡು ಬೈಬಲಿನ ಕಂಠಪಾಠ ಮಾಡುವ ವಚನವನ್ನು ಮತ್ತು ಇಲ್ಲಿ ತೋರಿಸಿರುವ ಚಿತ್ರಗಳನ್ನು ಅದರ ಮೇಲೆ ಬರೆಯಿರಿ. ಮಕ್ಕಳು ಓದಲು ಇನ್ನೂ ಕಲಿತಿಲ್ಲದಿದ್ದರೆ, ಪದಗಳ ಬದಲು ದೃಷ್ಟಾಂತಗಳನ್ನು ಬಳಸಿ.

ಮಕ್ಕಳಲ್ಲಿ ಒಬ್ಬ ಸಹಾಯಕನನ್ನು ಆರಿಸಿಕೊಳ್ಳಿ, ಅವನು ಮುಂದೆ ಬಂದು ಮಕ್ಕಳಿಗೆಲ್ಲ ಬೆನ್ನುಮಾಡಿ ನಿಂತುಕೊಳ್ಳಲಿ. ಮೊದಲನೆ ಬಲೂನನ್ನು ಮಕ್ಕಳ ಮಧ್ಯಕ್ಕೆ ಎಸೆದಾಗ, ಸಹಾಯಕನು ‘ಸ್ಟಾಪ್’ ಎಂದು ಕೂಗಬೇಕು, ಆಗ ಬಲೂನು ಯಾರಿಗೆ ಸಿಕ್ಕಿರುತ್ತದೋ ಅವನು ಅದನ್ನು ಮುಂದೆ ತಂದು ಬಲೂನಿನ ಮೇಲೆ ಬರೆದಿರುವ ಬೈಬಲಿನ ಕಂಠಪಾಠ ಮಾಡುವ ವಚನವನ್ನು ಮತ್ತು ಚಿತ್ರಗಳನ್ನು ತೋರಿಸಬೇಕು.

ಇದೇ ರೀತಿಯಲ್ಲಿ ಏಳು ಬಲೂನುಗಳನ್ನೂ ಎಸೆಯಬೇಕು, ಏಳು ಮಕ್ಕಳು ಅವುಗಳನ್ನು ಹಿಡಿದುಕೊಂಡು ಬಂದು ಬೈಬಲಿನ ಕಂಠಪಾಠ ಮಾಡುವ ವಚನವನ್ನು ಮತ್ತು ಚಿತ್ರಗಳನ್ನು ತೋರಿಸಬೇಕು. ಪ್ರತಿಯೊಂದು ಬಲೂನಿಗೂ ದಾರವನ್ನು ಮತ್ತು ಬಲೂನು ಹಾರಿಹೋಗದಂತೆ ದಾರಕ್ಕೆ ಒಂದು ಕಲ್ಲನ್ನು ಕಟ್ಟಿ, ಆ ಕಲ್ಲನ್ನು ನೆಲದ ಮೇಲಿಡಿ, ಆಗ ಆ ಏಳು ಮಕ್ಕಳು ಉಳಿದೆಲ್ಲ ಮಕ್ಕಳೊಡನೆ ಕುಳಿತುಕೊಳ್ಳಬಹುದು. ಮಕ್ಕಳಲ್ಲಿ ಯಾರು ಬೈಬಲಿನ ಕಂಠಪಾಠ ಮಾಡುವ ವಚನದ ಪದಗಳನ್ನು ಕ್ರಮಬದ್ಧವಾಗಿ ಜೋಡಿಸಿ ಬೈಬಲಿನ ಕಂಠಪಾಠ ಮಾಡುವ ವಚನವನ್ನು ಮಾಡಬಲ್ಲರೆಂದು ಕೇಳಿ.

ಸೃಷ್ಟಿಕರ್ತನಾದ
ದೇವರೇ
ನಿಜವಾದ
ದೇವರು

ಬಲೂನಿನ ಮೇಲಿರುವ ಬೈಬಲಿನ ಕಂಠಪಾಠ ಮಾಡುವ ವಚನ ಯಾವುದೆಂದು ಊಹಿಸಲು ಪ್ರಯತ್ನಿಸಬೇಕೆಂದು ಮಕ್ಕಳಿಗೆ ಹೇಳಿ. ಒಂದು ಸಲಕ್ಕೆ ಒಂದು ಬಲೂನನ್ನು ತೆಗೆದುಕೊಳ್ಳಿ. ಸ್ವಲ್ಪ ಸಮಯ ಕೊಟ್ಟರೂ ಅವರಿಗೆ ಊಹಿಸಲು ಸಾಧ್ಯವಾಗದಿದ್ದರೆ, ಪಜಲನ್ನು ಬಗೆಹರಿಸಲು ಸಹಾಯಕವಾದ ಸೂಚನೆಗಳನ್ನು ಕೊಡಿ. ಬೈಬಲಿನ ಕಂಠಪಾಠ ಮಾಡುವ ವಚನವನ್ನು ಮೂರು ಸಲ ಮತ್ತೆಮತ್ತೆ ಹೇಳಿ.

## ಅನ್ವಯಿಸುಕೊಳ್ಳುವಿಕೆ


***ಸೃಷ್ಟಿಕರ್ತನಾದ ದೇವರೇ ನಿಜವಾದ ದೇವರು ಎಂದು ಉಪದೇಶಿಸುವ ಅನ್ವಯಿಸುಕೊಳ್ಳುವಿಕೆಯನ್ನು ಬಳಸಿ***

ಸೃಷ್ಟಿಕರ್ತನಾದ ದೇವರೇ ನಿಜವಾದ ದೇವರು. ಸೃಷ್ಟಿಕರ್ತನಾದ ದೇವರೊಬ್ಬನೇ ಆರಾಧಿಸಲ್ಪಡಲು ಯೋಗ್ಯನಾಗಿದ್ದಾನೆ ಯಾಕಂದರೆ ಸೃಷ್ಟಿಕರ್ತನಾದ ದೇವರೇ ನಿಜವಾದ ದೇವರು.

**ಸಾಕ್ಷಿಕೊಡಿ:** ಒಮ್ಮೆ ದೇವರು ನಿಮ್ಮ ಪ್ರಾರ್ಥನೆಗೆ ಉತ್ತರಿಸಿದ್ದರ ಬಗ್ಗೆ ಹೇಳಿ.

**ಪ್ರಾರ್ಥನೆ:** ಸೃಷ್ಟಿಕರ್ತನಾದ ದೇವರೇ, ನೀನು ನಿಜವಾದ ದೇವರು ಎಂದು ನನಗೆ ತೋರಿಸಿದ್ದಕ್ಕಾಗಿ ನಿನಗೆ ವಂದನೆಗಳು. ನೀನು ನನ್ನನ್ನು ಪ್ರೀತಿಸುವುದಕ್ಕಾಗಿ ನಿನಗೆ ವಂದನೆಗಳು. ನೀನು ನನಗೆ ಉತ್ತರ ಕೊಡುವುದಕ್ಕಾಗಿ ನಿನಗೆ ವಂದನೆಗಳು. ಆಮೆನ್.

# ಪಾಠ 9



## ಒಂದು ಉಪದೇಶದ ಅಂಶ

***ಸೃಷ್ಟಿಕರ್ತನಾದ ದೇವರನ್ನು ಮಾತ್ರ ಆರಾಧಿಸಿ***

ಸೃಷ್ಟಿಕರ್ತನಾದ ದೇವರನ್ನು ಮಾತ್ರ ಆರಾಧಿಸಿ

## ಬೈಬಲಿನ ಕಥೆ

***ಸೃಷ್ಟಿಕರ್ತನಾದ ದೇವರನ್ನು ಮಾತ್ರ ಆರಾಧಿಸಿ ಎಂದು ಉಪದೇಶಿಸುವ ಕಥೆಯನ್ನು ಬಳಸಿ***

**ಶುಭವಾರ್ತೆ ಕಥಾಪುಸ್ತಕ ನಾಲ್ಕು.** ಪುಟಗಳು 18-32. *ಬೆಂಕಿಕೊಂಡ.*

ಕಥೆಯನ್ನು ಮಕ್ಕಳೊಡನೆ ನಾಟಕದ ಮೂಲಕ ಅಭಿನಯಿಸಿ. ನಾವೆಲ್ಲರೂ 'ಬೆಂಕಿಕೊಂಡ' ಎಂಬ ನಾಟಕವನ್ನು ಅಭಿನಯಿಸೋಣ ಎಂದು ಮಕ್ಕಳಿಗೆ ವಿವರಿಸಿ.

**ಪಾತ್ರಧಾರಿಗಳು:** ಕಥೆಗಾರ ಮತ್ತು ನಿರ್ದೇಶಕ (ಟೀಚರ್ ಆಗಿರುವ ನೀವು). ಸೃಷ್ಟಿಕರ್ತನಾದ ದೇವರ ಪಾತ್ರಧಾರಿಯಾದ ಒಬ್ಬನು (ಮಕ್ಕಳಲ್ಲಿ ಒಬ್ಬರು). ಮೂರು ಬಾಲಕರು (ಮಕ್ಕಳಲ್ಲಿ ಮೂವರು). ರಾಜನು (ಮಕ್ಕಳಲ್ಲಿ ಒಬ್ಬರು). ಬೆಂಕಿಕೊಂಡ (ಈ ನಾಟಕದಲ್ಲಿ ಪಾತ್ರಧಾರಿಗಳಲ್ಲದ ಎಲ್ಲ ಮಕ್ಕಳು).


'ಬೆಂಕಿಕೊಂಡ' ವಾಗಿರುವ ಮಕ್ಕಳಿಗೆ ಕೈಗಳನ್ನು ಹಿಡಿದುಕೊಂಡು ದೊಡ್ಡ ವೃತ್ತವನ್ನು ಮಾಡಲು ಹೇಳಿ. ಕಥೆಗಾರನು (ನೀವು) ಕಥೆಯನ್ನು ಹೇಳಲು ಆರಂಭಿಸಿದಾಗ, ಅವರು ನಿಧಾನವಾಗಿ ವೃತ್ತಾಕಾರದಲ್ಲಿ ನಡೆಯಲಿ. ಕಥೆಯಲ್ಲಿ ಯಾರಾದರೂ 'ಬೆಂಕಿ' ಎಂದಾಗ, ವೃತ್ತಾಕಾರದಲ್ಲಿರುವ ಮಕ್ಕಳು, 'ಕಾವೇರಿದೆ', 'ಕಾವೇರಿದೆ', 'ಕಾವೇರಿದೆ' ಎಂದು ಹೇಳಲಿ. ಆರಂಭದಲ್ಲಿ ಕಥೆಗಾರ, ರಾಜನು, ಮೂರು ಮಕ್ಕಳು, ಸೃಷ್ಟಿಕರ್ತನಾದ ದೇವರ ಪಾತ್ರಧಾರಿಯಾದ ಒಬ್ಬನು ವೃತ್ತದ (ಬೆಂಕಿಕೊಂಡ) ಹೊರಗಿರಲಿ.

*ಶುಭವಾರ್ತೆ ಕಥಾಪುಸ್ತಕ—ನಾಲ್ಕರಿಂದ* ಓದಿ ಕಥೆ ಹೇಳಿ. ಪುಟಗಳು 18-32. ನೀವು ಓದುತ್ತಾ ಕಥೆ ಹೇಳುವಾಗ, ಪಾತ್ರಧಾರಿಗಳಿಗೆ ನಾಟಕದಲ್ಲಿ ತಮ್ಮ ಪಾತ್ರಗಳನ್ನು ಅಭಿನಯಿಸಲು ನಿರ್ದೇಶನ ಮಾಡಿ. ಪಾತ್ರಧಾರಿಗಳಾದ ಮಕ್ಕಳು ಓದಬಲ್ಲವರಾಗಿದ್ದರೆ, *ಶುಭವಾರ್ತೆ ಕಥಾಪುಸ್ತಕ—ನಾಲ್ಕರ* ಪ್ರತಿಯನ್ನು ಅವರಿಗೆ ಕೊಟ್ಟು, ಕಥೆಯನ್ನು ಅನುಸರಿಸಲು ಮತ್ತು ತಮ್ಮ ಪಾತ್ರದ ವಾಕ್ಯಗಳನ್ನು ಓದಲು ಹೇಳಿ.

*ಉದಾಹರಣೆ:* ಪುಟ 19ರಿಂದ, 'ರಾಜನು ಜನರಿಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ' ಎಂದು ಓದಿಹೇಳಿ, ಬಳಿಕ ರಾಜನ ಪಾತ್ರಧಾರಿಯಾದ ಮಗುವಿನ ಕಡೆಗೆ ಬೆರಳುಮಾಡಿ. ರಾಜನ ಪಾತ್ರಧಾರಿಯಾದ ಮಗುವು, 'ಚಿನ್ನದ ಪ್ರತಿಮೆಗೆ ಹಾಡಿ, ಇಲ್ಲವಾದರೆ ನಾನು ನಿಮ್ಮನ್ನು ಬೆಂಕಿಗೆ ಎಸೆಯುವೆನು' ಎಂದು ಓದಿಹೇಳಲಿ.

# ಪಾಠ 9





ಯಾರಾದರೂ 'ಬೆಂಕಿ' ಎಂದು ಓದಿಹೇಳಿದಾಗ ಕಥೆಯನ್ನು ನಿಲ್ಲಿಸಬೇಕೆಂಬುದು ಜ್ಞಾಪಕದಲ್ಲಿರಲಿ, ಅಲ್ಲದೆ ವೃತ್ತಾಕಾರದಲ್ಲಿರುವ ಮಕ್ಕಳಿಗೆ ಬೆರಳುಮಾಡಿ. ವೃತ್ತಾಕಾರದಲ್ಲಿರುವ ಮಕ್ಕಳು (ಬೆಂಕಿಕೊಂಡ) ತಮ್ಮ ಕೈಗಳನ್ನು ಮೇಲೆತ್ತಿ, 'ಕಾವೇರಿದೆ', 'ಕಾವೇರಿದೆ', 'ಕಾವೇರಿದೆ' ಎಂದು ಹೇಳಲಿ. ಅವರು ಹೀಗೆ ಮಾಡಿದ ಮೇಲೆ ಕಥೆ ಓದಿಹೇಳುವುದನ್ನು ಮುಂದುವರಿಸಿ.

1, 2, 3, ನಾಟಕವನ್ನು ಆರಂಭಿಸಿ...

**ಸೃಷ್ಟಿಕರ್ತನಾದ ದೇವರನ್ನು ಮಾತ್ರ ಆರಾಧಿಸಿ**

*ಬೆಂಕಿಕೊಂಡ*ವಾಗಿರುವ ಮಕ್ಕಳು ಕೈಗಳನ್ನು ಹಿಡಿದುಕೊಂಡು ವೃತ್ತಾಕಾರದಲ್ಲಿ ನಡೆಯಲು ಆರಂಭಿಸುವರು. ಕಥೆಯನ್ನು ಓದಿಹೇಳಲು ಆರಂಭಿಸಿ.

ನಾಟಕವು ಮುಗಿದ ಮೇಲೆ, ಮಕ್ಕಳಿಗೆ ಕೆಲವು ಪ್ರಶ್ನೆಗಳನ್ನು ಕೇಳಿ. ಒಂದು ಮಗುವು ತಪ್ಪು ಉತ್ತರ ಕೊಟ್ಟರೆ, ಆ ಮಗುವನ್ನು ಪ್ರೋತ್ಸಾಹಪಡಿಸಿ, ಒಳ್ಳೆಯ ಪ್ರಯತ್ನ ಆದರೆ ನಾನು ಅಪೇಕ್ಷಿಸುತ್ತಿರುವ ಉತ್ತರ ಅದಲ್ಲ ಎಂದು ಹೇಳಿ.

ಒಂದು ಮಗುವು ಸರಿಯಾದ ಉತ್ತರ ಕೊಟ್ಟರೆ, ಸರಿಯಾದ ಉತ್ತರ! ಶಬಾಷ್! ಎಂದು ಹೇಳಿ. ಒಂದು ಮಗುವು ಸರಿಯಾದ ಉತ್ತರ ಕೊಡುವ ತನಕ ಅದೇ ಪ್ರಶ್ನೆಯನ್ನು ಕೇಳುತ್ತಿರಿ.

ಕಥೆಯ ಬಗ್ಗೆ ನೀವು ಕೇಳಬಹುದಾದ ಕೆಲವು ಪ್ರಶ್ನೆಗಳು ಇಲ್ಲಿವೆ.


**ಮೂರು ಬಾಲಕರನ್ನು ರಾಜನು ಯಾಕೆ ಬೆಂಕಿಗೆ ಎಸೆದನು?**
ಮೂರು ಬಾಲಕರು ಚಿನ್ನದ ಪ್ರತಿಮೆಗೆ ಹಾಡುವುದಿಲ್ಲ.


**ಮೂರು ಬಾಲಕರನ್ನು ಬೆಂಕಿಯಲ್ಲಿ ಯಾರು ಭೇಟಿಯಾದರು?**
ಸೃಷ್ಟಿಕರ್ತನಾದ ದೇವರಂತಿದ್ದ ಒಬ್ಬನು.

**ಮೂರು ಬಾಲಕರಿಗೆ ಬೆಂಕಿಯಲ್ಲಿ ಯಾಕೆ ಗಾಯವಾಗಲಿಲ್ಲ?**
ಸೃಷ್ಟಿಕರ್ತನಾದ ದೇವರು ಅವರನ್ನು ಸಂರಕ್ಷಿಸಿದನು.

**ಸೃಷ್ಟಿಕರ್ತನಾದ ದೇವರ ಬಗ್ಗೆ ಈ ಕಥೆಯಿಂದ ಏನು ಕಲಿತುಕೊಳ್ಳುವೆವು?**
ಸೃಷ್ಟಿಕರ್ತನಾದ ದೇವರು ತನಗೆ ಮಾತ್ರ ಹಾಡುವವರನ್ನು ಸಂರಕ್ಷಿಸುವನು.
ಸೃಷ್ಟಿಕರ್ತನಾದ ದೇವರೇ ನಿಜವಾದ ದೇವರು.
ನಾವು ಸೃಷ್ಟಿಕರ್ತನಾದ ದೇವರನ್ನು ಮಾತ್ರ ಆರಾಧಿಸುತ್ತೇವೆ.

# ಪಾಠ 9





## ಅಭಿನಯಾತ್ಮಕ ಹಾಡು

***ಸೃಷ್ಟಿಕರ್ತನಾದ ದೇವರನ್ನು ಮಾತ್ರ ಆರಾಧಿಸಿ ಎಂದು ಉಪದೇಶಿಸುವ ದೃಷ್ಟಾಂತ ಪಾಠವನ್ನು ಬಳಸಿ***

ಹಾಡಿರಿ ಸೃಷ್ಟಿಕರ್ತ ದೇವರಿಗೆ. ಹಾಡಿರಿ ಸೃಷ್ಟಿಕರ್ತ ದೇವರಿಗೆ.
ಹಾಡಿರಿ ಸೃಷ್ಟಿಕರ್ತ ದೇವರಿಗೆ. ನಿಮ್ಮನ್ನು ಸೃಷ್ಟಿಸಿದ್ದಕ್ಕಾಗಿಯೇ.

ನಾ ಹಾಡುವೆ ಸೃಷ್ಟಿಕರ್ತ ದೇವರಿಗೆ. ನಾ ಹಾಡುವೆ ಸೃಷ್ಟಿಕರ್ತ ದೇವರಿಗೆ.
ನಾ ಹಾಡುವೆ ಸೃಷ್ಟಿಕರ್ತ ದೇವರಿಗೆ. ನನ್ನನ್ನು ಸೃಷ್ಟಿಸಿದ್ದಕ್ಕಾಗಿಯೇ.

## ದೃಷ್ಟಾಂತ ಪಾಠ

***ಸೃಷ್ಟಿಕರ್ತನಾದ ದೇವರನ್ನು ಮಾತ್ರ ಆರಾಧಿಸಿ ಎಂದು ಉಪದೇಶಿಸುವ ದೃಷ್ಟಾಂತ ಪಾಠವನ್ನು ಬಳಸಿ***

ನಿಮಗೆ ಸಹಾಯಕರಾಗಿರಲು ಇಬ್ಬರು ಮಕ್ಕಳಿಗೆ ಹೇಳಿ. ಸೃಷ್ಟಿಕರ್ತನಾದ ದೇವರಾಗಿ ನಟಿಸಲಿರುವ ಮಗುವಿಗೆ (ಬೆರಳುಮಾಡಿ) ವಿವರಿಸಿ, ಬಳಿಕ ಬೇರೆ ದೇವರುಗಳನ್ನು ಆರಾಧಿಸುವವನಂತೆ ನಟಿಸಲಿರುವ ಮಗುವಿಗೆ (ಬೆರಳುಮಾಡಿ) ವಿವರಿಸಿ.

ಬೇರೆ ದೇವರುಗಳನ್ನು ಆರಾಧಿಸುವವನಂತೆ ನಟಿಸಲಿರುವ ಮಗುವಿನ ಕಣ್ಣುಗಳಿಗೆ ಬಟ್ಟೆಕಟ್ಟಿ.

ಆ ಇಬ್ಬರು ಸಹಾಯಕರಿಗೆ ಇತರ ಮಕ್ಕಳ ಮುಂದೆ ನಡೆಯಲು ಹೇಳಿ. ಸೃಷ್ಟಿಕರ್ತನಾದ ದೇವರಾಗಿ ನಟಿಸುತ್ತಿರುವ ಮಗುವಿಗೆ ಬೇರೆ ದೇವರುಗಳನ್ನು ಆರಾಧಿಸುವವನಂತೆ ನಟಿಸುತ್ತಿರುವ ಮಗುವಿನ ಹಿಂದೆ ನಡೆಯಲು ಹೇಳಿ.

ಬೇರೆ ದೇವರುಗಳನ್ನು ಆರಾಧಿಸುವವನಂತೆ ನಟಿಸುತ್ತಿರುವ ಮಗುವು ಕತ್ತಲೆಯಲ್ಲಿ ತಪ್ಪಿಹೋಗಿದೆಯೆಂದು ಮತ್ತು ಸೃಷ್ಟಿಕರ್ತನಾದ ದೇವರನ್ನು ನೋಡಲು ಸಾಧ್ಯವಾಗುತ್ತಿಲ್ಲವೆಂದು ವಿವರಿಸಿ.

ಬೇರೆ ದೇವರುಗಳನ್ನು ನಾವು ಆರಾಧಿಸುವಾಗ ಇದೇ ರೀತಿಯಲ್ಲಿರುತ್ತೇವೆ. ನಾವು ಕತ್ತಲೆಯಲ್ಲಿ ತಪ್ಪಿಹೋದವರಾಗುತ್ತೇವೆ.

ಸೃಷ್ಟಿಕರ್ತನಾದ
ದೇವರನ್ನು
ಮಾತ್ರ
ಆರಾಧಿಸಿ

ಆದರೆ ಸೃಷ್ಟಿಕರ್ತನಾದ ದೇವರು ಬಹು ದೂರವಾಗಿಲ್ಲ. ಸೃಷ್ಟಿಕರ್ತನಾದ ದೇವರು ನಮ್ಮನ್ನು ಕಾಪಾಡಲು ಇಷ್ಟಪಡುತ್ತಾನೆ ಮತ್ತು ಕಾಪಾಡಲು ಕಾಯುತ್ತಿದ್ದಾನೆ.

## ಬೈಬಲ್ ವಚನವನ್ನು ಕಂಠಪಾಠ ಮಾಡುವ ಆಟ

***ಸೃಷ್ಟಿಕರ್ತನಾದ ದೇವರನ್ನು ಮಾತ್ರ ಆರಾಧಿಸಿ ಎಂದು ಉಪದೇಶಿಸುವ ಬೈಬಲ್ ವಚನವನ್ನು ಬಳಸಿ***

**ವಿಮೋಚನಕಾಂಡ 20:3** *'ನನ್ನನ್ನಲ್ಲದೆ ಬೇರೆ ಯಾವ ದೇವರುಗಳನ್ನೂ ನೀವು ಆರಾಧಿಸಬಾರದು.'*

ಬೈಬಲಿನ ಕಂಠಪಾಠ ಮಾಡುವ ವಚನವನ್ನು ತಬಲದ ತಾಳಕ್ಕೆ ತಕ್ಕಂತೆ ಹಾಡಿ ಮತ್ತು ನೀವು (ಟೀಚರ್) ಹಾಡಿದ ನಂತರ ಮಕ್ಕಳಿಗೂ ಹಾಡಲು ಹೇಳಿ.

# ಪಾಠ 9

ಟೀಚರ್: ‘ನನ್ನನ್ನಲ್ಲದೆ’
ಮಕ್ಕಳು: ‘ನನ್ನನ್ನಲ್ಲದೆ’

ಟೀಚರ್: ‘ಬೇರೆ ಯಾವ’
ಮಕ್ಕಳು: ‘ಬೇರೆ ಯಾವ’

ಟೀಚರ್: ‘ದೇವರುಗಳನ್ನೂ’
ಮಕ್ಕಳು: ‘ದೇವರುಗಳನ್ನೂ’

ಟೀಚರ್: ‘ನೀವು’
ಮಕ್ಕಳು: ‘ನೀವು’

ಟೀಚರ್: ‘ಆರಾಧಿಸಬಾರದು.’
ಮಕ್ಕಳು: ‘ಆರಾಧಿಸಬಾರದು.’

ಟೀಚರ್: ‘ವಿಮೋಚನಕಾಂಡ 20.’
ಮಕ್ಕಳು: ‘ವಿಮೋಚನಕಾಂಡ 20.’

ಟೀಚರ್: ‘ವಚನ 3.’
ಮಕ್ಕಳು: ‘ವಚನ 3.’

ವಚನವನ್ನು ಮಕ್ಕಳು ನೆನಪಿನಲ್ಲಿಟ್ಟುಕೊಳ್ಳುವ ತನಕ ಮತ್ತೆಮತ್ತೆ ಹೇಳಿ.

## ಅನ್ವಯಿಸುಕೊಳ್ಳುವಿಕೆ

***ಸೃಷ್ಟಿಕರ್ತನಾದ ದೇವರನ್ನು ಮಾತ್ರ ಆರಾಧಿಸಿ ಎಂದು ಉಪದೇಶಿಸುವ ಅನ್ವಯಿಸುಕೊಳ್ಳುವಿಕೆಯನ್ನು ಬಳಸಿ***

ಸೃಷ್ಟಿಕರ್ತನಾದ ದೇವರನ್ನು ಮಾತ್ರ ಆರಾಧಿಸಿ


ಸೃಷ್ಟಿಕರ್ತನಾದ ದೇವರೇ ನಿಜವಾದ ದೇವರು. ನಾವು ಆತನನ್ನು ಮಾತ್ರ ಆರಾಧಿಸುತ್ತೇವೆ. ನಾವು ಬೇರೆ ದೇವರುಗಳನ್ನು ಆರಾಧಿಸುವಾಗ ಆತ್ಮಿಕ ಕತ್ತಲೆಯು ನಮ್ಮ ಜೀವಿತದೊಳಕ್ಕೆ ಬರುತ್ತದೆ. ನಾವು ಬೇರೆ ದೇವರುಗಳನ್ನು ಆರಾಧಿಸುವಾಗ ನಾವು ಕತ್ತಲೆಯಲ್ಲಿ ತಪ್ಪಿಹೋಗುತ್ತೇವೆ.

ನಾವು ನಿಜವಾದ ದೇವರನ್ನು ಮಾತ್ರ ಆರಾಧಿಸುತ್ತೇವೆ, ಆತನು ಆತ್ಮಿಕ ಕತ್ತಲೆಯನ್ನು ನಮ್ಮ ಜೀವಿತದೊಳಗಿಂದ ಹಿಂದಕ್ಕೆ ತಳ್ಳುವನು. ನಾವು ನಿಜವಾದ ದೇವರನ್ನು ಮಾತ್ರ ಆರಾಧಿಸುತ್ತೇವೆ, ಆತನು ಆತ್ಮಿಕ ಕತ್ತಲೆಯಿಂದ ನಮ್ಮನ್ನು ಕಾಪಾಡುತ್ತಾನೆ.

**ಪ್ರಾರ್ಥನೆ:** ಸೃಷ್ಟಿಕರ್ತನಾದ ದೇವರೇ, ನೀನೇ ನಿಜವಾದ ದೇವರೆಂದು ನನಗೆ ತೋರಿಸಿದ್ದಕ್ಕಾಗಿ ನಿನಗೆ ವಂದನೆಗಳು. ಸೃಷ್ಟಿಕರ್ತನಾದ ದೇವರೇ, ನಾನು ನಿನ್ನೊಬ್ಬನನ್ನೇ ಆರಾಧಿಸುತ್ತೇನೆ. ಸೃಷ್ಟಿಕರ್ತನಾದ ದೇವರೇ, ನೀನು ನನ್ನನ್ನು ಪ್ರೀತಿಸುವುದಕ್ಕಾಗಿ ನಿನಗೆ ವಂದನೆಗಳು. ಸೃಷ್ಟಿಕರ್ತನಾದ ದೇವರೇ, ಕತ್ತಲೆಯಲ್ಲಿ ತಪ್ಪಿಹೋಗುತ್ತಿದ್ದ ನನ್ನನ್ನು ಕಾಪಾಡಿದ್ದಕ್ಕಾಗಿ ನಿನಗೆ ವಂದನೆಗಳು. ಆಮೆನ್.

**ಬಹುಮಾನ:** ಪ್ರತಿಯೊಂದು ಮಗುವಿಗೆ ಅವರ ಸ್ವಂತಕ್ಕೆ ಶುಭವಾರ್ತೆ ಕಥಾಪುಸ್ತಕ–ನಾಲ್ಕರ ಪ್ರತಿಯನ್ನು ಕೊಡಿ. ಪ್ರತಿಯೊಂದು ಮಗುವಿಗೆ ಅವರ ಸ್ವಂತ ಶುಭವಾರ್ತೆ ಕಥಾಪುಸ್ತಕ–ನಾಲ್ಕನ್ನು ಓದಲು ಸಹಾಯಮಾಡಿ.

# ಪಾಠ 10



## ಒಂದು ಉಪದೇಶದ ಅಂಶ

***ದೇವರ ಮಗುವಾದ ನನಗಾಗಿ ಸೃಷ್ಟಿಕರ್ತನಾದ ದೇವರು ಇಲ್ಲಿದ್ದಾನೆ!***

ದೇವರ
ಮಗುವಾದ
ನನಗಾಗಿ
ಸೃಷ್ಟಿಕರ್ತನಾದ
ದೇವರು
ಇಲ್ಲಿದ್ದಾನೆ!

## ಬೈಬಲಿನ ಕಥೆ

***ದೇವರ ಮಗುವಾದ ನನಗಾಗಿ ಸೃಷ್ಟಿಕರ್ತನಾದ ದೇವರು ಇಲ್ಲಿದ್ದಾನೆ! ಎಂದು ಉಪದೇಶಿಸುವ ಕಥೆಯನ್ನು ಬಳಸಿ***

**ಶುಭವಾರ್ತೆ ಕಥಾಪುಸ್ತಕ ಐದು.** ಪುಟಗಳು 2-19. *ಸೃಷ್ಟಿಕರ್ತನಾದ ದೇವರು ಇಲ್ಲಿದ್ದಾನೆ!*

**ಉಪಕರಣಗಳು:** ಕಪ್ಪುಹಲಗೆ ಮತ್ತು ಚಿತ್ರಿಸಲು ಸೀಮೆಸುಣ್ಣ, ಅಥವಾ ಮರಳು ಮತ್ತು ಚಿತ್ರಿಸಲು ಕಡ್ಡಿ, ಅಥವಾ ಕಾಗದ ಮತ್ತು ಚಿತ್ರಿಸಲು ಪೆನ್ಸಿಲ್. ಮಕ್ಕಳಿಗೆ ಡ್ರಾಯಿಂಗ್ ಪುಸ್ತಕ ಅಥವಾ ಕಾಗದ, ಪೆನ್ಸಿಲ್ ಮತ್ತು ರಬ್ಬರ್ ಅವಶ್ಯಕ.

ಚಿತ್ರಿಸಿ ಕಥೆ ಹೇಳಿ.

8-15 ಪುಟಗಳಿಂದ ಮಕ್ಕಳಿಗೆ ಕಥೆಯನ್ನು ಓದಿ, ನೀವು ಓದುವಾಗ ಮಕ್ಕಳಿಗೆ *ಶುಭವಾರ್ತೆ ಕಥಾಪುಸ್ತಕ–ಐದರಲ್ಲಿರುವ* ಚಿತ್ರಗಳನ್ನು ತೋರಿಸಿ.

1, 2, 3 ಕಥೆಯನ್ನು ಆರಂಭಿಸಿ...

ಸೃಷ್ಟಿಕರ್ತನಾದ ದೇವರು ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ: 'ನಾನು ನಿಮ್ಮನ್ನು ಸದಾಕಾಲ ಮತ್ತು ಎಂದೆಂದಿಗೂ ಕಾಪಾಡುವೆನು.' ನನಗೆ ಒಬ್ಬ ಯುವತಿ ಕಾಣುತ್ತಿದ್ದಾಳೆ. ಆಕೆಯ ಹೆಸರು ಮರಿಯ. ಸೃಷ್ಟಿಕರ್ತನ ಒಳ್ಳೆಯ ಆತ್ಮವು ಮರಿಯಳಿಗೆ ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ: 'ನೀನು ಒಬ್ಬ ಮಗನನ್ನು ಪಡೆಯುವೆ. ಆತನಿಗೆ ಯೇಸು ಎಂಬ ಹೆಸರಿರುವುದು. ಯೇಸುವು ಸೃಷ್ಟಿಕರ್ತನಾದ ದೇವರ ಆತ್ಮನಿಂದ ಹುಟ್ಟಿದವನು. ಯೇಸು ನಿಮ್ಮನ್ನು ಸದಾಕಾಲ ಮತ್ತು ಎಂದೆಂದಿಗೂ ಕಾಪಾಡುವನು.'

ಒಬ್ಬ ಯುವಕನು ನನಗೆ ಕಾಣುತ್ತಿದ್ದಾನೆ. ಅವನ ಹೆಸರು ಯೋಸೇಫ. ಯೋಸೇಫನ ಪೂರ್ವಿಕರು ದಾವೀದ ರಾಜನ ಕುಲದವರು. ದಾವೀದ ರಾಜನು ಅಬ್ರಹಾಮನ ಕುಲದವನು.

ಸೃಷ್ಟಿಕರ್ತನಾದ ದೇವರು ಒಳ್ಳೆಯ ಆತ್ಮನಿಗೆ ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ: 'ಹೋಗಿ ಯೋಸೇಫನಿಗೆ ಮರಿಯಳನ್ನು ತನ್ನ ಹೆಂಡತಿಯನ್ನಾಗಿ ಮಾಡಿಕೊಳ್ಳಲು ತಿಳಿಸು. ಮರಿಯಳು ಒಬ್ಬ ಮಗನನ್ನು ಪಡೆಯುವಳು. ಆತನಿಗೆ ಯೇಸು ಎಂಬ ಹೆಸರಿರುವುದು. ಯೇಸುವು ಸೃಷ್ಟಿಕರ್ತನಾದ ದೇವರ ಆತ್ಮನಿಂದ ಹುಟ್ಟಿದವನು. ಯೇಸು ನಿಮ್ಮನ್ನು ಸದಾಕಾಲ ಮತ್ತು ಎಂದೆಂದಿಗೂ ಕಾಪಾಡುವನು.'

ಸೃಷ್ಟಿಕರ್ತನಾದ ದೇವರು ಬರುತ್ತಿದ್ದಾನೆ...

# ಪಾಠ 10





ಕಾಲವಾಯಿತು. ಸೃಷ್ಟಿಕರ್ತನಾದ ದೇವರು ರಾತ್ರಿಯ ಆಕಾಶದಲ್ಲಿ ಹೊಸ ನಕ್ಷತ್ರವನ್ನು ಸೃಷ್ಟಿಸುತ್ತಿರುವುದು ನನಗೆ ಕಾಣುತ್ತಿದೆ. ಹೊಸ ನಕ್ಷತ್ರವು ಪ್ರಕಾಶಿಸುತ್ತಾ...ಪ್ರಕಾಶಿಸುತ್ತಾ...ಪ್ರಕಾಶಿಸುತ್ತಾ ಇದೆ.

ಜ್ಞಾನಿಗಳು ರಾತ್ರಿಯ ಆಕಾಶವನ್ನು ನೋಡುತ್ತಾ...ನೋಡುತ್ತಾ...ನೋಡುತ್ತಾ ಇರುವುದು ನನಗೆ ಕಾಣುತ್ತಿದೆ.
ಹೊಸ ನಕ್ಷತ್ರವು ಸೂಚಿಸುತ್ತಾ...ಸೂಚಿಸುತ್ತಾ...ಸೂಚಿಸುತ್ತಾ ಇದೆ.



ಜ್ಞಾನಿಗಳು ಹೊಸ ನಕ್ಷತ್ರವನ್ನು ಹಿಂಬಾಲಿಸುತ್ತಾ ಚಿಕ್ಕ ಊರಿಗೆ...ಚಿಕ್ಕ ದಾರಿಯಲ್ಲಿ...ಚಿಕ್ಕ ಗುಡಿಸಲಿಗೆ ಹೋಗುತ್ತಿರುವುದು ನನಗೆ ಕಾಣುತ್ತಿದೆ.

ಯೋಸೇಫನು, ಅವನ ಹೆಂಡತಿ ಮರಿಯಳು ಮತ್ತು ಚಿಕ್ಕ ಮಗುವಾದ ಯೇಸು ನನಗೆ ಕಾಣುತ್ತಿದ್ದಾರೆ.
ಸೃಷ್ಟಿಕರ್ತನಾದ ದೇವರು ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:



'ಈ ಚಿಕ್ಕ ಮಗುವಾದ ಯೇಸು ನಿಮ್ಮನ್ನು ಸದಾಕಾಲ ಮತ್ತು ಎಂದೆಂದಿಗೂ ಕಾಪಾಡುವನು.'
ಜ್ಞಾನಿಗಳು ಚಿಕ್ಕ ಮಗುವಾದ ಯೇಸುವಿಗೆ ಹಾಡುತ್ತಿರುವುದು ನನಗೆ ಕಾಣುತ್ತಿದೆ.



ನಿಮ್ಮನ್ನು ಸದಾಕಾಲ ಮತ್ತು ಎಂದೆಂದಿಗೂ ಕಾಪಾಡಲು ಸೃಷ್ಟಿಕರ್ತನಾದ ದೇವರು ಚಿಕ್ಕ ಮಗುವಾಗಿ ಬಂದಿದ್ದಾನೆ. ಸೃಷ್ಟಿಕರ್ತನಾದ ದೇವರು ಇಲ್ಲಿದ್ದಾನೆ!

ಅದೇ ರಾತ್ರಿಯಲ್ಲಿ...



ನನಗೆ ಕುರುಬರು ಕಾಣುತ್ತಿದ್ದಾರೆ. ನನಗೆ ಕುರಿಗಳು ಕಾಣುತ್ತಿವೆ.

ಸೃಷ್ಟಿಕರ್ತನಾದ ದೇವರು ಒಳ್ಳೆಯ ಆತ್ಮನಿಗೆ ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:
'ಹೋಗಿ ಕುರುಬರಿಗೆ, ಭಯಪಡಬೇಡಿ, ನಾನು ಶುಭವಾರ್ತೆ ಕೊಡುವೆ ಎಂದು ತಿಳಿಸು.
ಯೇಸು ನಿಮ್ಮನ್ನು ಸದಾಕಾಲ ಮತ್ತು ಎಂದೆಂದಿಗೂ ಕಾಪಾಡಲು ಇಲ್ಲಿದ್ದಾನೆ.'



ದೊಡ್ಡ, ದೊಡ್ಡ, ದೊಡ್ಡ ಹೊಳೆಯುವ ಬೆಳಕು ನನಗೆ ಕಾಣುತ್ತಿದೆ.
ದೊಡ್ಡ, ದೊಡ್ಡ, ದೊಡ್ಡ ಹೊಳೆಯುವ ಬೆಳಕು ಒಳ್ಳೆಯ ಆತ್ಮನಾಗಿರುವುದು ನನಗೆ ಕಾಣುತ್ತಿದೆ.
ಒಳ್ಳೆಯ ಆತ್ಮನು ಕುರುಬರಿಗೆ ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:
'ಭಯಪಡಬೇಡಿ, ನಾನು ಶುಭವಾರ್ತೆ ಕೊಡುವೆನು. ಯೇಸು ನಿಮ್ಮನ್ನು ಸದಾಕಾಲ ಮತ್ತು ಎಂದೆಂದಿಗೂ ಕಾಪಾಡಲು ಇಲ್ಲಿದ್ದಾನೆ.'



ಸೃಷ್ಟಿಕರ್ತನಾದ ದೇವರಿಗೆ ಒಂದು...ಎರಡು...ಮೂರು...ನಾಲ್ಕು...ಐದು...ಆರು...ಏಳು...
ಅನೇಕ, ಅನೇಕ, ಅನೇಕ ಒಳ್ಳೆಯ ಆತ್ಮಗಳು ಹಾಡುತ್ತಿರುವುದು ನನಗೆ ಕಾಣುತ್ತಿದೆ.
ಅನೇಕ, ಅನೇಕ, ಅನೇಕ ಒಳ್ಳೆಯ ಆತ್ಮಗಳು ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:



'ಸೃಷ್ಟಿಕರ್ತನಾದ ದೇವರಿಗೆ ಹಾಡಿರಿ. ಯೇಸುವಿಗೆ ಹಾಡುವ ಪ್ರತಿಯೊಬ್ಬರಿಗೂ ಶಾಂತಿಯಿರಲಿ.'
ಅನೇಕ, ಅನೇಕ, ಅನೇಕ ಒಳ್ಳೆಯ ಆತ್ಮಗಳು ಆಕಾಶದೊಳಕ್ಕೆ ಏರಿ...ಏರಿ...ಏರಿ ಹೋಗುತ್ತಿರುವುದು ನನಗೆ ಕಾಣುತ್ತಿದೆ.

ಕುರುಬರು ಯೇಸುವಿಗೆ ಹಾಡುತ್ತಿರುವುದು ನನಗೆ ಕಾಣುತ್ತಿದೆ.

# ಪಾಠ 10



ನಿಮ್ಮನ್ನು ಸದಾಕಾಲ ಮತ್ತು ಎಂದೆಂದಿಗೂ ಕಾಪಾಡಲು ಸೃಷ್ಟಿಕರ್ತನಾದ ದೇವರು ಚಿಕ್ಕ ಮಗುವಾಗಿ ಬಂದಿದ್ದಾನೆ. ಸೃಷ್ಟಿಕರ್ತನಾದ ದೇವರು ಇಲ್ಲಿದ್ದಾನೆ!

**ಕಥೆಯನ್ನು ಚಿತ್ರಿಸಲು ಮಕ್ಕಳಿಗೆ ಹೇಳಿ.**


## ಅಭಿನಯಾತ್ಮಕ ಹಾಡು

***ದೇವರ ಮಗುವಾದ ನನಗಾಗಿ ಸೃಷ್ಟಿಕರ್ತನಾದ ದೇವರು ಇಲ್ಲಿದ್ದಾನೆ! ಎಂದು ಉಪದೇಶಿಸುವ ಅಭಿನಯಾತ್ಮಕ ಹಾಡನ್ನು ಬಳಸಿ***



ಬಾಲ ಯೇಸು, ಬಾಲ ಯೇಸು, (ನಿಮ್ಮ ಕೈಗಳಿಂದ ಮಗುವನ್ನು ತೂಗುವಂತೆ ಮಾಡಿ)
ನಮಗಾಗಿ ಜನಿಸಿದ, ನಮಗಾಗಿ ಜನಿಸಿದ. (ನಿಮ್ಮ ಕೈಗಳನ್ನು ಎದೆಯ ಮೇಲಿಟ್ಟುಕೊಳ್ಳಿ)
ಬನ್ನಿ ನಾವೆಲ್ಲಾ ಆತನನ್ನು ಆರಾಧಿಸೋಣ, (ಪ್ರಾರ್ಥಿಸುವಂತೆ ಕೈಗಳನ್ನು ಜೋಡಿಸಿ)
ಬನ್ನಿ ನಾವೆಲ್ಲಾ ಆತನನ್ನು ಆರಾಧಿಸೋಣ. (ಪ್ರಾರ್ಥಿಸುವಂತೆ ಕೈಗಳನ್ನು ಜೋಡಿಸಿ)
ಸಂತೋಷದಿಂದ, ಸಂತೋಷದಿಂದ. (ಕೈಗಳನ್ನು ಮೇಲೆತ್ತಿ)


ಬಾಲ ಯೇಸು, ಬಾಲ ಯೇಸು, (ನಿಮ್ಮ ಕೈಗಳಿಂದ ಮಗುವನ್ನು ತೂಗುವಂತೆ ಮಾಡಿ)
ನಮಗಾಗಿ ಜನಿಸಿದ, ನಮಗಾಗಿ ಜನಿಸಿದ. (ನಿಮ್ಮ ಕೈಗಳನ್ನು ಎದೆಯ ಮೇಲಿಟ್ಟುಕೊಳ್ಳಿ)
ನಮ್ಮನ್ನು ರಕ್ಷಿಸಲು ನೀನು ಬಂದೆ, (ನಿಮ್ಮ ಕೈಗಳನ್ನು ಆಕಾಶದ ಕಡೆಗೆ ಎತ್ತಿ)
ನಮ್ಮನ್ನು ರಕ್ಷಿಸಲು ನೀನು ಬಂದೆ. (ನಿಮ್ಮ ಕೈಗಳನ್ನು ಆಕಾಶದ ಕಡೆಗೆ ಎತ್ತಿ)
ಆಮೆನ್, ಆಮೆನ್. (ಪ್ರಾರ್ಥಿಸುವಂತೆ ಕೈಗಳನ್ನು ಜೋಡಿಸಿ)



ಬಾಲ ಯೇಸು, ಬಾಲ ಯೇಸು, (ನಿಮ್ಮ ಕೈಗಳಿಂದ ಮಗುವನ್ನು ತೂಗುವಂತೆ ಮಾಡಿ)
ನಾವು ನಿನ್ನನ್ನು ಪ್ರೀತಿಸುತ್ತೇವೆ, ನಾವು ನಿನ್ನನ್ನು ಪ್ರೀತಿಸುತ್ತೇವೆ. (ನಿಮ್ಮನ್ನು ಅಪ್ಪಿಕೊಳ್ಳಿ)
ನಾವು ಸ್ವರ್ಗಕ್ಕೆ ಹೋಗುತ್ತಿದ್ದೇವೆ, (ಮೇಲಕ್ಕೆ ಕೈಮಾಡಿ ತೋರಿಸಿ)
ನಾವು ಸ್ವರ್ಗಕ್ಕೆ ಹೋಗುತ್ತಿದ್ದೇವೆ. (ಮೇಲಕ್ಕೆ ಕೈಮಾಡಿ ತೋರಿಸಿ)
ನಿನಗೆ ಸ್ತೋತ್ರ, ನಿನಗೆ ಸ್ತೋತ್ರ. (ಪ್ರಾರ್ಥಿಸುವಂತೆ ಕೈಗಳನ್ನು ಜೋಡಿಸಿ)

## ದೃಷ್ಟಾಂತ ಪಾಠ

***ದೇವರ ಮಗುವಾದ ನನಗಾಗಿ ಸೃಷ್ಟಿಕರ್ತನಾದ ದೇವರು ಇಲ್ಲಿದ್ದಾನೆ! ಎಂದು ಉಪದೇಶಿಸುವ ದೃಷ್ಟಾಂತ ಪಾಠವನ್ನು ಬಳಸಿ***



**ಉಪಕರಣಗಳು:** ರಟ್ಟಿನ ಡಬ್ಬ ಮತ್ತು ಕನ್ನಡಿ. ಪಾಠ ಹೇಳುವ ಮೊದಲೇ ಕನ್ನಡಿಯನ್ನು ಡಬ್ಬದೊಳಗೆ ಹಾಕಿ.

ಸೃಷ್ಟಿಕರ್ತನಾದ ದೇವರ ಮಕ್ಕಳಲ್ಲಿ ಒಬ್ಬರ ಬಹು ವಿಶೇಷವಾದ ಭಾವಚಿತ್ರವು ಈ ಡಬ್ಬದೊಳಗಿದೆ ಎಂದು ಮಕ್ಕಳಿಗೆ ಹೇಳಿ. ಒಬ್ಬೊಬ್ಬರಾಗಿ ಬಂದು ಡಬ್ಬದೊಳಗಿರುವುದನ್ನು ನೋಡಿ, ಒಂದು ಮಾತೂ ಆಡದೆ ಹೋಗಿ ಕುಳಿತುಕೊಳ್ಳಲು ಮಕ್ಕಳಿಗೆ ಹೇಳಿ. ಪ್ರತಿಯೊಬ್ಬರೂ ಡಬ್ಬದೊಳಗಿರುವುದನ್ನು ನೋಡುವ ತನಕ ಯಾರೂ ಏನೂ ಹೇಳಕೂಡದು.

# ಪಾಠ 10

ಪ್ರತಿಯೊಬ್ಬರೂ ಡಬ್ಬದೊಳಗಿರುವುದನ್ನು ನೋಡಿದ ಮೇಲೆ ಈ ಕೆಳಕಂಡ ಪ್ರಶ್ನೆಗಳನ್ನು ಕೇಳಿ:

**ಡಬ್ಬದೊಳಗೆ ಯಾರನ್ನು ನೋಡಿದಿರಿ? ಅದು ನೀವಾಗಿರುತ್ತೀರೆಂದು ನೀವು ಭಾವಿಸಿದ್ದಿರಾ?**

**ನೀವು ಸೃಷ್ಟಿಕರ್ತನಾದ ದೇವರ ಮಗುವಾಗಿದ್ದೀರೆಂದು ಮತ್ತು ಆತನಿಗೆ ವಿಶೇಷವಾದವರೆಂದು ನಿಮಗೆ ಗೊತ್ತಿತ್ತೇ?**

ಯೇಸುವು ಸೃಷ್ಟಿಕರ್ತನಾದ ದೇವರ ಆತ್ಮನಿಂದ ಹೇಗೆ ಬಂದನೆಂದು ವಿವರಿಸಿ. ನಿಮ್ಮನ್ನು ಸದಾಕಾಲ ಮತ್ತು ಎಂದೆಂದಿಗೂ ಕಾಪಾಡಲು ಚಿಕ್ಕಮಗುವಾಗಿ ಬಂದ ಯೇಸುವೇ ಸೃಷ್ಟಿಕರ್ತನಾದ ದೇವರು.
ನಾವು ಯೇಸುವಿನಲ್ಲಿ ನಂಬಿಕೆ ಇಡುವಾಗ ನಾವು ಸೃಷ್ಟಿಕರ್ತನಾದ ದೇವರ ಮಗುವಾಗುತ್ತೇವೆ.

## ಬೈಬಲ್ ವಚನವನ್ನು ಕಂಠಪಾಠ ಮಾಡುವ ಆಟ

***ದೇವರ ಮಗುವಾದ ನನಗಾಗಿ ಸೃಷ್ಟಿಕರ್ತನಾದ ದೇವರು ಇಲ್ಲಿದ್ದಾನೆ! ಎಂದು ಉಪದೇಶಿಸುವ ಬೈಬಲ್ ವಚನವನ್ನು ಬಳಸಿ***

ಸೃಷ್ಟಿಕರ್ತನಾದ ದೇವರಿಗೆ ಪ್ರಭು ಎಂಬುದು ಮತ್ತೊಂದು ಹೆಸರೆಂದು ವಿವರಿಸಿ.

**1 ಯೋಹಾನ 5:1** *'ಯೇಸುವೇ ಕ್ರಿಸ್ತ*ನೆಂದು ನಂಬುವವರು ದೇವರ ಮಕ್ಕಳಾಗಿದ್ದಾರೆ.'*

**ಉಪಕರಣಗಳು:** ಕಪ್ಪುಹಲಗೆ ಮತ್ತು ಬರೆಯಲು ಸೀಮೆಸುಣ್ಣ, ಅಥವಾ ಮರಳು ಮತ್ತು ಚಿತ್ರಿಸಲು ಕಡ್ಡಿ, ಅಥವಾ ಕಾಗದ ಮತ್ತು ಬರೆಯಲು ಪೆನ್ಸಿಲ್.

ಬೈಬಲಿನ ಕಂಠಪಾಠ ಮಾಡುವ ವಚನವನ್ನು ನೀವು ಹೇಳುತ್ತಾ ಬರೆಯಿರಿ ಮತ್ತು ನೀವು ಹೇಳುತ್ತಾ ಬರೆಯುತ್ತಾ ಹೋದಂತೆ ನಿಮ್ಮೊಂದಿಗೆ ಹೇಳಲು ಮಕ್ಕಳಿಗೆ ಹೇಳಿ. ಮಕ್ಕಳು ಓದಲು ಇನ್ನೂ ಕಲಿತಿಲ್ಲದಿದ್ದರೆ, ಬೈಬಲಿನ ಕಂಠಪಾಠ ಮಾಡುವ ವಚನವನ್ನು ಬರೆಯುವ ಅಗತ್ಯವಿಲ್ಲ.

ಬೈಬಲಿನ ಕಂಠಪಾಠ ಮಾಡುವ ವಚನವನ್ನು ಬಾಯಿಂದ ಹೇಳಿ. ಯಾವುದಾದರೂ ಮೂರು ಪದಗಳನ್ನು ಅಳಿಸಿಹಾಕಿ. ಈಗ ಹುಡುಗರು ಕಾಣೆಯಾಗಿರುವ ಪದಗಳನ್ನು ತುಂಬಲು ಒಬ್ಬ ಹುಡುಗನನ್ನು ಆರಿಸಬೇಕು, ಆಗ ಅವರು ಬೈಬಲಿನ ಕಂಠಪಾಠ ಮಾಡುವ ವಚನವನ್ನು ಹೇಳಲು ಸಾಧ್ಯವಾಗುವುದು. ಮತ್ತೆ ಮೂರು ಬೇರೆಬೇರೆ ಪದಗಳನ್ನು ಅಳಿಸಿಹಾಕಿ.

ಈಗ ಹುಡುಗಿಯರು ಕಾಣೆಯಾಗಿರುವ ಪದಗಳನ್ನು ತುಂಬಲು ಒಬ್ಬ ಹುಡುಗಿಯನ್ನು ಆರಿಸಬೇಕು, ಆಗ ಅವರು ಬೈಬಲಿನ ಕಂಠಪಾಠ ಮಾಡುವ ವಚನವನ್ನು ಹೇಳಲು ಸಾಧ್ಯವಾಗುವುದು.

ಎಲ್ಲರೂ ಬೈಬಲಿನ ಕಂಠಪಾಠ ಮಾಡುವ ವಚನವನ್ನು ಇನ್ನೊಂದು ಸಲ ಹೇಳಬೇಕು.

ದೇವರ ಮಗುವಾದ ನನಗಾಗಿ ಸೃಷ್ಟಿಕರ್ತನಾದ ದೇವರು ಇಲ್ಲಿದ್ದಾನೆ!

## ಅನ್ವಯಿಸುಕೊಳ್ಳುವಿಕೆ

***ದೇವರ ಮಗುವಾದ ನನಗಾಗಿ ಸೃಷ್ಟಿಕರ್ತನಾದ ದೇವರು ಇಲ್ಲಿದ್ದಾನೆ! ಎಂದು ಉಪದೇಶಿಸುವ ಅನ್ವಯಿಸುಕೊಳ್ಳುವಿಕೆಯನ್ನು ಬಳಸಿ***

**ಸಾಕ್ಷಿಕೊಡಿ:** ನಿಮ್ಮ ಜೀವಿತ ಹೇಗೆ ಬದಲಾಯಿತೆಂದು ಮತ್ತು ನೀವು ಈಗ ದೇವರ ಮಗುವಾಗಿರುವಿರೆಂದು ಸಾಕ್ಷಿಕೊಡಿ.

**ಪ್ರಾರ್ಥನೆ:** ಸೃಷ್ಟಿಕರ್ತನಾದ ದೇವರೇ, ನನ್ನನ್ನು ಎಂದೆಂದಿಗೂ ಕಾಪಾಡಲು ನೀನು ಚಿಕ್ಕ ಗಂಡುಮಗುವಾಗಿ ಬಂದದ್ದಕ್ಕಾಗಿ ನಿನಗೆ ವಂದನೆಗಳು. ನಾನು ಯೇಸುವನ್ನು ನಂಬಿದಾಗ ಸೃಷ್ಟಿಕರ್ತನಾದ ದೇವರ ಮಗುವಾದದ್ದಕ್ಕಾಗಿ ನಿನಗೆ ವಂದನೆಗಳು.

* [illegible]

# ಪಾಠ 11



## ಒಂದು ಉಪದೇಶದ ಅಂಶ

***ಯೇಸು ಲೋಕಕ್ಕೆ ಬೆಳಕಾಗಿದ್ದಾನೆ***

ಯೇಸು ಲೋಕಕ್ಕೆ ಬೆಳಕಾಗಿದ್ದಾನೆ

## ಬೈಬಲಿನ ಕಥೆ

***ಯೇಸು ಲೋಕಕ್ಕೆ ಬೆಳಕಾಗಿದ್ದಾನೆ ಎಂದು ಉಪದೇಶಿಸುವ ಕಥೆಯನ್ನು ಬಳಸಿ***

**ಶುಭವಾರ್ತೆ ಕಥಾಪುಸ್ತಕ ಐದು.** ಪುಟಗಳು 20-29. *ನನಗೆ ಕಾಣುತ್ತದೆ.*

ಕಥೆಯನ್ನು ಮಕ್ಕಳೊಡನೆ ನಾಟಕದ ಮೂಲಕ ಅಭಿನಯಿಸಿ. ನಾವೆಲ್ಲರೂ 'ನನಗೆ ಕಾಣುತ್ತದೆ' ಎಂಬ ನಾಟಕವನ್ನು ಅಭಿನಯಿಸೋಣ ಎಂದು ಮಕ್ಕಳಿಗೆ ವಿವರಿಸಿ.

**ಪಾತ್ರಧಾರಿಗಳು:** ಕಥೆಗಾರ ಮತ್ತು ನಿರ್ದೇಶಕ (ಟೀಚರ್ ಆಗಿರುವ ನೀವು). ಯೇಸು (ಒಂದು ಮಗು). ಕುರುಡ (ಒಂದು ಮಗು). ಆತ್ಮಿಕ ನಾಯಕ (ಒಂದು ಮಗು). ಯೇಸುವಿನ ಶಿಷ್ಯರು (ಮೂರು ಮಕ್ಕಳು). ಅನೇಕ ಜನರು (ಈ ನಾಟಕದಲ್ಲಿ ಪಾತ್ರಧಾರಿಗಳಲ್ಲದ ಎಲ್ಲ ಮಕ್ಕಳು).

*ಶುಭವಾರ್ತೆ ಕಥಾಪುಸ್ತಕ–ಐದರಿಂದ* ಓದಿ ಕಥೆ ಹೇಳಿ. ಪುಟಗಳು 20-29. ನೀವು ಓದುತ್ತಾ ಕಥೆ ಹೇಳುವಾಗ, ಪಾತ್ರಧಾರಿಗಳಿಗೆ ನಾಟಕದಲ್ಲಿ ತಮ್ಮ ಪಾತ್ರಗಳನ್ನು ಅಭಿನಯಿಸಲು ನಿರ್ದೇಶನ ಮಾಡಿ. ಪಾತ್ರಧಾರಿಗಳಾದ ಮಕ್ಕಲು ಓದಬಲ್ಲವರಾಗಿದ್ದರೆ, *ಶುಭವಾರ್ತೆ ಕಥಾಪುಸ್ತಕ–ಐದರ* ಪ್ರತಿಯನ್ನು ಅವರಿಗೆ ಕೊಟ್ಟು, ಕಥೆಯನ್ನು ಅನುಸರಿಸಲು ಮತ್ತು ತಮ್ಮ ಪಾತ್ರದ ಪದಗಳನ್ನು ಓದಲು ಹೇಳಿ.

*ಉದಾಹರಣೆ:* ಪುಟಗಳು 20-21. ಮಕ್ಕಳಿಗೆ ಮಾರುಕಟ್ಟೆಯಲ್ಲಿರುವಂತೆ ನಟಿಸಲು ಹೇಳಿ. 'ಅನೇಕ ಜನ' ರಾಗಿರುವ ಮಕ್ಕಳು ಖರೀದಿಸಲು ವಸ್ತುಗಳನ್ನು ನೋಡುತ್ತಿರುವವರಂತೆ ನಟಿಸುತ್ತಾ ನಡೆಯಲಿ. 'ಕುರುಡ' ನಾಗಿರುವ ಮಗುವಿಗೆ ಮಧ್ಯದಲ್ಲಿ ಕುಳಿತುಕೊಂಡು ಹಣಕ್ಕಾಗಿ ಕೈಚಾಚಿಕೊಂಡಿರಲು ಹೇಳಿ.

ಕಥೆಯನ್ನು ಓದಿಹೇಳಿ. ಯೇಸುವಿನ ಹಿಂಬಾಲಕರು ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ. 'ಈ ಕುರುಡನು ಕೆಟ್ಟದ್ದನ್ನು ಮಾಡಿದ್ದರಿಂದ ಹುಟ್ಟುಕುರುಡನಾಗಿದ್ದಾನೆಯೇ?' ಎಂದು ನೀವು ಓದಿಹೇಳಿದ ಮೇಲೆ ಯೇಸುವಿನ ಶಿಷ್ಯರ ಪಾತ್ರವಹಿಸಿರುವ ಮಕ್ಕಳಿಗೆ ಬೆರಳುಮಾಡಿ. 'ಈ ಕುರುಡನು ತಾನು ಮಾಡಿದ ತಪ್ಪಿನಿಂದಾಗಿ ಹುಟ್ಟುಕುರುಡನಾದನೇ?' ಎಂದು ಹೇಳಲು (ಅಥವಾ ಅವರು ಓದಲು ಕಲಿತಿದ್ದರೆ, ಓದಿಹೇಳಲು ಹೇಳಿ) ಅವರಿಗೆ ಹೇಳಿ. ಅವರು ಯೇಸುವನ್ನು ಹಿಂಬಾಲಿಸುತ್ತಾ ಕುರುಡನನ್ನು ಹಾದುಹೋಗಲಿ.

1, 2, 3, ನಾಟಕವನ್ನು ಆರಂಭಿಸಿ...

# ಪಾಠ 11



## ಅಭಿನಯಾತ್ಮಕ ಹಾಡು

***ಯೇಸು ಲೋಕಕ್ಕೆ ಬೆಳಕಾಗಿದ್ದಾನೆ ಎಂದು ಉಪದೇಶಿಸುವ ಅಭಿನಯಾತ್ಮಕ ಹಾಡನ್ನು ಬಳಸಿ***

1. ನಾನು ದೇವರ ಬೆಳಕಿನಲ್ಲಿ ನಡೆಯುತ್ತಿರುವೆ (3)
   ದೇವರ ಬೆಳಕಿನಲ್ಲಿ ನಡೆಯುತ್ತಿರುವೆ.
   ನಡೆ ನಡೆ ನಡೆ ಬೆಳಕಿನಲ್ಲಿ (3)
   ದೇವರ ಬೆಳಕಿನಲ್ಲಿ ನಡೆಯುತ್ತಿರುವೆ.
2. ನಾನು ದೇವರ ಬೆಳಕಿನಲ್ಲಿ ಜಿಗಿಯುತ್ತಿರುವೆ (3)
3. ನಾನು ದೇವರ ಬೆಳಕಿನಲ್ಲಿ ಓಡುತ್ತಿರುವೆ (3)

## ದೃಷ್ಟಾಂತ ಪಾಠ

***ಯೇಸು ಲೋಕಕ್ಕೆ ಬೆಳಕಾಗಿದ್ದಾನೆ ಎಂದು ಉಪದೇಶಿಸುವ ದೃಷ್ಟಾಂತ ಪಾಠವನ್ನು ಬಳಸಿ***

ಪ್ರಕೃತಿ ಸಹಜವಾದ ಬೆಳಕನ್ನು ಸೃಷ್ಟಿಸುವುದರ ಮೂಲಕ ಸೃಷ್ಟಿಕರ್ತನಾದ ದೇವರು ಕತ್ತಲೆಗಿಂತ ಬೆಳಕು ಹೇಗೆ ಶಕ್ತಿಶಾಲಿಯೆಂದು ತೋರಿಸಿದ್ದಾನೆ. ಕತ್ತಲೆಯನ್ನು ಬೆಳಕು ಹಿಂದಕ್ಕೆ ತಳ್ಳುತ್ತದೆ.

ಯೇಸು ಲೋಕಕ್ಕೆ ಬೆಳಕಾಗಿದ್ದಾನೆ

**ನಿದರ್ಶನ:** ನೀವು ಉಪದೇಶಿಸುತ್ತಿರುವ ಸ್ಥಳವನ್ನು ಕತ್ತಲು ಮಾಡಿ. ಮೇಣದ ಬತ್ತಿ ಹಚ್ಚಿ, ಅಥವಾ ಟಾರ್ಚ್ ಹಾಕಿ, ಅಥವಾ ದೀಪ ಹಚ್ಚಿ ಬೆಳಕು ಕತ್ತಲೆಯನ್ನು ಹೇಗೆ ಹಿಂದಕ್ಕೆ ತಳ್ಳುತ್ತದೆಯೆಂದು ತೋರಿಸಿ. ಯೇಸು ಹೇಗೆ ಪ್ರಕೃತಿ ಸಹಜವಾದ ಬೆಳಕಾಗಿದ್ದಾನೆಂದು ವಿವರಿಸಿ. ಎಲ್ಲ ಕೆಟ್ಟ ಆತ್ಮಗಳ ಮತ್ತು ನಮ್ಮ ಎಲ್ಲ ಕೆಟ್ಟವುಗಳ ಆತ್ಮಿಕ ಕತ್ತಲೆಯನ್ನು ಹಿಂದಕ್ಕೆ ತಳ್ಳುವ ಆತ್ಮಿಕ ಬೆಳಕು ಯೇಸುವಾಗಿದ್ದಾನೆ. ಕತ್ತಲೆಗಿಂತ ಬೆಳಕು ಹೇಗೆ ಶಕ್ತಿಶಾಲಿಯೆಂದು ಜ್ಞಾಪಿಸಿಕೊಳ್ಳಿ. ಕತ್ತಲೆಯನ್ನು ಹಿಂದಕ್ಕೆ ತಳ್ಳಲು ಯೇಸುವಿಗೆ ಮಾತ್ರ ಶಕ್ತಿಯಿದೆ. ನಿನ್ನನ್ನು ಮತ್ತು ನನ್ನನ್ನು ಸದಾಕಾಲ ಮತ್ತು ಎಂದೆಂದಿಗೂ ಕಾಪಾಡಲು ಯೇಸು ಬಂದನು.

## ಬೈಬಲ್ ವಚನವನ್ನು ಕಂಠಪಾಠ ಮಾಡುವ ಆಟ

***ಯೇಸು ಲೋಕಕ್ಕೆ ಬೆಳಕಾಗಿದ್ದಾನೆ ಎಂದು ಉಪದೇಶಿಸುವ ಬೈಬಲ್ ವಚನವನ್ನು ಬಳಸಿ***

**ಯೋಹಾನ 8:12** *'ಬಳಿಕ, ಯೇಸುವು ಜನರೊಂದಿಗೆ ಮತ್ತೆ ಮಾತಾಡುತ್ತಾ, "ನಾನೇ ಈ ಲೋಕಕ್ಕೆ ಬೆಳಕಾಗಿದ್ದೇನೆ. ನನ್ನನ್ನು ಹಿಂಬಾಲಿಸುವವನು ಕತ್ತಲೆಯಲ್ಲಿ ಎಂದಿಗೂ ಜೀವಿಸುವುದಿಲ್ಲ. ಅವನು ಜೀವಕೊಡುವ ಬೆಳಕನ್ನು ಹೊಂದಿದವನಾಗಿರುವನು" ಎಂದು ಹೇಳಿದನು.'*

**ಚಿತ್ರವಾಕ್ಯಗಳ ಆಟ: ಉಪಕರಣಗಳು:** 7 ಬಲೂನುಗಳು, ಅಳಿಸಲಾಗದ ಕಪ್ಪು ಇಂಕಿನ ಪೆನ್ನು.

ಮೂರು ಮಕ್ಕಳಿಗೆ ನಿಮ್ಮ ಸಹಾಯಕರಾಗಿ ಮುಂದೆ ಬಂದು ನಿಂತುಕೊಳ್ಳಲು ಹೇಳಿ. ಆ ಮೂರು ಮಕ್ಕಳಿಗೂ ಒಂದೊಂದು ಬಲೂನನ್ನು ಕೊಟ್ಟು ಅವರವರ ಬಲೂನಿಗೆ ಗಾಳಿ ಊದಲು ಮತ್ತು ಗಾಳಿಹೋಗದಂತೆ ಅದರ ಬಾಯಿಗೆ ದಾರಕಟ್ಟಲು ಹೇಳಿ.

# ಪಾಠ 11

ಆ ಮೂರು ಮಕ್ಕಳಿಗೆ ಒಬ್ಬರ ಪಕ್ಕದಲ್ಲಿ ಒಬ್ಬರಂತೆ ಮಕ್ಕಳ ಮುಂದೆ ನಿಂತುಕೊಳ್ಳಲು ಹೇಳಿ. ಗಾಳಿ ಊದಿರುವ ಬಲೂನುಗಳಲ್ಲಿ ಒಂದನ್ನು ತೆಗೆದುಕೊಂಡು ಕತ್ತಲೆಯನ್ನು ಬೆಳಕು ತಳ್ಳುತ್ತಿರುವ ಚಿತ್ರವನ್ನು ಅದರ ಮೇಲೆ ಬರೆಯಿರಿ. ಆ ಬಲೂನನ್ನು ಮತ್ತೆ ಆ ಮಗುವಿಗೆ ಕೊಟ್ಟು ಆ ಚಿತ್ರವನ್ನು ಮಕ್ಕಳಿಗೆ ತೋರಿಸಲು ಹೇಳಿ. ಗಾಳಿ ಊದಿರುವ ಬಲೂನುಗಳಲ್ಲಿ ಮತ್ತೊಂದನ್ನು ತೆಗೆದುಕೊಂಡು ದೊಡ್ಡ ಶಿಲುಬೆಯ ಚಿತ್ರವನ್ನು ಅದರ ಮೇಲೆ ಬರೆಯಿರಿ. ಆ ಬಲೂನನ್ನು ಮತ್ತೆ ಆ ಮಗುವಿಗೆ ಕೊಟ್ಟು ಆ ಚಿತ್ರವನ್ನು ಮಕ್ಕಳಿಗೆ ತೋರಿಸಲು ಹೇಳಿ. ಗಾಳಿ ಊದಿರುವ ಇನ್ನೊಂದು ಬಲೂನನ್ನು ತೆಗೆದುಕೊಂಡು ಪ್ರಪಂಚದ ಚಿತ್ರವನ್ನು ಅದರ ಮೇಲೆ ಬರೆಯಿರಿ. ಆ ಬಲೂನನ್ನು ಮತ್ತೆ ಆ ಮಗುವಿಗೆ ಕೊಟ್ಟು ಆ ಚಿತ್ರವನ್ನು ಮಕ್ಕಳಿಗೆ ತೋರಿಸಲು ಹೇಳಿ.







ಒಂದೊಂದಾಗಿ ಪ್ರತಿಯೊಂದು ಚಿತ್ರಕ್ಕೂ ಸರಿಯಾದ ಪದವನ್ನು ಊಹಿಸಲು ಮಕ್ಕಳಿಗೆ ಹೇಳಿ. ಸ್ವಲ್ಪ ಸಮಯ ಕೊಟ್ಟರೂ ಅವರಿಗೆ ಊಹಿಸಲು ಸಾಧ್ಯವಾಗದಿದ್ದರೆ, ಊಹಿಸಲು ಸಹಾಯಕವಾದ ಸೂಚನೆಯನ್ನು ಕೊಡಿ. 'ಬೆಳಕು', 'ಯೇಸು' ಮತ್ತು 'ಲೋಕ' ಎಂಬ ಪದಗಳನ್ನು ಊಹಿಸಿದ ಮೇಲೆ, ಈ ಪದಗಳನ್ನು ಕ್ರಮಬದ್ಧವಾಗಿಡಲು ನಾಲ್ಕನೇ ಸಹಾಯಕನಿಗೆ ಹೇಳಿ—ಮೊದಲನೆಯದಾಗಿ 'ಯೇಸು', ನಂತರ 'ಲೋಕ' ಮತ್ತು ಕೊನೆಯದಾಗಿ 'ಬೆಳಕು'.

ಬೈಬಲಿನ ಕಂಠಪಾಠ ಮಾಡುವ ವಚನವನ್ನು ಹೀಗೆ ವಿವರಿಸಿ: 'ಯೇಸು ಲೋಕಕ್ಕೆ ಬೆಳಕಾಗಿದ್ದಾನೆ'. ಪ್ರತಿಯೊಂದು ಮಗುವಿಗೂ ಹಳದಿ ಬಣ್ಣದ ಒಂದೊಂದು ಬಲೂನನ್ನು ಕೊಟ್ಟು ಅದಕ್ಕೆ ಗಾಳಿ ಊದಲು ಮತ್ತು ಅದರ ಬಾಯಿಗೆ ದಾರಕಟ್ಟಲು ಹೇಳಿ, ಬಳಿಕ ತಮ್ಮ ತಮ್ಮ ಬಲೂನುಗಳ ಮೇಲೆ ಶಿಲುಬೆಯ ಚಿತ್ರವನ್ನು, ಕತ್ತಲೆಯನ್ನು ಬೆಳಕು ಹಿಂದಕ್ಕೆ ತಳ್ಳುತ್ತಿರುವ ಚಿತ್ರವನ್ನು ಮತ್ತು ಲೋಕದ ಚಿತ್ರವನ್ನು ಬರೆಯಲು ಅವರಿಗೆ ಹೇಳಿ. ಬರೆಯಲು ಸಾಧ್ಯವಿರುವವರು ತಮ್ಮ ಹೆಸರನ್ನು ತಮ್ಮ ಬಲೂನಿನ ಮೇಲೆ ಬರೆಯಲಿ. ಆ ಬಳಿಕ ಮಕ್ಕಳಿಗೆ ಬೈಬಲಿನ ಕಂಠಪಾಠ ಮಾಡುವ ವಚನವನ್ನು ಹೇಳಿ.

## ಅನ್ವಯಿಸುಕೊಳ್ಳುವಿಕೆ

***ಯೇಸು ಲೋಕಕ್ಕೆ ಬೆಳಕಾಗಿದ್ದಾನೆ ಎಂದು ಉಪದೇಶಿಸುವ ಅನ್ವಯಿಸುಕೊಳ್ಳುವಿಕೆಯನ್ನು ಬಳಸಿ***


ಯಾವಾಗಲಾದರೂ ನಾವು ಭಯಗೊಂಡರೆ, ಅಥವಾ ಕೆಟ್ಟದ್ದನ್ನು ಯೋಚಿಸಿದರೆ, ಅಥವಾ ಹೇಳಿದರೆ, ಅಥವಾ ಮಾಡಿದರೆ, ಅಥವಾ ನಮಗೆ ಹುಷಾರಿಲ್ಲದಿದ್ದರೆ, ನಾವು ಯೇಸುವಿಗೆ ನೀನು ನನ್ನನ್ನು ಪ್ರೀತಿಸುವುದಕ್ಕಾಗಿ ಮತ್ತು ಈ ಎಲ್ಲ ಕೆಟ್ಟವುಗಳಿಂದ ನನ್ನನ್ನು ಕಾಪಾಡಿದ್ದಕ್ಕಾಗಿ ನಿನಗೆ ವಂದನೆಗಳು ಎಂದು ಹೇಳಬೇಕು.

ಯೇಸು ಲೋಕಕ್ಕೆ ಬೆಳಕಾಗಿದ್ದಾನೆ

ಯೇಸು ಲೋಕಕ್ಕೆ ಬೆಳಕಾಗಿದ್ದಾನೆ ಮತ್ತು ಯೇಸು ಕತ್ತಲೆಗಿಂತ ಶಕ್ತಿಶಾಲಿ. ಕತ್ತಲೆಯನ್ನು ಹಿಂದಕ್ಕೆ ತಳ್ಳಲು ಯೇಸುವಿಗೆ ಮಾತ್ರ ಶಕ್ತಿಯಿದೆ.

**ಪ್ರಾರ್ಥನೆ:** ಸೃಷ್ಟಿಕರ್ತನಾದ ದೇವರೇ, ನೀನು ನನ್ನನ್ನು ಯಾವಾಗಲೂ ಪ್ರೀತಿಸುವುದಕ್ಕಾಗಿ ನಿನಗೆ ವಂದನೆಗಳು. ಯೇಸುವೇ, ನೀನು ಲೋಕಕ್ಕೆ ಬೆಳಕಾಗಿರುವುದಕ್ಕಾಗಿ ನಿನಗೆ ವಂದನೆಗಳು. ಯೇಸುವೇ, ನೀನು ಕತ್ತಲೆಯನ್ನು ಹಿಂದಕ್ಕೆ ತಳ್ಳಲು ಬಂದದ್ದಕ್ಕಾಗಿ ನಿನಗೆ ವಂದನೆಗಳು. ಯೇಸುವೇ, ನಿನ್ನ ಹೆಸರಿನಲ್ಲಿ ನಾವು ಪ್ರಾರ್ಥಿಸುತ್ತೇವೆ. ನಿನಗೆ ವಂದನೆಗಳು. ಆಮೆನ್.

# ಪಾಠ 12



ಯೇಸು
ಕ್ಷಮಿಸುವಾತನು
ಮತ್ತು
ಶಾಂತಿ
ಕೊಡುವಾತನು

## ಒಂದು ಉಪದೇಶದ ಅಂಶ


***ಯೇಸು ಕ್ಷಮಿಸುವಾತನು ಮತ್ತು ಶಾಂತಿ ಕೊಡುವಾತನು***

## ಬೈಬಲಿನ ಕಥೆ

***ಯೇಸು ಕ್ಷಮಿಸುವಾತನು ಮತ್ತು ಶಾಂತಿ ಕೊಡುವಾತನು ಎಂದು ಉಪದೇಶಿಸುವ ಕಥೆಯನ್ನು ಬಳಸಿ***

**ಶುಭವಾರ್ತೆ ಕಥಾಪುಸ್ತಕ ಐದು.** ಪುಟಗಳು 30-36. *ಶಾಂತಿ ಕೊಡುವಾತನು.*

**ಉಪಕರಣಗಳು:** ಕಪ್ಪುಹಲಗೆ ಮತ್ತು ಚಿತ್ರಿಸಲು ಸೀಮೆಸುಣ್ಣ, ಅಥವಾ ಮರಳು ಮತ್ತು ಚಿತ್ರಿಸಲು ಕಡ್ಡಿ, ಅಥವಾ ಕಾಗದ ಮತ್ತು ಚಿತ್ರಿಸಲು ಪೆನ್ಸಿಲ್. ಮಕ್ಕಳಿಗೆ ಡ್ರಾಯಿಂಗ್ ಪುಸ್ತಕ ಅಥವಾ ಕಾಗದ, ಪೆನ್ಸಿಲ್ ಮತ್ತು ರಬ್ಬರ್ ಅವಶ್ಯಕ.



ಚಿತ್ರಿಸಿ ಕಥೆ ಹೇಳಿ. ಪ್ರತಿ ಪುಟವನ್ನು ಓದಿದ ಮೇಲೆ ಮಕ್ಕಳಿಗೆ ಒಂದು ಪ್ರಶ್ನೆ ಕೇಳಿ.

1, 2, 3 ಕಥೆಯನ್ನು ಆರಂಭಿಸಿ...

ಮತ್ತೊಂದು ದಿನ, ಮತ್ತೊಂದು ಸಮಯ, ಮತ್ತೊಂದು ಸ್ಥಳ.



ಒಬ್ಬ ಮನುಷ್ಯ ನನಗೆ ಕಾಣುತ್ತಿದ್ದಾನೆ. ಅವನ ಹೆಸರು ಸಿಮೋನ. ಯೇಸುವು ಸಿಮೋನನಿಗೆ ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ: 'ದಯವಿಟ್ಟು ನನ್ನ ಮನೆಗೆ ಬಾ.' ಸಿಮೋನನ ಮನೆಯೊಳಗೆ ಸಿಮೋನ ಮತ್ತು ಯೇಸು ಇರುವುದು ನನಗೆ ಕಾಣುತ್ತಿದೆ. ಸಿಮೋನನ ಮನೆಯೊಳಗೆ ಒಬ್ಬ ಸ್ತ್ರೀ ಇರುವುದು ನನಗೆ ಕಾಣುತ್ತಿದೆ. ಆ ಸ್ತ್ರೀ ಅನೇಕ ಕೆಟ್ಟವುಗಳನ್ನು ಮಾಡಿದ್ದಾಳೆ. ಆ ಸ್ತ್ರೀ ಯೇಸುವಿನ ಪಾದಗಳಿಗೆ ಅಡ್ಡಬೀಳುತ್ತಿರುವುದು ನನಗೆ ಕಾಣುತ್ತಿದೆ. ಆ ಸ್ತ್ರೀ ಅಳುತ್ತಿರುವುದು ನನಗೆ ಕಾಣುತ್ತಿದೆ. ಆಕೆಯ ಕಣ್ಣೀರು ಯೇಸುವಿನ ಪಾದಗಳ ಮೇಲೆ ಬೀಳುತ್ತಿದೆ. ಆ ಸ್ತ್ರೀ ತನ್ನ ಕೂದಲಿಂದ ಯೇಸುವಿನ ಪಾದಗಳನ್ನು ಶುಚಿಮಾಡುತ್ತಿರುವುದು ನನಗೆ ಕಾಣುತ್ತಿದೆ. ಯೇಸು ಆ ಸ್ತ್ರೀಗೆ ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ: 'ನೀನು ಮಾಡಿದ ಕೆಟ್ಟವುಗಳನ್ನೆಲ್ಲ ನಾನು ಕ್ಷಮಿಸುವೆನು. ಶಾಂತಿಯಿಂದ ಹೋಗು.'



ಯೇಸು ಮಾತ್ರ ಶಾಂತಿ ಕೊಡುತ್ತಾನೆ. ಕತ್ತಲೆಯನ್ನು ಹಿಂದಕ್ಕೆ ತಳ್ಳಲು ಯೇಸುವಿಗೆ ಮಾತ್ರ ಶಕ್ತಿಯಿದೆ.

ಸೃಷ್ಟಿಕರ್ತನಾದ ದೇವರು ಇಲ್ಲಿದ್ದಾನೆ!


## ಅಭಿನಯಾತ್ಮಕ ಹಾಡು

***ಯೇಸು ಕ್ಷಮಿಸುವಾತನು ಮತ್ತು ಶಾಂತಿ ಕೊಡುವಾತನು ಎಂದು ಉಪದೇಶಿಸುವ ಅಭಿನಯಾತ್ಮಕ ಹಾಡನ್ನು ಬಳಸಿ***

ರಾಜಾದಿರಾಜನು ದೇವಾದಿದೇವನು, ಮಹಿಮೆ ಹಲ್ಲೆಲೂಯ!
ಯೇಸು ಸಮಾಧಾನ ಪ್ರಭು, ಮಹಿಮೆ ಹಲ್ಲೆಲೂಯ!

# ಪಾಠ 12

## ದೃಷ್ಟಾಂತ ಪಾಠ



***ಯೇಸು ಕ್ಷಮಿಸುವಾತನು ಮತ್ತು ಶಾಂತಿ ಕೊಡುವಾತನು ಎಂದು ಉಪದೇಶಿಸುವ ದೃಷ್ಟಾಂತ ಪಾಠವನ್ನು ಬಳಸಿ***

**ಉಪಕರಣಗಳು:** ಮಕ್ಕಳು ಸುಲಭವಾಗಿ ಎತ್ತಿಕೊಂಡು ಹೋಗುವಷ್ಟು ತೂಕವುಳ್ಳ 3 ಕಲ್ಲುಗಳು.

ನಿಮಗೆ ಸಹಾಯಕರಾಗಿರಲು ಇಬ್ಬರು ಮಕ್ಕಳಿಗೆ ಹೇಳಿ. ಒಂದು ಮಗುವು (ಆ ಮಗುವಿಗೆ ಬೆರಳುಮಾಡಿ) ಯೇಸುವಾಗಿ ನಟಿಸುವುದೆಂದು ಮತ್ತು ಇನ್ನೊಂದು ಮಗುವು (ಆ ಮಗುವಿಗೆ ಬೆರಳುಮಾಡಿ) ಯೇಸುವನ್ನು ತಿಳಿಯದ, ಯೇಸುವನ್ನು ನೋಡದ ಮತ್ತು ಯೇಸುವನ್ನು ಆರಾಧಿಸದ ಮಗುವಾಗಿ ನಟಿಸುವುದೆಂದು ವಿವರಿಸಿ.

ಯೇಸುವನ್ನು ತಿಳಿಯದ ಮಗುವಾಗಿ ನಟಿಸುತ್ತಿರುವ ಮಗುವು ಒಂದು ಕೆಟ್ಟ ಆಲೋಚನೆ ಮಾಡುತ್ತಿದೆಯೆಂದು ವಿವರಿಸಿ. ಯೇಸುವನ್ನು ತಿಳಿಯದ ಮಗುವಾಗಿ ನಟಿಸುತ್ತಿರುವ ಮಗುವಿಗೆ ಹೊತ್ತುಕೊಂಡು ಹೋಗಲು ಒಂದು ಕಲ್ಲನ್ನು ಕೊಡಿ. ಯೇಸುವನ್ನು ತಿಳಿಯದ ಮತ್ತು ಕೆಟ್ಟ ಆಲೋಚನೆ ಮಾಡುತ್ತಿರುವ ವ್ಯಕ್ತಿಗೆ ಅದು ಈ ಕಲ್ಲಿನಂತಿರುವುದು ಎಂದು ಹೇಳಿ.

ಯೇಸುವನ್ನು ತಿಳಿಯದ ಮಗುವಾಗಿ ನಟಿಸುತ್ತಿರುವ ಮಗುವು ಒಂದು ಕೆಟ್ಟದ್ದನ್ನು ಮಾಡುತ್ತಿದೆಯೆಂದು ವಿವರಿಸಿ. ಯೇಸುವನ್ನು ತಿಳಿಯದ ಮಗುವಾಗಿ ನಟಿಸುತ್ತಿರುವ ಮಗುವಿಗೆ ಹೊತ್ತುಕೊಂಡು ಹೋಗಲು ಮತ್ತೊಂದು ಕಲ್ಲನ್ನು ಕೊಡಿ. ಯೇಸುವನ್ನು ತಿಳಿಯದ ಮತ್ತು ಕೆಟ್ಟದ್ದನ್ನು ಮಾಡುತ್ತಿರುವ ವ್ಯಕ್ತಿಗೆ ಅದು ಈ ಕಲ್ಲಿನಂತಿರುವುದು ಎಂದು ಹೇಳಿ.

ಯೇಸುವನ್ನು ತಿಳಿಯದ ಮಗುವಾಗಿ ನಟಿಸುತ್ತಿರುವ ಮಗುವು ಒಂದು ಕೆಟ್ಟದ್ದನ್ನು ಹೇಳುತ್ತಿದೆಯೆಂದು ವಿವರಿಸಿ. ಯೇಸುವನ್ನು ತಿಳಿಯದ ಮಗುವಾಗಿ ನಟಿಸುತ್ತಿರುವ ಮಗುವಿಗೆ ಹೊತ್ತುಕೊಂಡು ಹೋಗಲು ಮತ್ತೊಂದು ಕಲ್ಲನ್ನು ಕೊಡಿ. ಯೇಸುವನ್ನು ತಿಳಿಯದ ಮತ್ತು ಕೆಟ್ಟದ್ದನ್ನು ಹೇಳುತ್ತಿರುವ ವ್ಯಕ್ತಿಗೆ ಅದು ಈ ಕಲ್ಲಿನಂತಿರುವುದು ಎಂದು ಹೇಳಿ.

ಯೇಸು ಕ್ಷಮಿಸುವಾತನು ಮತ್ತು ಶಾಂತಿ ಕೊಡುವಾತನು

ಯೇಸುವನ್ನು ತಿಳಿಯದ ಮಗುವಾಗಿ ಮೂರು ಕಲ್ಲನ್ನು ಹೊತ್ತುಕೊಂಡು ಹೋಗುತ್ತಿರುವ ಮಗುವಿಗೆ ಈಗ ಯೇಸುವಿನ ಕಡೆಗೆ ನೋಡಲು ಹೇಳಿ. ಯೇಸುವಾಗಿ ನಟಿಸುತ್ತಿರುವ ಮಗುವಿಗೆ ಯೇಸುವನ್ನು ತಿಳಿಯದ ಮಗುವಾಗಿ ನಟಿಸುತ್ತಿರುವ ಮಗುವಿನಿಂದ ಮೂರು ಕಲ್ಲನ್ನು ತೆಗೆದುಕೊಳ್ಳಲು ಹೇಳಿ.

ಯೇಸು ಮಾತ್ರ ಶಾಂತಿ ಕೊಡುವನು. ಕತ್ತಲೆಯನ್ನು ಹಿಂದಕ್ಕೆ ತಳ್ಳಲು ಯೇಸುವಿಗೆ ಮಾತ್ರ ಶಕ್ತಿಯಿದೆ.

# ಪಾಠ 12

## ಬೈಬಲ್ ವಚನವನ್ನು ಕಂಠಪಾಠ ಮಾಡುವ ಆಟ

***ಯೇಸು ಕ್ಷಮಿಸುವಾತನು ಮತ್ತು ಶಾಂತಿ ಕೊಡುವಾತನು ಎಂದು ಉಪದೇಶಿಸುವ ಬೈಬಲ್ ವಚನವನ್ನು ಬಳಸಿ***

**ಲೂಕ 7:50** *'ಯೇಸು ಆ ಸ್ತ್ರೀಗೆ, "ನಿನ್ನ ನಂಬಿಕೆಯಿಂದಲೇ ನಿನಗೆ ರಕ್ಷಣೆ ಆಯಿತು. ಸಮಾಧಾನದಿಂದ ಹೋಗು" ಎಂದು ಹೇಳಿದನು.'*

ಬೈಬಲಿನ ಕಂಠಪಾಠ ಮಾಡುವ ವಚನವನ್ನು ಹೇಳಿ/ಹಾಡಿ ಮತ್ತು ನೀವು (ಟೀಚರ್) ಹಾಡಿದ ನಂತರ ಹಾಡಲು ಮಕ್ಕಳಿಗೆ ಹೇಳಿ. ಬೈಬಲಿನ ಕಂಠಪಾಠ ಮಾಡುವ ವಚನವನ್ನು ಮಕ್ಕಳು ನೆನಪಿಟ್ಟುಕೊಳ್ಳುವ ತನಕ ಮತ್ತೆಮತ್ತೆ ಹೇಳಿ/ಹಾಡಿ.

ಬೈಬಲಿನ ಕಂಠಪಾಠ ಮಾಡುವ ವಚನಕ್ಕೆ ತಬಲದ ತಾಳವನ್ನು ಮತ್ತು ಅಭಿನಯವನ್ನು ಅಳವಡಿಸಿ, ಆಗ ಮಕ್ಕಳಿಗೆ ಅದನ್ನು ಹಾಡಲು ಸಾಧ್ಯವಾಗುವುದು.

ಟೀಚರ್: ಯೇಸು. ಮಕ್ಕಳು: ಯೇಸು. ಟೀಚರ್: ಆ ಸ್ತ್ರೀಗೆ. ಮಕ್ಕಳು: ಆ ಸ್ತ್ರೀಗೆ.

ಟೀಚರ್: ನಿನ್ನ ನಂಬಿಕೆಯಿಂದಲೇ. ಮಕ್ಕಳು: ನಿನ್ನ ನಂಬಿಕೆಯಿಂದಲೇ.

ಟೀಚರ್: ನಿನಗೆ ರಕ್ಷಣೆ ಆಯಿತು. ಮಕ್ಕಳು: ನಿನಗೆ ರಕ್ಷಣೆ ಆಯಿತು.

ಟೀಚರ್: ಸಮಾಧಾನದಿಂದ ಹೋಗು. ಮಕ್ಕಳು: ಸಮಾಧಾನದಿಂದ ಹೋಗು.

ಟೀಚರ್: ಎಂದು ಹೇಳಿದನು. ಮಕ್ಕಳು: ಎಂದು ಹೇಳಿದನು.

ಟೀಚರ್: ಲೂಕ, ಅಧ್ಯಾಯ 7. ಮಕ್ಕಳು: ಲೂಕ, ಅಧ್ಯಾಯ 7.

ಟೀಚರ್: ವಚನ 50. ಮಕ್ಕಳು: ವಚನ 50.

## ಅನ್ವಯಿಸುಕೊಳ್ಳುವಿಕೆ

***ಯೇಸು ಕ್ಷಮಿಸುವಾತನು ಮತ್ತು ಶಾಂತಿ ಕೊಡುವಾತನು ಎಂದು ಉಪದೇಶಿಸುವ ಅನ್ವಯಿಸುಕೊಳ್ಳುವಿಕೆಯನ್ನು ಬಳಸಿ***

ಯೇಸು ಕ್ಷಮಿಸುವಾತನು ಮತ್ತು ಶಾಂತಿ ಕೊಡುವಾತನು

ಯೇಸು ಮಾತ್ರ ಶಾಂತಿ ಕೊಡುವನು. ಕತ್ತಲೆಯನ್ನು ಹಿಂದಕ್ಕೆ ತಳ್ಳಲು ಯೇಸುವಿಗೆ ಮಾತ್ರ ಶಕ್ತಿಯಿದೆ.

ನಾವು ಕೆಟ್ಟದ್ದನ್ನು ಆಲೋಚಿಸುವಾಗ, ಅಥವಾ ಮಾಡುವಾಗ ಅಥವಾ ಕೆಟ್ಟದ್ದನ್ನು ಹೇಳುವಾಗ ನಮಗೆ ಯೇಸು ಗೊತ್ತಿದ್ದರೆ ನಮ್ಮ ಭಾರಗಳನ್ನೆಲ್ಲ ತೆಗೆದುಕೊಂಡದ್ದಕ್ಕಾಗಿ ನಾವು ಆತನಿಗೆ ವಂದನೆ ಸಲ್ಲಿಸಬಲ್ಲೆವು.

**ಪ್ರಾರ್ಥನೆ:** ಯೇಸುವೇ, ನಾನು ಕೆಟ್ಟದ್ದನ್ನು ಆಲೋಚಿಸುವಾಗ, ಅಥವಾ ಕೆಟ್ಟದ್ದನ್ನು ಮಾಡುವಾಗ ಅಥವಾ ಹೇಳುವಾಗ ನೀನು ನನ್ನ ಭಾರಗಳನ್ನೆಲ್ಲ ತೆಗೆದುಕೊಂಡದ್ದಕ್ಕಾಗಿ ನಿನಗೆ ವಂದನೆಗಳು. ಯೇಸುವೇ, ನೀನು ನನ್ನನ್ನು ಕ್ಷಮಿಸುವುದಕ್ಕಾಗಿ ನಿನಗೆ ವಂದನೆಗಳು. ಯೇಸುವೇ, ನೀನು ನನಗೆ ಶಾಂತಿ ಕೊಡುವುದಕ್ಕಾಗಿ ನಿನಗೆ ವಂದನೆಗಳು. ಯೇಸುವೇ, ಆಲೋಚಿಸಲು ಮತ್ತು ಜೀವಿಸಲು ನೀನು ನನಗೆ ಹೊಸ ಮಾರ್ಗಗಳನ್ನು ಕೊಡುವುದಕ್ಕಾಗಿ ನಿನಗೆ ವಂದನೆಗಳು. ಯೇಸುವೇ, ನೀನು ನನ್ನನ್ನು ಸದಾಕಾಲ ಮತ್ತು ಎಂದೆಂದಿಗೂ ಕಾಪಾಡಲು ಬಂದದ್ದಕ್ಕಾಗಿ ನಿನಗೆ ವಂದನೆಗಳು. ಯೇಸು ಎಂಬ ನಿನ್ನ ಹೆಸರಿನಲ್ಲಿ ನಾವು ಪ್ರಾರ್ಥಿಸುತ್ತೇವೆ. ಆಮೆನ್.

**ಬಹುಮಾನ:** ಪ್ರತಿಯೊಂದು ಮಗುವಿಗೆ ಅವರ ಸ್ವಂತಕ್ಕೆ *ಶುಭವಾರ್ತೆ ಕಥಾಪುಸ್ತಕ–ಐದರ* ಪ್ರತಿಯನ್ನು ಕೊಡಿ. ಪ್ರತಿಯೊಂದು ಮಗುವಿಗೆ ಅವರ ಸ್ವಂತ *ಶುಭವಾರ್ತೆ ಕಥಾಪುಸ್ತಕ–ಐದನ್ನು* ಓದಲು ಸಹಾಯಮಾಡಿ.

# ಪಾಠ 13



## ಒಂದು ಉಪದೇಶದ ಅಂಶ

*ಯೇಸು ಗುಣಪಡಿಸುವವನು*

ಯೇಸು ಗುಣಪಡಿಸುವವನು

## ಬೈಬಲಿನ ಕಥೆ

*ಯೇಸು ಗುಣಪಡಿಸುವವನು ಎಂದು ಉಪದೇಶಿಸುವ ಕಥೆಯನ್ನು ಬಳಸಿ*

**ಶುಭವಾರ್ತೆ ಕಥಾಪುಸ್ತಕ ಆರು.** ಪುಟಗಳು 2-15. *ಯೇಸು ಗುಣಪಡಿಸುವವನು.*

ಕಥೆಯನ್ನು ಮಕ್ಕಳೊಡನೆ ನಾಟಕದ ಮೂಲಕ ಅಭಿನಯಿಸಿ. ನಾವೆಲ್ಲರೂ 'ಯೇಸು ಗುಣಪಡಿಸುವವನು' ಎಂಬ ನಾಟಕವನ್ನು ಅಭಿನಯಿಸೋಣ ಎಂದು ಮಕ್ಕಳಿಗೆ ವಿವರಿಸಿ.

2-15 ಪುಟಗಳಿಂದ ಕಥೆಯನ್ನು ಓದಿ, ನೀವು ಓದುವಾಗ ಮಕ್ಕಳಿಗೆ *ಶುಭವಾರ್ತೆ ಕಥಾಪುಸ್ತಕ–ಆರರಲ್ಲಿರುವ* ಚಿತ್ರಗಳನ್ನು ತೋರಿಸಿ.

ಮಕ್ಕಳಿಗೆ ಕಥೆಯ ಬಗ್ಗೆ ಪ್ರಶ್ನೆಗಳನ್ನು ಕೇಳಿ. ಒಂದು ಮಗುವು ತಪ್ಪು ಉತ್ತರ ಕೊಟ್ಟರೆ, ಆ ಮಗುವನ್ನು ಪ್ರೋತ್ಸಾಹಪಡಿಸಿ, ಒಳ್ಳೆಯ ಪ್ರಯತ್ನ ಆದರೆ ನಾನು ಅಪೇಕ್ಷಿಸುತ್ತಿರುವ ಉತ್ತರ ಅದಲ್ಲ ಎಂದು ಹೇಳಿ. ಒಂದು ಮಗುವು ಸರಿಯಾದ ಉತ್ತರ ಕೊಟ್ಟರೆ, ಸರಿಯಾದ ಉತ್ತರ! ಶಬಾಷ್! ಎಂದು ಹೇಳಿ. ಒಂದು ಮಗುವು ಸರಿಯಾದ ಉತ್ತರ ಕೊಡುವ ತನಕ ಅದೇ ಪ್ರಶ್ನೆಯನ್ನು ಕೇಳುತ್ತಿರಿ.

ಕಥೆಯ ಬಗ್ಗೆ ನೀವು ಕೇಳಬಹುದಾದ ಕೆಲವು ಪ್ರಶ್ನೆಗಳು ಇಲ್ಲಿವೆ.

**ಸಹಾಯಕ್ಕಾಗಿ ಯಾಯಿರನು ಯಾರ ಬಳಿಗೆ ಓಡಿಹೋದನು?** ಯೇಸುವಿನ ಬಳಿಗೆ.

**'ಆಕೆಯನ್ನು ಮುಟ್ಟು, ಆಗ ಆಕೆಗೆ ಗುಣವಾಗುವುದು' ಎಂದು ಯಾಯಿರನು ಯಾರಿಗೆ ಹೇಳಿದನು?** ಯೇಸುವಿಗೆ.

**'ಆಕೆಯನ್ನು ಮುಟ್ಟು, ಆಗ ಆಕೆ ಬದುಕುವಳು' ಎಂದು ಯಾಯಿರನು ಯಾರಿಗೆ ಹೇಳಿದನು?** ಯೇಸುವಿಗೆ.


**'ಯೇಸುವಿನ ಒಂದೇ ಸ್ಪರ್ಶದಿಂದ ನನಗೆ ಗುಣವಾಯಿತು' ಎಂದು ಯಾರು ಹೇಳಿದರು?** ಸ್ತ್ರೀ.

**ಕಾಯಿಲೆಯಿಂದ ಆಗ ಸತ್ತುಹೋಗಿದ್ದ ಚಿಕ್ಕ ಬಾಲಕಿಗೆ ಯೇಸು ಏನು ಹೇಳಿದನು?** ಚಿಕ್ಕ ಬಾಲಕಿ, ಎದ್ದೇಳು!

**ಯೇಸು ಮಾತಾಡಿದ ಮೇಲೆ ಸತ್ತುಹೋಗಿದ್ದ ಚಿಕ್ಕ ಬಾಲಕಿಗೆ ಏನಾಯಿತು?** ಚಿಕ್ಕ ಬಾಲಕಿಗೆ ಜೀವ ಬಂತು!


**ಕತ್ತಲೆಯನ್ನು ಹಿಂದಕ್ಕೆ ತಳ್ಳಲು ಯಾರಿಗೆ ಶಕ್ತಿಯಿದೆ?** ಯೇಸುವಿಗೆ.

# ಪಾಠ 13



## ಅಭಿನಯಾತ್ಮಕ ಹಾಡು

***ಯೇಸು ಗುಣಪಡಿಸುವನು ಎಂದು ಉಪದೇಶಿಸುವ ಅಭಿನಯಾತ್ಮಕ ಹಾಡನ್ನು ಬಳಸಿ***



ಹಲ್ಲೆಲೂ, ಹಲ್ಲೆಲೂ, ಹಲ್ಲೆಲೂ ಹಲ್ಲೆಲೂಯ. ಯೇಸು ವಾಸಿ ಮಾಡ್ವನು!

ಯೇಸು ವಾಸಿ ಮಾಡ್ವನು! ಹಲ್ಲೆಲೂಯ. ಯೇಸು ವಾಸಿ ಮಾಡ್ವನು! ಹಲ್ಲೆಲೂಯ.

ಯೇಸು ವಾಸಿ ಮಾಡ್ವನು! ಹಲ್ಲೆಲೂಯ. ಯೇಸು ವಾಸಿ ಮಾಡ್ವನು!

## ದೃಷ್ಟಾಂತ ಪಾಠ

***ಯೇಸು ಗುಣಪಡಿಸುವನು ಎಂದು ಉಪದೇಶಿಸುವ ದೃಷ್ಟಾಂತ ಪಾಠವನ್ನು ಬಳಸಿ***

ಒಂದು ಮಗುವಿಗೆ ನಿಮಗೆ ಸಹಾಯಕನಾಗಿರಲು ಹೇಳಿ. ಆ ಮಗುವಿಗೆ ಮುಂದೆಬಂದು ನಿಮ್ಮ ಎದುರಿನಲ್ಲಿ ನಿಮಗೆ ಬೆನ್ನು ಮಾಡಿ, ಮಕ್ಕಳ ಕಡೆಗೆ ಮುಖಮಾಡಿ ನಿಂತುಕೊಳ್ಳಲು ಹೇಳಿ. ನೀವು (ಟೀಚರ್) ಆ ಮಗುವಿಗೆ, ಹಿಂದಕ್ಕೆ ಬೀಳಬೇಕೆಂದೂ ಬೀಳದಂತೆ ನೀವು ಹಿಡಿದುಕೊಳ್ಳುವುದಾಗಿಯೂ ಹೇಳಿ.

ಆ ಮಗುವನ್ನು ಹಿಡಿದುಕೊಂಡ ಮೇಲೆ, ನೀವು ಆ ಮಗುವಿಗೆ ಗೊತ್ತಿತ್ತೆಂದು ಮತ್ತು ನಿಮ್ಮ ಮೇಲೆ ಆ ಮಗುವಿಗೆ ನಂಬಿಕೆ ಇತ್ತೆಂದು ವಿವರಿಸಿ. ನೀವು ಹಿಡಿದುಕೊಳ್ಳುತ್ತೀರೆಂದು ಆ ಮಗುವಿಗೆ ಗೊತ್ತಿತ್ತು ಮತ್ತು ನಂಬಿಕೆಯಿತ್ತು. ಇದು ಕಥೆಯಲ್ಲಿರುವ ಸ್ತ್ರೀಯಂತೆ ಮತ್ತು ಯಾಯಿರನಂತೆ. ಅವರಿಬ್ಬರಿಗೂ ಗೊತ್ತಿತ್ತು ಮತ್ತು ಅವರಿಬ್ಬರಿಗೂ ಯೇಸುವಿನಲ್ಲಿ ನಂಬಿಕೆಯಿತ್ತು. ಯೇಸು ಗುಣಪಡಿಸುತ್ತಾನೆಂದು ಅವರಿಬ್ಬರಿಗೂ ಗೊತ್ತಿತ್ತು ಮತ್ತು ನಂಬಿಕೆಯಿತ್ತು.

ಯೇಸು ಗುಣಪಡಿಸುವನು

**ಸಾಕ್ಷಿಕೊಡಿ:** ಸೃಷ್ಟಿಕರ್ತನಾದ ದೇವರು ನಿಮ್ಮನ್ನು ಹೇಗೆ ಗುಣಪಡಿಸಿದನೆಂದು ಮಕ್ಕಳಿಗೆ ತಿಳಿಸಿ ಮತ್ತು ತೋರಿಸಿ. ಅಥವಾ ದೈಹಿಕವಾಗಿಯಾಗಲೀ ಮಾನಸಿಕವಾಗಿಯಾಗಲೀ ತೊಂದರೆಗೊಳಗಾಗಿ ಕಾಯಿಲೆಯಾಗಿದ್ದು ಈಗ ಗುಣಮುಖರಾಗಿರುವ ಯಾರಾದರೂ ನಿಮಗೆ ಗೊತ್ತಿದ್ದರೆ, ಅವರಿಗೆ ಬಂದು ಸೃಷ್ಟಿಕರ್ತನಾದ ದೇವರು ತಮ್ಮನ್ನು ಹೇಗೆ ಗುಣಪಡಿಸಿದನೆಂದು ಮಕ್ಕಳಿಗೆ ತಿಳಿಸಲು ಮತ್ತು ತೋರಿಸಲು ಹೇಳಿ.

## ಬೈಬಲ್ ವಚನವನ್ನು ಕಂಠಪಾಠ ಮಾಡುವ ಆಟ

***ಯೇಸು ಗುಣಪಡಿಸುವನು ಎಂದು ಉಪದೇಶಿಸುವ ಬೈಬಲ್ ವಚನವನ್ನು ಬಳಸಿ***

**ಲೂಕ 6:19** *'ಜನರೆಲ್ಲರೂ ಯೇಸುವನ್ನು ಮುಟ್ಟುವುದಕ್ಕೆ ಪ್ರಯತ್ನಿಸಿದರು, ಏಕೆಂದರೆ ಆತನಿಂದ ಶಕ್ತಿಯು ಹರಿದುಬಂದು ಎಲ್ಲರನ್ನೂ ಗುಣಪಡಿಸುತ್ತಿತ್ತು!'*

### ಪದಗಳಿಲ್ಲದ ಸ್ಪರ್ಧೆ

ಮಕ್ಕಳನ್ನು ಎರಡು ತಂಡಗಳನ್ನಾಗಿ ಮಾಡಿ. ಮೊದಲನೆ ತಂಡಕ್ಕೆ ತಮ್ಮ ನಾಯಕನನ್ನು ಆರಿಸಿಕೊಳ್ಳಲು ಹೇಳಿ. ಮೊದಲನೆ ತಂಡದ ನಾಯಕನು ಮುಂದೆ ಬರಬೇಕು. ಮೊದಲನೆ ತಂಡದ ನಾಯಕನಿಗೆ ಬೈಬಲಿನ

ಕಂಠಪಾಠ ಮಾಡುವ ವಚನದ ಮೊದಲನೆ ಭಾಗವನ್ನು ಹೇಳಿ: 'ಜನರೆಲ್ಲರೂ ಯೇಸುವನ್ನು ಮುಟ್ಟುವುದಕ್ಕೆ ಪ್ರಯತ್ನಿಸಿದರು.' ಬೇರೆ ಯಾವ ಮಕ್ಕಳಿಗೂ ಅದು ಕೇಳಿಸದಂತೆ ನೋಡಿಕೊಳ್ಳಿ. ಬೈಬಲಿನ ಕಂಠಪಾಠ ಮಾಡುವ ವಚನವನ್ನು ಅಭಿನಯದ (ಬಾಯಿಂದ ಹೇಳದೆ) ಮೂಲಕ ತೋರಿಸುವಂತೆ ಮೊದಲನೆ ತಂಡದ ನಾಯಕನಿಗೆ ಹೇಳಿ. ಮೊದಲನೆ ತಂಡದ ಮಕ್ಕಳು ಆ ವಾಕ್ಯವನ್ನು ಊಹಿಸಲು ಪ್ರಯತ್ನಿಸಲಿ.

ಯೇಸು ಗುಣಪಡಿಸುವನು

ಸ್ವಲ್ಪ ಸಮಯ ಕೊಟ್ಟರೂ ಮೊದಲನೆ ತಂಡಕ್ಕೆ ಆ ವಾಕ್ಯವನ್ನು ಊಹಿಸಲು ಸಾಧ್ಯವಾಗದಿದ್ದರೆ, ಎರಡನೆ ತಂಡದ ಮಕ್ಕಳಿಗೆ ಆ ವಾಕ್ಯವನ್ನು ಊಹಿಸಲು ಪ್ರಯತ್ನಿಸುವಂತೆ ತಿಳಿಸಿ. ಸ್ವಲ್ಪ ಸಮಯ ಕೊಟ್ಟರೂ ಎರಡನೆ ತಂಡಕ್ಕೆ ಆ ವಾಕ್ಯವನ್ನು ಊಹಿಸಲು ಸಾಧ್ಯವಾಗದಿದ್ದರೆ, ಮಕ್ಕಳಿಗೆ ಊಹಿಸಲು ಸಹಾಯಕವಾದ ಕೆಲವು ಸೂಚನೆಗಳನ್ನು ಕೊಡಿ.

ನೀವು ಮಕ್ಕಳಿಗೆ ಆ ವಾಕ್ಯವನ್ನು ತಿಳಿಸಿದ ಮೇಲೆ ಅಥವಾ ಅವರು ಸರಿಯಾಗಿ ಊಹಿಸಿದ ಮೇಲೆ, ಎರಡನೆ ತಂಡದ ನಾಯಕನು ಮುಂದೆ ಬರಬೇಕು. ಎರಡನೆ ತಂಡದ ನಾಯಕನಿಗೆ ಬೈಬಲಿನ ಕಂಠಪಾಠ ಮಾಡುವ ವಚನದ ಎರಡನೆ ಭಾಗವನ್ನು ಹೇಳಿ. 'ಏಕೆಂದರೆ ಆತನಿಂದ ಶಕ್ತಿಯು ಹರಿದುಬಂದು.' ಬೇರೆ ಯಾವ ಮಕ್ಕಳಿಗೂ ಅದು ಕೇಳಿಸದಂತೆ ನೋಡಿಕೊಳ್ಳಿ. ಬೈಬಲಿನ ಕಂಠಪಾಠ ಮಾಡುವ ವಚನವನ್ನು ಅಭಿನಯದ (ಬಾಯಿಂದ ಹೇಳದೆ) ಮೂಲಕ ತೋರಿಸುವಂತೆ ಎರಡನೆ ತಂಡದ ನಾಯಕನಿಗೆ ಹೇಳಿ. ಎರಡನೆ ತಂಡದ ಮಕ್ಕಳು ಆ ವಾಕ್ಯವನ್ನು ಊಹಿಸಲು ಪ್ರಯತ್ನಿಸಲಿ.

ಸ್ವಲ್ಪ ಸಮಯ ಕೊಟ್ಟರೂ ಎರಡನೆ ತಂಡಕ್ಕೆ ಆ ವಾಕ್ಯವನ್ನು ಊಹಿಸಲು ಸಾಧ್ಯವಾಗದಿದ್ದರೆ, ಮೊದಲನೆ ತಂಡದ ಮಕ್ಕಳಿಗೆ ಆ ವಾಕ್ಯವನ್ನು ಊಹಿಸಲು ಪ್ರಯತ್ನಿಸುವಂತೆ ತಿಳಿಸಿ. ಸ್ವಲ್ಪ ಸಮಯ ಕೊಟ್ಟರೂ ಮೊದಲನೆ ತಂಡಕ್ಕೆ ಆ ವಾಕ್ಯವನ್ನು ಊಹಿಸಲು ಸಾಧ್ಯವಾಗದಿದ್ದರೆ, ಮಕ್ಕಳಿಗೆ ಊಹಿಸಲು ಸಹಾಯಕವಾದ ಕೆಲವು ಸೂಚನೆಗಳನ್ನು ಕೊಡಿ.

ನೀವು ಮಕ್ಕಳಿಗೆ ಆ ವಾಕ್ಯವನ್ನು ತಿಳಿಸಿದ ಮೇಲೆ ಅಥವಾ ಅವರು ಸರಿಯಾಗಿ ಊಹಿಸಿದ ಮೇಲೆ, ಬೈಬಲಿನ ಕಂಠಪಾಠ ಮಾಡುವ ವಚನದ ಕೊನೆಯ ಈ ಭಾಗವನ್ನು ಮಕ್ಕಳಿಗೆ ತಿಳಿಸಿ: 'ಎಲ್ಲರನ್ನೂ ಗುಣಪಡಿಸುತ್ತಿತ್ತು.'

ಬೈಬಲಿನ ಕಂಠಪಾಠ ಮಾಡುವ ಇಡೀ ವಚನವನ್ನು ಹೇಳಲು ಮಕ್ಕಳಿಗೆ ತಿಳಿಸಿ.


## ಅನ್ವಯಿಸುಕೊಳ್ಳುವಿಕೆ

***ಯೇಸು ಗುಣಪಡಿಸುವನು ಎಂದು ಉಪದೇಶಿಸುವ ಅನ್ವಯಿಸುಕೊಳ್ಳುವಿಕೆಯನ್ನು ಬಳಸಿ***

**ನಿಮ್ಮಲ್ಲಿ ಹುಷಾರಿಲ್ಲದ ಯಾರಾದರೂ ಯೇಸುವಿನಿಂದ ಗುಣಹೊಂದಲು ಇಷ್ಟಪಡುತ್ತೀರಾ? ಎಂದು ಮಕ್ಕಳನ್ನು ಕೇಳಿ.**
ಹುಷಾರಿಲ್ಲದೆ ಯೇಸುವಿನಿಂದ ಗುಣಹೊಂದಲು ಇಷ್ಟಪಡುವ ಮಕ್ಕಳಿಗೆ, ಅವರಿಗೋಸ್ಕರ ಪ್ರಾರ್ಥಿಸಬೇಕೇ ಎಂದು ಕೇಳಿ. ಹುಷಾರಿಲ್ಲದ ಪ್ರತಿಯೊಬ್ಬರಿಗಾಗಿ ಪ್ರಾರ್ಥಿಸಲು ಮಕ್ಕಳಿಗೆ ಹೇಳಿ, ಹೇಗೆ ಪ್ರಾರ್ಥಿಸಬೇಕೆಂದು ಮಕ್ಕಳಿಗೆ ಮತ್ತು ನಿಮಗೆ ಮಾರ್ಗದರ್ಶನ ಮಾಡಲು ದೇವರಾತ್ಮನಿಗೆ ಬಿಟ್ಟುಕೊಡಿ.

**ಪ್ರಾರ್ಥನೆ:** ಕೃತಜ್ಞತಾಪ್ರಾರ್ಥನೆಯೊಡನೆ ಮತ್ತು ಯೇಸುವಿನ ಹೆಸರಿನಲ್ಲಿ ಸ್ತೋತ್ರ ಸಲ್ಲಿಸುವುದರೊಡನೆ ಮುಕ್ತಾಯ ಮಾಡಿ.

# ಪಾಠ 14







ಯೇಸು ನಿಮ್ಮನ್ನು ಬಿಡುಗಡೆ ಮಾಡುವನು!

## ಒಂದು ಉಪದೇಶದ ಅಂಶ


***ಯೇಸು ನಿಮ್ಮನ್ನು ಬಿಡುಗಡೆ ಮಾಡುವನು!***

## ಬೈಬಲಿನ ಕಥೆ

***ಯೇಸು ನಿಮ್ಮನ್ನು ಬಿಡುಗಡೆ ಮಾಡುವನು! ಎಂದು ಉಪದೇಶಿಸುವ ಕಥೆಯನ್ನು ಬಳಸಿ***

**ಶುಭವಾರ್ತೆ ಕಥಾಪುಸ್ತಕ ಆರು.** ಪುಟಗಳು 16-21. *ನನಗೆ ಬಿಡುಗಡೆ ಆಯಿತು.*

**ಉಪಕರಣಗಳು:** ಕಪ್ಪುಹಲಗೆ ಮತ್ತು ಚಿತ್ರಿಸಲು ಸೀಮೆಸುಣ್ಣ, ಅಥವಾ ಮರಳು ಮತ್ತು ಚಿತ್ರಿಸಲು ಕಡ್ಡಿ, ಅಥವಾ ಕಾಗದ ಮತ್ತು ಚಿತ್ರಿಸಲು ಪೆನ್ಸಿಲ್. ಮಕ್ಕಳಿಗೆ ಡ್ರಾಯಿಂಗ್ ಪುಸ್ತಕ ಅಥವಾ ಕಾಗದ, ಪೆನ್ಸಿಲ್ ಮತ್ತು ರಬ್ಬರ್ ಅವಶ್ಯಕ.






ಚಿತ್ರಿಸಿ ಕಥೆ ಹೇಳಿ. ಪ್ರತಿ ಪುಟವನ್ನು ಓದಿದ ಮೇಲೆ ಮಕ್ಕಳಿಗೆ ಒಂದು ಪ್ರಶ್ನೆ ಕೇಳಿ.

1, 2, 3 ಕಥೆಯನ್ನು ಆರಂಭಿಸಿ...

ಮತ್ತೊಂದು ದಿನ, ಮತ್ತೊಂದು ಸಮಯ, ಮತ್ತೊಂದು ಸ್ಥಳ. ಯೇಸು ಮತ್ತು ಆತನ ಶಿಷ್ಯರು ನದಿಯ ಆಚೆದಡಕ್ಕೆ ಹೋಗುತ್ತಿರುವುದು ನನಗೆ ಕಾಣುತ್ತಿದೆ. ಹಂದಿಗಳು ನದಿಯ ಬಳಿ ನಿಂತಿರುವುದು ನನಗೆ ಕಾಣುತ್ತಿದೆ.



ಅಲ್ಲಿ ಒಬ್ಬ ವ್ಯಕ್ತಿ ಇರುವುದು ನನಗೆ ಕಾಣುತ್ತಿದೆ. ಆ ವ್ಯಕ್ತಿಯೊಳಗೆ ಅನೇಕ ಕೆಟ್ಟ ಆತ್ಮಗಳಿವೆ. ಆ ವ್ಯಕ್ತಿಯೊಳಗೆ ಇರುವ ಅನೇಕ ಕೆಟ್ಟ ಆತ್ಮಗಳಿಗೆ ಯೇಸು ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ: 'ಆ ವ್ಯಕ್ತಿಯೊಳಗಿಂದ ಹೊರಬಂದು ನದಿಯ ಬಳಿ ನಿಂತಿರುವ ಹಂದಿಗಳ ಒಳಗೆ ಹೋಗಿ.' ಆ ವ್ಯಕ್ತಿಯೊಳಗಿಂದ ಅನೇಕ ಕೆಟ್ಟ ಆತ್ಮಗಳು ಹೊರಬಂದು ನದಿಯ ಬಳಿ ನಿಂತಿರುವ ಹಂದಿಗಳ ಒಳಗೆ ಹೋಗುತ್ತಿರುವುದು ನನಗೆ ಕಾಣುತ್ತಿದೆ. ಹಂದಿಗಳು ನದಿಯೊಳಕ್ಕೆ ಓಡಿಹೋಗುತ್ತಿರುವುದು ನನಗೆ ಕಾಣುತ್ತಿದೆ. ಹಂದಿಗಳು ಸತ್ತುಹೋದವು. ಒಬ್ಬ ವ್ಯಕ್ತಿ ಯೇಸುವಿಗೆ ಹಾಡುತ್ತಿರುವುದು ನನಗೆ ಕೇಳಿಸುತ್ತಿದೆ. ಯೇಸು ಆ ವ್ಯಕ್ತಿಗೆ ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ: 'ಹೋಗು, ಸೃಷ್ಟಿಕರ್ತನು ನಿನಗೆ ಮಾಡಿರುವುದನ್ನು ಎಲ್ಲ ಜನರಿಗೆ ತಿಳಿಸು.'





ಆ ವ್ಯಕ್ತಿಯು ಎಲ್ಲ ಜನರಿಗೆ ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ: 'ಯೇಸು ಕೆಟ್ಟ ಆತ್ಮಗಳಿಗೆ ನನ್ನೊಳಗಿಂದ ಹೊರಬರಲು ಹೇಳಿದನು. ಕೆಟ್ಟ ಆತ್ಮಗಳು ನನ್ನೊಳಗಿಂದ ಹೊರಬಂದವು. ಯೇಸು ನನ್ನನ್ನು ಬಿಡುಗಡೆ ಮಾಡಿದನು.' ಯೇಸು ಲೋಕಕ್ಕೆ ಬೆಳಕಾಗಿದ್ದಾನೆ. ಕತ್ತಲೆಯನ್ನು ಹಿಂದಕ್ಕೆ ತಳ್ಳಲು ಯೇಸುವಿಗೆ ಮಾತ್ರ ಶಕ್ತಿಯಿದೆ.







ಸೃಷ್ಟಿಕರ್ತನಾದ ದೇವರು ಇಲ್ಲಿದ್ದಾನೆ!

**ಮಕ್ಕಳಿಗೆ ಕಥೆಯನ್ನು ಚಿತ್ರಿಸಲು ಹೇಳಿ.**

# ಪಾಠ 14






## ಅಭಿನಯಾತ್ಮಕ ಹಾಡು

***ಯೇಸು ನಿಮ್ಮನ್ನು ಬಿಡುಗಡೆ ಮಾಡುವನು! ಎಂದು ಉಪದೇಶಿಸುವ ಅಭಿನಯಾತ್ಮಕ ಹಾಡನ್ನು ಬಳಸಿ***

ಯೇಸು ನಾಮದಲ್ಲಿ, ಯೇಸು ನಾಮದಲ್ಲಿ
ಉಂಟೆಮಗೆ ಜಯ! ಹಲ್ಲೆಲೂಯ!

ಯೇಸು ನಾಮದಲ್ಲಿ, ಯೇಸು ನಾಮದಲ್ಲಿ
ಸೈತಾನ ಓಡಿಹೋಗುವ! ಹಲ್ಲೆಲೂಯ!

ಯೇಸು ಎಂಬ ನಾಮದಲ್ಲಿ
ಉಂಟೆಮಗೆ ಜಯ! ಹಲ್ಲೆಲೂಯ!



ಯೇಸು ನಿಮ್ಮನ್ನು ಬಿಡುಗಡೆ ಮಾಡುವನು!

## ದೃಷ್ಟಾಂತ ಪಾಠ

***ಯೇಸು ನಿಮ್ಮನ್ನು ಬಿಡುಗಡೆ ಮಾಡುವನು! ಎಂದು ಉಪದೇಶಿಸುವ ದೃಷ್ಟಾಂತ ಪಾಠವನ್ನು ಬಳಸಿ***

**ಉಪಕರಣಗಳು:** ದಾರ. ಕಣ್ಣಿಗೆ ಕಟ್ಟಲು ಬಟ್ಟೆ.

ನಿಮಗೆ ಸಹಾಯಕರಾಗಿರಲು ಇಬ್ಬರು ಮಕ್ಕಳಿಗೆ ಹೇಳಿ. ಒಂದು ಮಗುವು (ಆ ಮಗುವಿಗೆ ಬೆರಳುಮಾಡಿ) ಯೇಸುವಾಗಿ ನಟಿಸುವುದೆಂದು ಮತ್ತು ಇನ್ನೊಂದು ಮಗುವು (ಆ ಮಗುವಿಗೆ ಬೆರಳುಮಾಡಿ) ಅನೇಕ ದೆವ್ವಗಳಿಂದ ಹಿಡಿಯಲ್ಪಟ್ಟಿರುವ ವ್ಯಕ್ತಿಯಂತೆ ನಟಿಸುವುದೆಂದು ವಿವರಿಸಿ.

ಅನೇಕ ದೆವ್ವಗಳಿಂದ ಹಿಡಿಯಲ್ಪಟ್ಟಿರುವ ವ್ಯಕ್ತಿಯಂತೆ ನಟಿಸುತ್ತಿರುವ ಮಗುವನ್ನು ದಾರದಿಂದ ಕಟ್ಟಿರಿ ಮತ್ತು ಆ ಮಗುವಿನ ಕಣ್ಣುಗಳಿಗೆ ಬಟ್ಟೆಕಟ್ಟಿ. ಅನೇಕ ಕೆಟ್ಟ ಆತ್ಮಗಳನ್ನು ಹೊಂದಿರುವ ವ್ಯಕ್ತಿಗೆ ಇದೇ ರೀತಿ ಇರುವುದು, ಅಂಥವರು ಸಿಕ್ಕಿಕೊಂಡಿದ್ದಾರೆ ಮತ್ತು ಕತ್ತಲೆಯಲ್ಲಿ ತಪ್ಪಿಹೋಗಿದ್ದಾರೆ.

ಯೇಸುವಾಗಿ ನಟಿಸುತ್ತಿರುವ ಮಗುವಿಗೆ, ಅನೇಕ ದೆವ್ವಗಳಿಂದ ಹಿಡಿಯಲ್ಪಟ್ಟಿರುವ ವ್ಯಕ್ತಿಯಂತೆ ನಟಿಸುತ್ತಿರುವ ಮಗುವಿನ ಕಣ್ಣುಗಳಿಗೆ ಕಟ್ಟಿದ ಬಟ್ಟೆಯನ್ನು ತೆಗೆಯಲು ಮತ್ತು ಕಟ್ಟಿದ ದಾರಗಳನ್ನು ಬಿಚ್ಚಲು ಹೇಳಿ.

ಯೇಸುವಿನಿಂದ ಬಿಡುಗಡೆ ಮಾಡಲ್ಪಟ್ಟ ಮಗುವಿಗೆ ಅತ್ಯಾನಂದದಿಂದ ಮೇಲಕ್ಕೆ ಕೆಳಕ್ಕೆ ನೆಗೆಯುತ್ತಾ ಯೇಸುವಿಗೆ ವಂದನೆ ಸಲ್ಲಿಸಲು ಹೇಳಿ.


ಯೇಸು ಜನರನ್ನು ಬಿಡುಗಡೆ ಮಾಡಿದಾಗ ಇದೇ ರೀತಿ ಇರುವುದು ಎಂದು ವಿವರಿಸಿ. ಯೇಸು ಲೋಕಕ್ಕೆ ಬೆಳಕಾಗಿದ್ದಾನೆ. ಕತ್ತಲೆಯನ್ನು ಹಿಂದಕ್ಕೆ ತಳ್ಳಲು ಯೇಸುವಿಗೆ ಮಾತ್ರ ಶಕ್ತಿಯಿದೆ.

# ಪಾಠ 14


## ಬೈಬಲ್ ವಚನವನ್ನು ಕಂಠಪಾಠ ಮಾಡುವ ಆಟ



***ಯೇಸು ನಿಮ್ಮನ್ನು ಬಿಡುಗಡೆ ಮಾಡುವನು!* ಎಂದು ಉಪದೇಶಿಸುವ ಬೈಬಲ್ ವಚನವನ್ನು ಬಳಸಿ**



**ಯೋಹಾನ 8:36** *‘ಆದ್ದರಿಂದ ಮಗನು (ಯೇಸು) ನಿಮ್ಮನ್ನು ಬಿಡುಗಡೆ ಮಾಡಿದರೆ, ನೀವು ನಿಜವಾಗಿಯೂ ಬಿಡುಗಡೆಯಾಗಿರುವಿರಿ.’*



**ಚಿತ್ರವಾಕ್ಯಗಳ ಪಜಲ್:** ಒಂದು ಕಾಗದದ ಮೇಲೆ, ‘ಆದ್ದರಿಂದ ಮಗನು (ಯೇಸು)’ ಎಂದು ಬರೆಯಿರಿ. ಇನ್ನೊಂದು ಕಾಗದದ ಮೇಲೆ ಯೇಸುವು ಶಿಲುಬೆಯೊಂದಿಗಿರುವ ಚಿತ್ರವನ್ನು ಬರೆಯಿರಿ. ಇನ್ನೊಂದು ಕಾಗದದ ಮೇಲೆ, ‘ನಿಮ್ಮನ್ನು ಬಿಡುಗಡೆ ಮಾಡಿದರೆ’ ಎಂದು ಬರೆಯಿರಿ. ಇನ್ನೊಂದು ಕಾಗದದ ಮೇಲೆ ಕಟ್ಟುಹಾಕಲ್ಪಟ್ಟ ಒಬ್ಬನನ್ನು ಯೇಸು ಬಿಚ್ಚುತ್ತಿರುವ ಚಿತ್ರವನ್ನು ಬರೆಯಿರಿ. ಇನ್ನೊಂದು ಕಾಗದದ ಮೇಲೆ, ‘ನೀವು ನಿಜವಾಗಿಯೂ ಬಿಡುಗಡೆಯಾಗಿರುವಿರಿ’ ಎಂದು ಬರೆಯಿರಿ. ಇನ್ನೊಂದು ಕಾಗದದ ಮೇಲೆ ಬಿಡುಗಡೆಯಾಗಿರುವ ಒಬ್ಬನ ಚಿತ್ರವನ್ನು ಬರೆಯಿರಿ.

ಮಕ್ಕಳು ಬರುವುದಕ್ಕಿಂತ ಮೊದಲೇ ಪ್ರತಿಯೊಂದು ಕಾಗದವನ್ನು ಬೇರಬೇರೆ ಸ್ಥಳಗಳಲ್ಲಿ ಬಚ್ಚಿಡಿ.

ಮಕ್ಕಳು ಕಂಡುಹಿಡಿಯಬೇಕಾಗಿರುವ ಮುಖ್ಯವಾದ ಸಂದೇಶವಿದೆಯೆಂದು ಮಕ್ಕಳಿಗೆ ಹೇಳಿ. ಈ ಸ್ಥಳದಲ್ಲಿ 6 ಕಾಗದಗಳನ್ನು ಬಚ್ಚಿಡಲಾಗಿದೆ (ಕೋಣೆ, ಮನೆ, ಚರ್ಚ್ ಅಥವಾ ಹಳ್ಳಿ ಪ್ರದೇಶ), ಪ್ರತಿಯೊಂದು ಕಾಗದದಲ್ಲಿ ಸಂದೇಶದ ಒಂದು ಭಾಗವಿದೆ.

1, 2, 3, ಬಚ್ಚಿಟ್ಟಿರುವ ಸಂದೇಶವನ್ನು ಹುಡುಕಲಾರಂಭಿಸಿ...

ಮಕ್ಕಳು ಎಲ್ಲ 6 ಕಾಗದಗಳನ್ನು ಕಂಡುಹಿಡಿದಾಗ, ಆ ಪದಗಳನ್ನು ಅವುಗಳಿಗೆ ಸರಿಹೊಂದುವ ಚಿತ್ರಗಳೊಂದಿಗೆ ಹೊಂದಾಣಿಕೆ ಮಾಡಲು ಹೇಳಿ. ಮಕ್ಕಳು ಓದಲು ಇನ್ನೂ ಕಲಿತಿಲ್ಲದಿದ್ದರೆ, ಮಕ್ಕಳು ಆ ಪದಗಳನ್ನು ಜ್ಞಾಪಕದಲ್ಲಿಟ್ಟುಕೊಳ್ಳಲು ಸಹಾಯಕವಾಗುವಂತೆ ಚಿತ್ರಗಳನ್ನು ತೋರಿಸುತ್ತಾ ಆ ಪದಗಳನ್ನು ಬಾಯಿಂದ ಹೇಳಿ. ಪದಗಳನ್ನು/ಚಿತ್ರಗಳನ್ನು ಕ್ರಮಬದ್ಧವಾಗಿಡಲು ಹೇಳಿ ಮತ್ತು ಮಕ್ಕಳು ಬೈಬಲಿನ ಕಂಠಪಾಠ ಮಾಡುವ ವಚನವನ್ನು ಜ್ಞಾಪಕದಲ್ಲಿಟ್ಟುಕೊಳ್ಳುವ ತನಕ ಆ ವಚನವನ್ನು ಗಟ್ಟಿಯಾಗಿ ಮತ್ತೆಮತ್ತೆ ಹೇಳಿ.

ಯೇಸು ನಿಮ್ಮನ್ನು ಬಿಡುಗಡೆ ಮಾಡುವನು!


## ಅನ್ವಯಿಸುಕೊಳ್ಳುವಿಕೆ

***ಯೇಸು ನಿಮ್ಮನ್ನು ಬಿಡುಗಡೆ ಮಾಡುವನು!* ಎಂದು ಉಪದೇಶಿಸುವ ಅನ್ವಯಿಸುಕೊಳ್ಳುವಿಕೆಯನ್ನು ಬಳಸಿ**

ಯೇಸು ಕತ್ತಲೆಯನ್ನು ಹಿಂದಕ್ಕೆ ತಳ್ಳುವನು ಮತ್ತು ನಮ್ಮನ್ನು ಎಲ್ಲ ಕೆಟ್ಟವುಗಳಿಂದ ಬಿಡುಗಡೆ ಮಾಡುವನು. ಯೇಸು ಕತ್ತಲೆಯನ್ನು ನಮ್ಮ ಜೀವಿತದಿಂದ ಹಿಂದಕ್ಕೆ ತಳ್ಳುವನು. ನಮ್ಮನ್ನು ಹಿಡಿದುಕೊಳ್ಳಬಲ್ಲ ಮತ್ತು ಸಿಕ್ಕಿಸಬಲ್ಲ ಕೆಟ್ಟವುಗಳನ್ನು ಯೇಸು ತೆಗೆದುಹಾಕುವನು. ಯೇಸು ನಮ್ಮನ್ನು ಬಿಡುಗಡೆ ಮಾಡುವನು!

**ಪ್ರಾರ್ಥನೆ:** ತಮ್ಮನ್ನು ಎಲ್ಲ ಕೆಟ್ಟವುಗಳಿಂದ ಬಿಡುಗಡೆ ಮಾಡಿದ್ದಕ್ಕಾಗಿ ಯೇಸುವಿಗೆ ಕೃತಜ್ಞತಾ ಪ್ರಾರ್ಥನೆ ಮಾಡಲು ಇಷ್ಟಪಡುತ್ತೀರಾ ಎಂದು ಒಬ್ಬರು ಅಥವಾ ಇಬ್ಬರು ಮಕ್ಕಳನ್ನು ಕೇಳಿ.

# ಪಾಠ 15





## ಒಂದು ಉಪದೇಶದ ಅಂಶ

***ಯೇಸುವಿನ ರಕ್ತದ ಯಜ್ಞ ನಮ್ಮನ್ನು ಕಾಪಾಡುತ್ತದೆ***

ಯೇಸುವಿನ
ರಕ್ತದ
ಯಜ್ಞ
ನಮ್ಮನ್ನು
ಕಾಪಾಡುತ್ತದೆ

## ಬೈಬಲಿನ ಕಥೆ

***ಯೇಸುವಿನ ರಕ್ತದ ಯಜ್ಞ ನಮ್ಮನ್ನು ಕಾಪಾಡುತ್ತದೆ ಎಂದು ಉಪದೇಶಿಸುವ ಕಥೆಯನ್ನು ಬಳಸಿ***

**ಶುಭವಾರ್ತೆ ಕಥಾಪುಸ್ತಕ ಆರು.** ಪುಟಗಳು 22-34. ಯೇಸು ಕಾಪಾಡುವನು.

22-34 ಪುಟಗಳಿಂದ ಕಥೆಯನ್ನು ಮಕ್ಕಳಿಗೆ ಓದಿ, ನೀವು ಓದುವಾಗ ಮಕ್ಕಳಿಗೆ ಶುಭವಾರ್ತೆ ಕಥಾಪುಸ್ತಕ–ಆರರಲ್ಲಿರುವ ಚಿತ್ರಗಳನ್ನು ತೋರಿಸಿ.

ಮಕ್ಕಳಿಗೆ ಕಥೆಯ ಬಗ್ಗೆ ಪ್ರಶ್ನೆಗಳನ್ನು ಕೇಳಿ. ಒಂದು ಮಗುವು ತಪ್ಪು ಉತ್ತರ ಕೊಟ್ಟರೆ, ಆ ಮಗುವನ್ನು ಪ್ರೋತ್ಸಾಹಪಡಿಸಿ, ಒಳ್ಳೆಯ ಪ್ರಯತ್ನ ಆದರೆ ನಾನು ಅಪೇಕ್ಷಿಸುತ್ತಿರುವ ಉತ್ತರ ಅದಲ್ಲ ಎಂದು ಹೇಳಿ. ಒಂದು ಮಗುವು ಸರಿಯಾದ ಉತ್ತರ ಕೊಟ್ಟರೆ, ಸರಿಯಾದ ಉತ್ತರ! ಶಬಾಷ್! ಎಂದು ಹೇಳಿ. ಒಂದು ಮಗುವು ಸರಿಯಾದ ಉತ್ತರ ಕೊಡುವ ತನಕ ಅದೇ ಪ್ರಶ್ನೆಯನ್ನು ಕೇಳುತ್ತಿರಿ.

ನೀವು ಕೇಳಬಹುದಾದ ಕೆಲವು ಪ್ರಶ್ನೆಗಳು ಇಲ್ಲಿವೆ.

**ಯಾವ ಕೆಲವು ಕಾರಣಗಳಿಂದ ಯೇಸು ತನ್ನ ಪ್ರಾಣವನ್ನು ರಕ್ತದ ಯಜ್ಞವನ್ನಾಗಿ ಕೊಟ್ಟನು?**

ನಾವು ಮಾಡಿದ ಎಲ್ಲ ಕೆಟ್ಟವುಗಳಿಗಾಗಿ.

ನಮಗೆ ಆಗಬೇಕಾದ ಶಿಕ್ಷೆಯನ್ನು ತೆಗೆದುಕೊಳ್ಳುವುದಕ್ಕಾಗಿ.

ಕತ್ತಲೆಯನ್ನು ಹಿಂದಕ್ಕೆ ತಳ್ಳುವುದಕ್ಕಾಗಿ.

ನಮ್ಮನ್ನು ಸದಾಕಾಲ ಮತ್ತು ಎಂದೆಂದಿಗೂ ಕಾಪಾಡುವುದಕ್ಕಾಗಿ.

ನಮ್ಮನ್ನು ಪ್ರೀತಿಸುವುದರಿಂದಾಗಿ.

**ಯೇಸು ಹೇಗೆ ಸತ್ತನು?**

ಯೇಸುವನ್ನು ಶಿಲುಬೆಗೆ ಮೊಳೆಗಳಿಂದ ಜಡಿದರು.


**ಯೇಸುವನ್ನು ಸಮಾಧಿ ಮಾಡಿದ ಗೋರಿಯು ಯಾಕೆ ಬರಿದಾಗಿತ್ತು?**

ಯೇಸು ಜೀವಿಸುತ್ತಿದ್ದಾನೆ!

**ಯೇಸು ತನ್ನ ಶಿಷ್ಯರಿಗೆ ಏನು ಮಾಡಲು ಹೇಳಿದನು?**

ಎಲ್ಲ ಕಡೆಗೂ ಹೋಗಿ ಎಲ್ಲ ಜನರಿಗೆ ಶುಭವಾರ್ತೆ ತಿಳಿಸಿ! ಯೇಸು ನಿಮ್ಮನ್ನು ಪ್ರೀತಿಸುತ್ತಾನೆ. ಯೇಸು ಸತ್ತನು ಆದರೆ ನಮ್ಮನ್ನು ಸದಾಕಾಲ ಮತ್ತು ಎಂದೆಂದಿಗೂ ಕಾಪಾಡಲು ಈಗ ಜೀವಂತವಾಗಿದ್ದಾನೆ.

# ಪಾಠ 15



## ಅಭಿನಯಾತ್ಮಕ ಹಾಡು



***ಯೇಸುವಿನ ರಕ್ತದ ಯಜ್ಞ ನಮ್ಮನ್ನು ಕಾಪಾಡುತ್ತದೆ ಎಂದು ಉಪದೇಶಿಸುವ ಅಭಿನಯಾತ್ಮಕ ಹಾಡನ್ನು ಬಳಸಿ***

ಉಕ್ಕುತ್ತೆ ಉಕ್ಕುತ್ತೆ ಯೇಸುವಿನ ಪ್ರೀತಿ ನನ್ನ ಮೇಲೆ.
ಉಕ್ಕುತ್ತೆ ಉಕ್ಕುತ್ತೆ ಯೇಸುವಿನ ಪ್ರೀತಿ ನನ್ನ ಮೇಲೆ.
ಉಕ್ಕುತ್ತೆ ಉಕ್ಕುತ್ತೆ ಯೇಸುವಿನ ಪ್ರೀತಿ ನನ್ನ ಮೇಲೆ. ಹಲ್ಲೆಲೂಯ!



ಕಾಪಾಡಿತು ನನ್ನನ್ನು ಯೇಸುವಿನ ರಕ್ತ. ಕಾಪಾಡಿತು ನನ್ನನ್ನು ಯೇಸುವಿನ ರಕ್ತ.
ಕಾಪಾಡಿತು ನನ್ನನ್ನು ಯೇಸುವಿನ ರಕ್ತ. ಹಲ್ಲೆಲೂಯ!

ಉಕ್ಕುತ್ತೆ ಉಕ್ಕುತ್ತೆ ಯೇಸುವಿನ ಪ್ರೀತಿ ನನ್ನ ಮೇಲೆ.
ಉಕ್ಕುತ್ತೆ ಉಕ್ಕುತ್ತೆ ಯೇಸುವಿನ ಪ್ರೀತಿ ನನ್ನ ಮೇಲೆ.
ಉಕ್ಕುತ್ತೆ ಉಕ್ಕುತ್ತೆ ಯೇಸುವಿನ ಪ್ರೀತಿ ನನ್ನ ಮೇಲೆ. ಹಲ್ಲೆಲೂಯ!



(ಈ ಹಾಡನ್ನು ಮೂರು ಸಲ ಹಾಡಿ).

## ದೃಷ್ಟಾಂತ ಪಾಠ

***ಯೇಸುವಿನ ರಕ್ತದ ಯಜ್ಞ ನಮ್ಮನ್ನು ಕಾಪಾಡುತ್ತದೆ ಎಂದು ಉಪದೇಶಿಸುವ ದೃಷ್ಟಾಂತ ಪಾಠವನ್ನು ಬಳಸಿ***

ಸಿಪ್ಪೆ ಸಹಿತ ಚೆನ್ನಾಗಿ ಬೇಯಿಸಿದ ಗಟ್ಟಿಮೊಟ್ಟೆಯನ್ನು ತೆಗೆದುಕೊಂಡು ಬನ್ನಿ. ಗಟ್ಟಿಮೊಟ್ಟೆಯನ್ನು ಮಕ್ಕಳು ಮುಟ್ಟಿನೋಡಲಿ.

ಯೇಸುವಿನ
ರಕ್ತದ
ಯಜ್ಞ
ನಮ್ಮನ್ನು
ಕಾಪಾಡುತ್ತದೆ

**ಮೊದಲನೆ ಪುರುಷ ಮತ್ತು ಸ್ತ್ರೀ ಮಾಡಿದ ತಪ್ಪು ಯಾವುದೆಂದು ನಿಮ್ಮಲ್ಲಿ ಯಾರು ಹೇಳುವಿರಿ?**

ಮಕ್ಕಳು ಉತ್ತರಿಸುವಾಗ, ಸರಿಯಾದ ಉತ್ತರಗಳನ್ನು ಅಳಿಸಲಾಗದ ಇಂಕಿನ ಪೆನ್ನಿನಿಂದ ಬರೆಯಿರಿ. ಬರೆಯುವಾಗ, ಅದರದರ ಮೇಲೆಯೇ ಬರೆಯಿರಿ, ಆಗ ಆ ಮೊಟ್ಟೆಯು ಅಸಹ್ಯವಾಗಿ ಕಾಣತೊಡಗುವುದು.

**ಉತ್ತರಗಳು:** ಮೊದಲನೆ ಪುರುಷ ಮತ್ತು ಸ್ತ್ರೀ ಸೃಷ್ಟಿಕರ್ತನಾದ ದೇವರಿಗೆ ಕಿವಿಗೊಡಲಿಲ್ಲ. ಮೊದಲನೆ ಪುರುಷ ಮತ್ತು ಸ್ತ್ರೀ ಕೆಟ್ಟ ಆತ್ಮಕ್ಕೆ ಕಿವಿಗೊಟ್ಟರು. ಮೊದಲನೆ ಪುರುಷ ಮತ್ತು ಸ್ತ್ರೀ ತಮಗೆ ಸೃಷ್ಟಿಕರ್ತನಾದ ದೇವರು ಮಾಡಬಾರದು ಎಂದು ಹೇಳಿದ್ದನ್ನು ಮಾಡಿದರು.

*ವಿವರಿಸಿ:* ಸೃಷ್ಟಿಕರ್ತನಾದ ದೇವರನ್ನು ನಾವು ತಿಳಿದುಕೊಳ್ಳುವುದಕ್ಕಿಂತ ಮೊದಲು ನಮಗಿದ್ದ ಹೃದಯಗಳಂತಿದೆ ಈ ಮೊಟ್ಟೆ. ಸೃಷ್ಟಿಕರ್ತನಾದ ದೇವರನ್ನು ನಾವು ತಿಳಿದುಕೊಳ್ಳುವುದಕ್ಕಿಂತ ಮೊದಲು ನಮ್ಮ ಹೃದಯಗಳು ಈ ಗಟ್ಟಿಮೊಟ್ಟೆಯ ಸಿಪ್ಪೆಯಂತಿತ್ತು. ಸೃಷ್ಟಿಕರ್ತನಾದ ದೇವರನ್ನು

# ಪಾಠ 15

ನಾವು ತಿಳಿದುಕೊಳ್ಳುವುದಕ್ಕಿಂತ ಮೊದಲು ನಾವು ಕೆಟ್ಟ ಆತ್ಮಕ್ಕೆ ಕಿವಿಗೊಡುತ್ತಿದ್ದೆವು ಮತ್ತು ಸೃಷ್ಟಿಕರ್ತನಾದ ದೇವರಿಗೆ ಕಿವಿಗೊಡುತ್ತಿರಲಿಲ್ಲ. ಸೃಷ್ಟಿಕರ್ತನಾದ ದೇವರನ್ನು ನಾವು ತಿಳಿದುಕೊಳ್ಳುವುದಕ್ಕಿಂತ ಮೊದಲು ಸೃಷ್ಟಿಕರ್ತನಾದ ದೇವರು ನಮಗೆ ಮಾಡಲು ಹೇಳಿದ್ದನ್ನು ನಾವು ಮಾಡುತ್ತಿರಲಿಲ್ಲ.

ಸೃಷ್ಟಿಕರ್ತನಾದ ದೇವರನ್ನು ನಾವು ತಿಳಿದುಕೊಳ್ಳುವುದಕ್ಕಿಂತ ಮೊದಲು, ನಮ್ಮನ್ನು ಸೃಷ್ಟಿಕರ್ತನಾದ ದೇವರು ಎಷ್ಟೊಂದು ಪ್ರೀತಿಸುತ್ತಾನೆಂದು ಮತ್ತು ನಮ್ಮನ್ನು ಕಾಪಾಡಲು ಆತನು ಮಾಡಿದ್ದೇನೆಂದು ನಮಗೆ ಗೊತ್ತಿರಲಿಲ್ಲ. ಸೃಷ್ಟಿಕರ್ತನಾದ ದೇವರನ್ನು ನಾವು ತಿಳಿದುಕೊಳ್ಳುವುದಕ್ಕಿಂತ ಮೊದಲು, ನಾವು ಕತ್ತಲೆಯಲ್ಲಿ ತಪ್ಪಿಹೋಗಿದ್ದೆವು.

**ಯೇಸುವಿನ ರಕ್ತದ ಯಜ್ಞ ನಮ್ಮನ್ನು ಕಾಪಾಡುತ್ತದೆ**

ಸೃಷ್ಟಿಕರ್ತನಾದ ದೇವರು ನಮ್ಮಲ್ಲಿರುವ ಪ್ರತಿಯೊಬ್ಬರಿಗಾಗಿ ಮಾಡಿದ್ದನ್ನು ಈ ಮೊಟ್ಟೆ ಜ್ಞಾಪಕಕ್ಕೆ ತರುತ್ತದೆ. (ಬೇಯಿಸಿದ ಗಟ್ಟಿಮೊಟ್ಟೆಯ ಸಿಪ್ಪೆಯನ್ನು ಬಿಡಿಸಲು ಆರಂಭಿಸಿ.)

ನಾವು ಸೃಷ್ಟಿಕರ್ತನಾದ ದೇವರಿಗೆ ವಿರೋಧವಾಗಿ ಮತ್ತು ಜನರಿಗೆ ವಿರೋಧವಾಗಿ ಹೇಳುವ, ಯೋಚಿಸುವ ಅಥವಾ ಮಾಡುವ ಎಲ್ಲ ಕೆಟ್ಟವುಗಳಿಂದ ಯೇಸುವಿನೊಳಗಿರುವ ಸೃಷ್ಟಿಕರ್ತನಾದ ದೇವರು ನಮ್ಮನ್ನು ಕಾಪಾಡುತ್ತಾನೆ. ನಾವು ಸೃಷ್ಟಿಕರ್ತನಾದ ದೇವರಿಗೆ ವಿರೋಧವಾಗಿ ಮತ್ತು ಜನರಿಗೆ ವಿರೋಧವಾಗಿ ಹೇಳುವ, ಯೋಚಿಸುವ ಅಥವಾ ಮಾಡುವ ಎಲ್ಲ ಕೆಟ್ಟವುಗಳನ್ನು ನಾನು ಈ ಮೊಟ್ಟೆಯ ಮೇಲೆ ಬರೆದಿರುವ ಕೆಟ್ಟವುಗಳನ್ನು ತೆಗೆದುಹಾಕುತ್ತಿರುವಂತೆಯೇ ಯೇಸು ತೆಗೆದುಹಾಕುವನು.

ಸೃಷ್ಟಿಕರ್ತನಾದ ದೇವರು ನಿಮ್ಮನ್ನು ಸದಾಕಾಲ ಮತ್ತು ಎಂದೆಂದಿಗೂ ಕಾಪಾಡಲು ಚಿಕ್ಕಮಗುವಾಗಿ ಬಂದನು. ಆತನ ಹೆಸರು ಯೇಸು. ಯೇಸು ಭೂಮಿಯ ಮೇಲಿದ್ದಾಗ ತನ್ನ ಜೀವಮಾನವೆಲ್ಲಾ ಸೃಷ್ಟಿಕರ್ತನಾದ ದೇವರ ಕುರಿತಾಗಿಯೂ ಆತನು ಜನರನ್ನು ಎಷ್ಟೊಂದು ಪ್ರೀತಿಸಿದನೆಂದೂ ಜನರು ಜೀವಿಸಬೇಕೆದು ಆತನು ಎಷ್ಟೊಂದು ಇಷ್ಟಪಡುತ್ತಾನೆಂದೂ ಜನರಿಗೆ ತಿಳಿಸಿದನು. ಯೇಸು ನಮಗೋಸ್ಕರ ಜೀವಿಸಿದ್ದು ಮಾತ್ರವಲ್ಲದೆ, ನಮಗೋಸ್ಕರ ತನ್ನ ಪ್ರಾಣವನ್ನು ಕೊಟ್ಟನು. ನಾವೆಲ್ಲರೂ ಕೆಟ್ಟದ್ದನ್ನು ಹೇಳುವುದರಿಂದ, ಯೋಚಿಸುವುದರಿಂದ ಮತ್ತು ಮಾಡುವುದರಿಂದ ಯೇಸು ನಮಗೋಸ್ಕರ ಸತ್ತನು.

ಯೇಸು ನಮಗೋಸ್ಕರ ಶಿಲುಬೆ ಮೇಲೆ ಸತ್ತಾಗ, ನಾವು ಸೃಷ್ಟಿಕರ್ತನಾದ ದೇವರಿಗೆ ವಿರೋಧವಾಗಿ ಮತ್ತು ಜನರಿಗೆ ವಿರೋಧವಾಗಿ ಹೇಳುವ, ಯೋಚಿಸುವ ಅಥವಾ ಮಾಡುವ ಎಲ್ಲ ಕೆಟ್ಟವುಗಳಿಗಾಗಿ ನಮಗಾಗಬೇಕಿದ್ದ ಶಿಕ್ಷೆಯನ್ನು ತಾನು ತೆಗೆದುಕೊಂಡು ನಮ್ಮ ಎಲ್ಲ ಕೆಟ್ಟವುಗಳನ್ನು ತೆಗೆದುಹಾಕಿದನು. ಆದರೆ ಆತನು ಮರಣಾವಸ್ಥೆಯಲ್ಲೇ ಇರದೆ, ಮೂರು ದಿನಗಳ ನಂತರ ಸಮಾಧಿಯಿಂದ ಮತ್ತೆ ಎದ್ದುಬಂದನು ಮತ್ತು ಈಗ ಪರಲೋಕದಲ್ಲಿ ಜೀವಿಸುತ್ತಿದ್ದಾನೆ. ಹಲ್ಲೆಲೂಯ!


**ಈಗ ಮೊಟ್ಟೆಯು ಹೇಗೆ ಕಾಣುತ್ತಿದೆ ಮತ್ತು ಮುಟ್ಟಿದರೆ ಏನನ್ನಿಸುತ್ತದೆ?**

ಶುಚಿಯಾಗಿದೆ ಮತ್ತು ಮೃದುವಾಗಿದೆ. ಯೇಸುವಿನ ವ್ಯಕ್ತಿತ್ವದಲ್ಲಿ ಮತ್ತು ಆತನು ಮಾಡಿದ ಕಾರ್ಯದಲ್ಲಿ ನಾವು ನಂಬಿಕೆ ಇಟ್ಟಾಗ ಮತ್ತು ಆತನ ರಕ್ತದ ಯಜ್ಞದಿಂದಾದ ಉಚಿತ ಉಡುಗೊರೆಯನ್ನು ನಾವು ಸ್ವೀಕರಿಸಿದಾಗ ನಮ್ಮ ಹೃದಯಕ್ಕೆ ಹೀಗೇ ಆಗುತ್ತದೆ.

# ಪಾಠ 15

## ಬೈಬಲ್ ವಚನವನ್ನು ಕಂಠಪಾಠ ಮಾಡುವ ಆಟ

***ಯೇಸುವಿನ ರಕ್ತದ ಯಜ್ಞ ನಮ್ಮನ್ನು ಕಾಪಾಡುತ್ತದೆ ಎಂದು ಉಪದೇಶಿಸುವ ಬೈಬಲ್ ವಚನವನ್ನು ಬಳಸಿ***



**ಯೋಹಾನ 3:16** *'ಹೌದು, ದೇವರು ಲೋಕವನ್ನು ಎಷ್ಟೋ ಪ್ರೀತಿಸಿ ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಹೊಂದಬೇಕೆಂದು ಆತನನ್ನು ಕೊಟ್ಟನು.'*

**ನನ್ನನ್ನು ಅನುಸರಿಸಿ:** ಬೈಬಲಿನ ಕಂಠಪಾಠ ಮಾಡುವ ವಚನವನ್ನು ಅಭಿನಯಿಸುತ್ತಾ ಹೇಳಿ. ಮಕ್ಕಳು ಹೇಳಲು ಮತ್ತು ಅಭಿನಯಿಸಲು ಕಲಿತುಕೊಂಡ ಮೇಲೆ, ನಿಮ್ಮೊಂದಿಗೆ ಅಭಿನಯಿಸುತ್ತಾ ಹೇಳಲು ಮಕ್ಕಳಿಗೆ ಹೇಳಿ. ಮಕ್ಕಳು ನಿಮ್ಮ ಸಹಾಯವಿಲ್ಲದೆ ಬೈಬಲಿನ ಕಂಠಪಾಠ ಮಾಡುವ ವಚನವನ್ನು ಅಭಿನಯಿಸುತ್ತಾ ಹೇಳುವ ತನಕ ಮತ್ತೆಮತ್ತೆ ಹೇಳಿ. ದೇವರು<ಅಭಿನಯ: ನಿಮ್ಮ ಕೈಗಳನ್ನು ಆಕಾಶದ ಕಡೆಗೆ ಎತ್ತಿ>, ಲೋಕವನ್ನು<ಅಭಿನಯ: ಒಂದು ಸುತ್ತು ಸುತ್ತಿ>, ಎಷ್ಟೋ ಪ್ರೀತಿಸಿ<ಅಭಿನಯ: ನಿಮ್ಮ ಕೈಗಳನ್ನು ಎದೆಯ ಮೇಲೆ ಒಂದರಮೇಲೊಂದು ಇಟ್ಟುಕೊಳ್ಳಿ>, ತನ್ನ ಒಬ್ಬನೇ ಮಗನನ್ನು (ಯೇಸು) ಕೊಟ್ಟನು<ಅಭಿನಯ: ನಿಮ್ಮ ಒಂದು ಬೆರಳನ್ನು ಮೇಲೆತ್ತಿ ತೋರಿಸಿ>, ಆತನನ್ನು ನಂಬುವ <ಅಭಿನಯ: ನಿಮ್ಮ ಮೆದುಳಿನ ಕಡೆಗೆ ಮತ್ತು ಹೃದಯದ ಕಡೆಗೆ ಬೆರಳುಮಾಡಿ ತೋರಿಸಿ>, ಒಬ್ಬನಾದರೂ <ಅಭಿನಯ: ನಿಮ್ಮ ಕೈಗಳನ್ನು ವೃತ್ತಾಕಾರವಾಗಿ ಮಾಡಿ>, ನಾಶವಾಗದೆ<ಅಭಿನಯ: ನಿಮ್ಮ ಕಣ್ಣುಗಳನ್ನು ಕೈಗಳಿಂದ ಮುಚ್ಚಿಕೊಳ್ಳಿ>, ಎಲ್ಲರೂ ನಿತ್ಯಜೀವವನ್ನು ಹೊಂದಬೇಕೆಂದು<ಅಭಿನಯ: ಆಕಾಶದ ಕಡೆಗೆ ಹೋಗುವಂತೆ ನಿಮ್ಮ ಕೈಗಳನ್ನು ವೃತ್ತಾಕಾರವಾಗಿ ಸುತ್ತಿ>, ಆತನನ್ನು ಕೊಟ್ಟನು<ಅಭಿನಯ: ನಿಮ್ಮ ಕೈಗಳನ್ನು ಕೊಡುವ ಕೈಗಳಂತೆ ತೋರಿಸಿ>.

## ಅನ್ವಯಿಸುಕೊಳ್ಳುವಿಕೆ

***ಯೇಸುವಿನ ರಕ್ತದ ಯಜ್ಞ ನಮ್ಮನ್ನು ಕಾಪಾಡುತ್ತದೆ ಎಂದು ಉಪದೇಶಿಸುವ ಅನ್ವಯಿಸುಕೊಳ್ಳುವಿಕೆಯನ್ನು ಬಳಸಿ***


ಸೃಷ್ಟಿಕರ್ತನಾದ ದೇವರು ನಮ್ಮನ್ನು ಪ್ರೀತಿಸುತ್ತಾನೆ ಮತ್ತು ನಾವು ಸೃಷ್ಟಿಕರ್ತನಾದ ದೇವರಿಗೆ ವಿರೋಧವಾಗಿ ಮತ್ತು ಜನರಿಗೆ ವಿರೋಧವಾಗಿ ಹೇಳುವ, ಯೋಚಿಸುವ ಅಥವಾ ಮಾಡುವ ಎಲ್ಲ ಕೆಟ್ಟವುಗಳಿಂದ ನಮ್ಮನ್ನು ಆತನು ಯೇಸುವಿನ ಮೂಲಕ ಕಾಪಾಡಿದನು ಎಂದು ತಿಳಿದುಕೊಳ್ಳುವುದು ಅಂದರೆ ನಾವು ಸದಾಕಾಲ ಮತ್ತು ಎಂದೆಂದಿಗೂ ಜೀವಿಸುತ್ತೇವೆ ಎಂದರ್ಥ! ಯೇಸು ನಮ್ಮನ್ನು ಕಾಪಾಡಿದನು ಅಂದರೆ ನಾವು ಸದಾಕಾಲ ಮತ್ತು ಎಂದೆಂದಿಗೂ ಕ್ಷಮಿಸಲ್ಪಟ್ಟಿದ್ದೇವೆ ಎಂದರ್ಥ. ಯೇಸು ನಮ್ಮನ್ನು ಕಾಪಾಡಿದನು ಅಂದರೆ ಸೃಷ್ಟಿಕರ್ತನಾದ ದೇವರ ದೃಷ್ಟಿಯಲ್ಲಿ ನಾವು ಸದಾಕಾಲ ಮತ್ತು ಎಂದೆಂದಿಗೂ ಶುದ್ಧರಾಗಿದ್ದೇವೆ ಎಂದರ್ಥ. ಯೇಸು ನಮ್ಮನ್ನು ಕಾಪಾಡಿದನು ಅಂದರೆ ನಾವು ಸದಾಕಾಲ ಮತ್ತು ಎಂದೆಂದಿಗೂ ಸೃಷ್ಟಿಕರ್ತನಾದ ದೇವರ ಮಗುವಾಗಿದ್ದೇವೆ ಎಂದರ್ಥ. ಹಲ್ಲೆಲೂಯ!

ಯೇಸುವಿನ
ರಕ್ತದ
ಯಜ್ಞ
ನಮ್ಮನ್ನು
ಕಾಪಾಡುತ್ತದೆ

**ಪ್ರಾರ್ಥನೆ:** ಸೃಷ್ಟಿಕರ್ತನಾದ ದೇವರೇ, ನೀನು ನನ್ನನ್ನು ಪ್ರೀತಿಸುವುದಕ್ಕಾಗಿ ವಂದನೆಗಳು. ನಾನು ನಿನ್ನ ವಿರೋಧವಾಗಿ ಮತ್ತು ಜನರ ವಿರೋಧವಾಗಿ ಕೆಟ್ಟದ್ದನ್ನು ಹೇಳುವಾಗಲೂ ಯೋಚಿಸುವಾಗಲೂ ಮಾಡುವಾಗಲೂ ನೀನು ನನ್ನನ್ನು ಸದಾಕಾಲ ಮತ್ತು ಎಂದೆಂದಿಗೂ ಪ್ರೀತಿಸುವೆ. ನಾನು ನಿನ್ನ ವಿರೋಧವಾಗಿ ಮತ್ತು ಜನರಿಗೆ ವಿರೋಧವಾಗಿ ಹೇಳುವ, ಯೋಚಿಸುವ ಅಥವಾ ಮಾಡುವ ಪ್ರತಿಯೊಂದು ಕೆಟ್ಟದ್ದರಿಂದ ನನ್ನನ್ನು ಕಾಪಾಡಲು ನೀನು ಬಂದು ನನ್ನನ್ನು ಕಾಪಾಡಿದ್ದಕ್ಕಾಗಿ ನಿನಗೆ ವಂದನೆಗಳು.

ಸೃಷ್ಟಿಕರ್ತನಾದ ದೇವರೇ, ನಿನ್ನ ವ್ಯಕ್ತಿತ್ವವನ್ನು ಮತ್ತು ನೀನು ನನಗಾಗಿ ಮಾಡಿದನ್ನು ಪ್ರತಿ ದಿನ ಹೆಚ್ಚೆಚ್ಚಾಗಿ ತಿಳಿದುಕೊಳ್ಳಲು ನನಗೆ ಸಹಾಯ ಮಾಡು. ನಿನ್ನನ್ನು ನಂಬಲು ಮತ್ತು ನಿನ್ನಲ್ಲಿ ಭರವಸವಿಡಲು ನನಗೆ ಸಹಾಯ ಮಾಡು. ನಿನ್ನ ವ್ಯಕ್ತಿತ್ವದ ಬಗ್ಗೆ ಮತ್ತು ನೀನು ನನಗಾಗಿ ಮಾಡಿದ್ದರ ಬಗ್ಗೆ ಇತರರಿಗೆ ತಿಳಿಸಲು ನನಗೆ ಸಹಾಯ ಮಾಡು. ಯೇಸುವಿನ ಹೆಸರಿನಲ್ಲಿ ನಾವು ಪ್ರಾರ್ಥಿಸಿದ್ದೇವೆ. ಆಮೆನ್.

# ಪಾಠ 16


## ಒಂದು ಉಪದೇಶದ ಅಂಶ

***ಯೇಸು ನನ್ನನ್ನು ಸದಾಕಾಲ ಮತ್ತು ಎಂದೆಂದಿಗೂ ಕಾಪಾಡಿದನು!***

ಯೇಸು ನನ್ನನ್ನು ಸದಾಕಾಲ ಮತ್ತು ಎಂದೆಂದಿಗೂ ಕಾಪಾಡಿದನು!

## ಬೈಬಲಿನ ಕಥೆ

***ಯೇಸು ನನ್ನನ್ನು ಸದಾಕಾಲ ಮತ್ತು ಎಂದೆಂದಿಗೂ ಕಾಪಾಡಿದನು! ಎಂದು ಉಪದೇಶಿಸುವ ಕಥೆಯನ್ನು ಬಳಸಿ***

**ಶುಭವಾರ್ತೆ ಕಥಾಪುಸ್ತಕ ಆರು.** ಪುಟಗಳು 36-40. ಯೇಸು ಜೀವಿಸುತ್ತಿದ್ದಾನೆ.

**ಉಪಕರಣಗಳು:** ಕಪ್ಪುಹಲಗೆ ಮತ್ತು ಚಿತ್ರಿಸಲು ಸೀಮೆಸುಣ್ಣ, ಅಥವಾ ಮರಳು ಮತ್ತು ಚಿತ್ರಿಸಲು ಕಡ್ಡಿ, ಅಥವಾ ಕಾಗದ ಮತ್ತು ಚಿತ್ರಿಸಲು ಪೆನ್ಸಿಲ್. ಮಕ್ಕಳಿಗೆ ಡ್ರಾಯಿಂಗ್ ಪುಸ್ತಕ ಅಥವಾ ಕಾಗದ, ಪೆನ್ಸಿಲ್ ಮತ್ತು ರಬ್ಬರ್ ಅವಶ್ಯಕ.

ಚಿತ್ರಿಸಿ ಕಥೆ ಹೇಳಿ. ಪ್ರತಿ ಪುಟವನ್ನು ಓದಿದ ಮೇಲೆ ಮಕ್ಕಳಿಗೆ ಒಂದು ಪ್ರಶ್ನೆ ಕೇಳಿ.

1, 2, 3 ಕಥೆಯನ್ನು ಆರಂಭಿಸಿ...



ಅನೇಕ ವರ್ಷಗಳು ಕಳೆದವು. ಒಬ್ಬ ಮನುಷ್ಯ ನನಗೆ ಕಾಣುತ್ತಿದ್ದಾನೆ. ಅವನ ಹೆಸರು ಯೋಹಾನ.

ಯೋಹಾನನು ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ: 'ಯೇಸು ಆಕಾಶದ ಮೇಲಿರುವುದು ನನಗೆ ಕಾಣುತ್ತಿದೆ. ಆತನ ಕಣ್ಣುಗಳು ಬೆಂಕಿಯಂತಿವೆ!' ಯೇಸು ಬಿಳಿಕುದುರೆಯ ಮೇಲೆ ಬರುತ್ತಿರುವುದು ನನಗೆ ಕಾಣುತ್ತಿದೆ. ಆತನ ಹೆಸರು ದೇವರ ವಾಕ್ಯ. ಯೇಸುವಿನ ನಿಲುವಂಗಿಯ ಮೇಲಿರುವ ಪದಗಳು ನನಗೆ ಕಾಣುತ್ತಿವೆ, ರಾಜರುಗಳಿಗೇ ರಾಜ ಮತ್ತು ಪ್ರಭುಗಳಿಗೇ ಪ್ರಭು! ಎಲ್ಲ ಕುಲಗಳ ಜನರು ಯೇಸುವಿಗೆ ಹಾಡುತ್ತಿರುವುದು ನನಗೆ ಕಾಣುತ್ತಿದೆ. ಎಲ್ಲ ಆತ್ಮಗಳು ಯೇಸುವಿಗೆ ಹಾಡುತ್ತಿರುವುದು ನನಗೆ ಕಾಣುತ್ತಿದೆ. ಪ್ರತಿಯೊಂದು ಯೇಸುವಿಗೆ ಹಾಡುತ್ತಿರುವುದು ನನಗೆ ಕಾಣುತ್ತಿದೆ.



ಸೃಷ್ಟಿಕರ್ತನಾದ ದೇವರು ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ: 'ನನ್ನ ಜನರು ಸದಾಕಾಲ ಮತ್ತು ಎಂದೆಂದಿಗೂ ಕಾಪಾಡಲ್ಪಟ್ಟಿದ್ದಾರೆ. ಮರಣವಿಲ್ಲ. ಕಣ್ಣೀರಿಲ್ಲ. ದುಃಖವಿಲ್ಲ. ನೋವಿಲ್ಲ. ನಾನು ಪ್ರತಿಯೊಂದನ್ನು ಹೊಸದನ್ನಾಗಿ ಮಾಡಿರುವೆ.'



ಯೇಸು ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ: 'ನೋಡಿ, ನಾನು ಬೇಗನೆ ಹಿಂತಿರುಗಿ ಬರುತ್ತೇನೆ. ನಾನು ನಿತ್ಯಕಾಲ ಇರುವಾತನು. ನಾನು ನಿಮ್ಮನ್ನು ಪ್ರೀತಿಸುತ್ತೇನೆ. ನಾನು ನಿಮ್ಮನ್ನು ಸದಾಕಾಲ ಮತ್ತು ಎಂದೆಂದಿಗೂ ಕಾಪಾಡಿದ್ದೇನೆ.'

**ಕಥೆಯನ್ನು ಚಿತ್ರಿಸುವಂತೆ ಮಕ್ಕಳಿಗೆ ಹೇಳಿ.**

# ಪಾಠ 16


ಯೇಸು ನನ್ನನ್ನು ಸದಾಕಾಲ ಮತ್ತು ಎಂದೆಂದಿಗೂ ಕಾಪಾಡಿದನು!

**ಮಕ್ಕಳು ಕಥೆಯನ್ನು ಮತ್ತೆ ಹೇಳುವುದು:** ಪ್ರತಿ ಮಗುವಿಗೆ 1 ಮತ್ತು 2, 1 ಮತ್ತು 2, 1 ಮತ್ತು 2, 1 ಮತ್ತು 2, 1 ಮತ್ತು 2... ಸಂಖ್ಯೆಯನ್ನು ಕೊಡಿ. ಸಂಖ್ಯೆ 1 ನ್ನು ಪಡೆದಿರುವ ಮಗು ಸಂಖ್ಯೆ 2 ನ್ನು ಪಡೆದಿರುವ ಮಗುವಿನೊಂದಿಗೆ ಜೊತೆಯಾಗಬೇಕು. ಸಂಖ್ಯೆ 1 ನ್ನು ಪಡೆದಿರುವ ಪ್ರತಿ ಮಗು ಸಂಖ್ಯೆ 2 ನ್ನು ಪಡೆದಿರುವ ತನ್ನ ಜೊತೆಗಾರನಿಗೆ ಕಥೆಯನ್ನು ಮತ್ತೆ ಹೇಳಬೇಕು. ಅವರು ಹೇಳಿ ಮುಗಿಸಿದ ಮೇಲೆ, ಸಂಖ್ಯೆ 2 ನ್ನು ಪಡೆದಿರುವ ಪ್ರತಿ ಮಗು ಸಂಖ್ಯೆ 1 ನ್ನು ಪಡೆದಿರುವ ತನ್ನ ಜೊತೆಗಾರನಿಗೆ ಕಥೆಯನ್ನು ಮತ್ತೆ ಹೇಳಬೇಕು. ಪ್ರತಿಯೊಬ್ಬರೂ ಹೇಳಿ ಮುಗಿಸಿದ ಮೇಲೆ, ಎಲ್ಲ ಮಕ್ಕಳು ಒಟ್ಟಾಗಿ ಮತ್ತೆ ಒಂದು ಗುಂಪಾಗಿ ಸೇರಬೇಕು.

## ಅಭಿನಯಾತ್ಮಕ ಹಾಡು

***ಯೇಸು ನನ್ನನ್ನು ಸದಾಕಾಲ ಮತ್ತು ಎಂದೆಂದಿಗೂ ಕಾಪಾಡಿದನು! ಎಂದು ಉಪದೇಶಿಸುವ ಅಭಿನಯಾತ್ಮಕ ಹಾಡನ್ನು ಬಳಸಿ***

ಕೊಂಡಾಡಿರಿ ಯೇಸುವನ್ನು, ಕೊಂಡಾಡಿರಿ. ಕೊಂಡಾಡಿರಿ ಯೇಸುವನ್ನು, ಕೊಂಡಾಡಿರಿ. ಕೊಂಡಾಡಿರಿ ಯೇಸುವನ್ನು, ಕೊಂಡಾಡಿರಿ. ದೇವರ ಜಯವನ್ನು ಕೊಂಡಾಡಿರಿ.



## ದೃಷ್ಟಾಂತ ಪಾಠ

***ಯೇಸು ನನ್ನನ್ನು ಸದಾಕಾಲ ಮತ್ತು ಎಂದೆಂದಿಗೂ ಕಾಪಾಡಿದನು! ಎಂದು ಉಪದೇಶಿಸುವ ದೃಷ್ಟಾಂತ ಪಾಠವನ್ನು ಬಳಸಿ***

**ಉಪಕರಣಗಳು:** ಕಪ್ಪುಹಲಗೆ ಮತ್ತು ಕೆಂಪು ಸೀಮೆಸುಣ್ಣ (ಅಥವಾ ಬಿಳಿ ಸೀಮೆಸುಣ್ಣ ಬಳಸಿ ಕೆಂಪು ಸೀಮೆಸುಣ್ಣ ಇಲ್ಲದಿದ್ದರೆ).

ಈ ಕಪ್ಪುಹಲಗೆಯು ನಮ್ಮ ಹೃದಯದ ಕತ್ತಲೆಯಂತಿದೆ ಎಂದು ಮಕ್ಕಳಿಗೆ ವಿವರಿಸಿ. ನಾವು ಸೃಷ್ಟಿಕರ್ತನಾದ ದೇವರಿಗೆ ಮತ್ತು ಜನರಿಗೆ ವಿರೋಧವಾಗಿ ಹೇಳುವ, ಯೋಚಿಸುವ ಅಥವಾ ಮಾಡುವ ಎಲ್ಲ ಕೆಟ್ಟವುಗಳೇ ಅದು.

ಈಗ ಗಮನಿಸಿ. ಇಡೀ ಕಪ್ಪುಹಲಗೆಯ ಮೇಲೆಲ್ಲಾ ಸೀಮೆಸುಣ್ಣದ ಬಣ್ಣವಿದೆ.

ಇದು ಯೇಸುವಿನ ರಕ್ತದ ಯಜ್ಞದಂತಿದೆ ಎಂದು ವಿವರಿಸಿ. ಯೇಸುವಿನ ರಕ್ತವು ಎಲ್ಲ ಕೆಟ್ಟವುಗಳನ್ನು ಮುಚ್ಚಿಬಿಡುತ್ತದೆ. ಯೇಸು ಮಾಡಿದ್ದನ್ನು ತೆಗೆದುಹಾಕಲು ಯಾರಿಗೂ ಸಾಧ್ಯವಿಲ್ಲ. ಆತನ ಕಾರ್ಯದಿಂದ ನೀವು ಸದಾಕಾಲ ಮತ್ತು ಎಂದೆಂದಿಗೂ ಹೊದಿಸಲ್ಪಟ್ಟಿದ್ದೀರಿ. ಯೇಸು ನಮ್ಮನ್ನು ಸದಾಕಾಲ ಮತ್ತು ಎಂದೆಂದಿಗೂ ಕಾಪಾಡಿದನು ಯಾಕಂದರೆ ಸದಾಕಾಲ ಮತ್ತು ಎಂದೆಂದಿಗೂ ಜೀವಿಸುವವನು ಯೇಸು ಒಬ್ಬನೇ.

# ಪಾಠ 16

## ಬೈಬಲ್ ವಚನವನ್ನು ಕಂಠಪಾಠ ಮಾಡುವ ಆಟ

***ಯೇಸು ನನ್ನನ್ನು ಸದಾಕಾಲ ಮತ್ತು ಎಂದೆಂದಿಗೂ ಕಾಪಾಡಿದನು! ಎಂದು ಉಪದೇಶಿಸುವ ಬೈಬಲ್ ವಚನವನ್ನು ಬಳಸಿ***

ಸೃಷ್ಟಿಕರ್ತನಾದ ದೇವರಿಗೆ ಪ್ರಭು ಎಂಬುದು ಮತ್ತೊಂದು ಹೆಸರೆಂದು ವಿವರಿಸಿ.

**ಪ್ರಕಟನೆ 1:18** *'ನಾನೇ ಜೀವಿಸುವಾತನು. ನಾನು ಸತ್ತೆನು, ಆದರೆ ಇಗೋ ನೋಡು, ನಾನು ಯುಗಯುಗಾಂತರಗಳಲ್ಲಿಯೂ ಜೀವಿಸುವವನಾಗಿದ್ದೇನೆ. ಮರಣದ ಮತ್ತು ಪಾತಾಳದ ಬೀಗದ ಕೈಗಳು ನನ್ನಲ್ಲಿವೆ.'*

**ಕಂಠಪಾಠ ಮಾಡುವ ಸ್ಪರ್ಧೆ:** ಮಕ್ಕಳನ್ನು ಮೂರು ಸಾಲಾಗಿ ನಿಲ್ಲಿಸಿ. ಪ್ರತಿಯೊಂದು ಸಾಲನ್ನು ಎತ್ತರಕ್ಕೆ ತಕ್ಕಂತೆ ಅತಿ ಚಿಕ್ಕಮಗುವಿನಿಂದ ಆರಂಭಿಸಿ ಅತಿ ದೊಡ್ಡ ಮಗುವನ್ನು ಕೊನೆಯಲ್ಲಿ ನಿಲ್ಲಿಸಿ.

ಮೊದಲನೆ ಸಾಲಿನಲ್ಲಿರುವ ಮೊದಲನೆ ಮಗುವಿನ ಕಿವಿಯಲ್ಲಿ, 'ನಾನೇ ಜೀವಿಸುವಾತನು' ಎಂದು ಪಿಸುಗುಟ್ಟಿ, ಆ ವಾಕ್ಯವನ್ನು ಪಕ್ಕದಲ್ಲಿರುವ ಮಗುವಿನ ಕಿವಿಯಲ್ಲಿ ಪಿಸುಗುಟ್ಟಲು ಆ ಮಗುವಿಗೆ ತಿಳಿಸಿ. ತಮ್ಮ ಕಿವಿಯಲ್ಲಿ ಕೇಳಿಸಿಕೊಂಡ ಪದಗಳನ್ನು ಪಕ್ಕದ ಮಗುವಿನ ಕಿವಿಯಲ್ಲಿ ಪಿಸುಗುಟ್ಟಬೇಕೆಂದು ಮಕ್ಕಳಿಗೆ ಹೇಳಿ. ಇದು ಸಾಲಿನ ಮೊದಲನೆ ಮಗುವಿನಿಂದ ಆರಂಭಗೊಂಡು ಸಾಲಿನ ಕೊನೆಯಲ್ಲಿರುವ ಮಗು ಪದಗಳನ್ನು ಕೇಳಿಸಿಕೊಳ್ಳುವತನಕ ನಡೆಯಬೇಕು.

ಎರಡನೆ ಸಾಲಿನಲ್ಲಿರುವ ಮೊದಲನೆ ಮಗುವಿನ ಕಿವಿಯಲ್ಲಿ, 'ನಾನು ಸತ್ತೆನು, ಆದರೆ ಇಗೋ ನೋಡು, ನಾನು ಯುಗಯುಗಾಂತರಗಳಲ್ಲಿಯೂ ಜೀವಿಸುವವನಾಗಿದ್ದೇನೆ' ಎಂದು ಪಿಸುಗುಟ್ಟಿ, ಆ ವಾಕ್ಯವನ್ನು ಪಕ್ಕದಲ್ಲಿರುವ ಮಗುವಿನ ಕಿವಿಯಲ್ಲಿ ಪಿಸುಗುಟ್ಟಲು ಆ ಮಗುವಿಗೆ ತಿಳಿಸಿ. ತಮ್ಮ ಕಿವಿಯಲ್ಲಿ ಕೇಳಿಸಿಕೊಂಡ ಪದಗಳನ್ನು ಪಕ್ಕದ ಮಗುವಿನ ಕಿವಿಯಲ್ಲಿ ಪಿಸುಗುಟ್ಟಬೇಕೆಂದು ಮಕ್ಕಳಿಗೆ ಹೇಳಿ. ಇದು ಸಾಲಿನ ಮೊದಲನೆ ಮಗುವಿನಿಂದ ಆರಂಭಗೊಂಡು ಸಾಲಿನ ಕೊನೆಯಲ್ಲಿರುವ ಮಗು ಪದಗಳನ್ನು ಕೇಳಿಸಿಕೊಳ್ಳುವತನಕ ನಡೆಯಬೇಕು.

ಯೇಸು ನನ್ನನ್ನು ಸದಾಕಾಲ ಮತ್ತು ಎಂದೆಂದಿಗೂ ಕಾಪಾಡಿದನು!

ಮೂರನೆ ಸಾಲಿನಲ್ಲಿರುವ ಮೊದಲನೆ ಮಗುವಿನ ಕಿವಿಯಲ್ಲಿ, 'ಮರಣದ ಮತ್ತು ಪಾತಾಳದ ಬೀಗದ ಕೈಗಳು ನನ್ನಲ್ಲಿವೆ' ಎಂದು ಪಿಸುಗುಟ್ಟಿ, ಆ ವಾಕ್ಯವನ್ನು ಪಕ್ಕದಲ್ಲಿರುವ ಮಗುವಿನ ಕಿವಿಯಲ್ಲಿ ಪಿಸುಗುಟ್ಟಲು ಆ ಮಗುವಿಗೆ ತಿಳಿಸಿ. ತಮ್ಮ ಕಿವಿಯಲ್ಲಿ ಕೇಳಿಸಿಕೊಂಡ ಪದಗಳನ್ನು ಪಕ್ಕದ ಮಗುವಿನ ಕಿವಿಯಲ್ಲಿ ಪಿಸುಗುಟ್ಟಬೇಕೆಂದು ಮಕ್ಕಳಿಗೆ ಹೇಳಿ. ಇದು ಸಾಲಿನ ಮೊದಲನೆ ಮಗುವಿನಿಂದ ಆರಂಭಗೊಂಡು ಸಾಲಿನ ಕೊನೆಯಲ್ಲಿರುವ ಮಗು ಪದಗಳನ್ನು ಕೇಳಿಸಿಕೊಳ್ಳುವತನಕ ನಡೆಯಬೇಕು.

ಮೊದಲನೆ ಸಾಲಿನ ಕೊನೆಯಲ್ಲಿರುವ ಮಗುವಿಗೆ ಮುಂದೆ ಬಂದು ತಾನು ಕೇಳಿದ ವಾಕ್ಯವನ್ನು ಗಟ್ಟಿಯಾಗಿ ಹೇಳಬೇಕೆಂದು ಹೇಳಿ. ಮೊದಲನೆ ಸಾಲಿನಲ್ಲಿರುವ ಉಳಿದೆಲ್ಲ ಮಕ್ಕಳಿಗೆ, ಅದು ಸರಿಯಾಗಿದೆಯೇ? ಎಂದು ಕೇಳಿ. ಅದು ಸರಿಯಾಗಿದ್ದರೆ, ಆ ತಂಡಕ್ಕೆ ಒಂದು ಅಂಕೆಯನ್ನು ಕೊಡಿ, ಅದು ಸರಿಯಾಗಿಲ್ಲದಿದ್ದರೆ, ಆ ತಂಡಕ್ಕೆ ಅಂಕೆಯನ್ನು ಕೊಡಬೇಡಿ. ಮಕ್ಕಳಿಗೆಲ್ಲ ಸರಿಯಾದ ಪದಗಳನ್ನು ತಿಳಿಸಿ.

# ಪಾಠ 16

ಎರಡನೆ ಸಾಲಿನ ಕೊನೆಯಲ್ಲಿರುವ ಮಗುವಿಗೆ ಮುಂದೆ ಬಂದು ತಾನು ಕೇಳಿದ ವಾಕ್ಯವನ್ನು ಗಟ್ಟಿಯಾಗಿ ಹೇಳಬೇಕೆಂದು ಹೇಳಿ. ಎರಡನೆ ಸಾಲಿನಲ್ಲಿರುವ ಉಳಿದೆಲ್ಲ ಮಕ್ಕಳಿಗೆ, ಅದು ಸರಿಯಾಗಿದೆಯೇ? ಎಂದು ಕೇಳಿ. ಅದು ಸರಿಯಾಗಿದ್ದರೆ, ಆ ತಂಡಕ್ಕೆ ಒಂದು ಅಂಕೆಯನ್ನು ಕೊಡಿ, ಅದು ಸರಿಯಾಗಿಲ್ಲದಿದ್ದರೆ, ಆ ತಂಡಕ್ಕೆ ಅಂಕೆಯನ್ನು ಕೊಡಬೇಡಿ. ಮಕ್ಕಳಿಗೆಲ್ಲ ಸರಿಯಾದ ಪದಗಳನ್ನು ತಿಳಿಸಿ.

ಮೂರನೆ ಸಾಲಿನ ಕೊನೆಯಲ್ಲಿರುವ ಮಗುವಿಗೆ ಮುಂದೆ ಬಂದು ತಾನು ಕೇಳಿದ ವಾಕ್ಯವನ್ನು ಗಟ್ಟಿಯಾಗಿ ಹೇಳಬೇಕೆಂದು ಹೇಳಿ. ಮೂರನೆ ಸಾಲಿನಲ್ಲಿರುವ ಉಳಿದೆಲ್ಲ ಮಕ್ಕಳಿಗೆ, ಅದು ಸರಿಯಾಗಿದೆಯೇ? ಎಂದು ಕೇಳಿ. ಅದು ಸರಿಯಾಗಿದ್ದರೆ, ಆ ತಂಡಕ್ಕೆ ಒಂದು ಅಂಕೆಯನ್ನು ಕೊಡಿ, ಅದು ಸರಿಯಾಗಿಲ್ಲದಿದ್ದರೆ, ಆ ತಂಡಕ್ಕೆ ಅಂಕೆಯನ್ನು ಕೊಡಬೇಡಿ. ಮಕ್ಕಳಿಗೆಲ್ಲ ಸರಿಯಾದ ಪದಗಳನ್ನು ತಿಳಿಸಿ.

ಮೊದಲನೆ ಸಾಲಿನಲ್ಲಿರುವ ಮಕ್ಕಳಿಗೆಲ್ಲ ಒಟ್ಟಿಗೆ ಹೀಗೆ ಹೇಳಲು ತಿಳಿಸಿ: 'ನಾನೇ ಜೀವಿಸುವಾತನು.'

ಯೇಸು ನನ್ನನ್ನು ಸದಾಕಾಲ ಮತ್ತು ಎಂದೆಂದಿಗೂ ಕಾಪಾಡಿದನು!

ಎರಡನೆ ಸಾಲಿನಲ್ಲಿರುವ ಮಕ್ಕಳಿಗೆಲ್ಲ ಒಟ್ಟಿಗೆ ಹೀಗೆ ಹೇಳಲು ತಿಳಿಸಿ: 'ನಾನು ಸತ್ತೆನು, ಆದರೆ ಇಗೋ ನೋಡು, ನಾನು ಯುಗಯುಗಾಂತರಗಳಲ್ಲಿಯೂ ಜೀವಿಸುವವನಾಗಿದ್ದೇನೆ.'

ಮೂರನೆ ಸಾಲಿನಲ್ಲಿರುವ ಮಕ್ಕಳಿಗೆಲ್ಲ ಒಟ್ಟಿಗೆ ಹೀಗೆ ಹೇಳಲು ತಿಳಿಸಿ: 'ಮರಣದ ಮತ್ತು ಪಾತಾಳದ ಬೀಗದ ಕೈಗಳು ನನ್ನಲ್ಲಿವೆ.'

## ಅನ್ವಯಿಸುಕೊಳ್ಳುವಿಕೆ

***ಯೇಸು ಸದಾಕಾಲ ಮತ್ತು ಎಂದೆಂದಿಗೂ ಜೀವಿಸುತ್ತಾನೆ! ಎಂದು ಉಪದೇಶಿಸುವ ಅನ್ವಯಿಸುಕೊಳ್ಳುವಿಕೆಯನ್ನು ಬಳಸಿ***

ಯೇಸು ಸದಾಕಾಲ ಮತ್ತು ಎಂದೆಂದಿಗೂ ಜೀವಿಸುತ್ತಾನೆ ಅಂದರೆ ಈ ದಿನ ನಾವು ಸದಾಕಾಲ ಮತ್ತು ಎಂದೆಂದಿಗೂ ಕಾಪಾಡಲ್ಪಟ್ಟವರಾಗಿದ್ದೇವೆ ಎಂದರ್ಥ. ಯೇಸು ಬೇಗನೆ ಬರುತ್ತಾನೆ ಮತ್ತು ನಾವು ಸದಾಕಾಲ ಮತ್ತು ಎಂದೆಂದಿಗೂ ಆತನೊಡನೆ ಜೀವಿಸುತ್ತೇವೆ ಎಂದು ತಿಳಿದವರಾಗಿ ನಾವು ಜೀವಿಸಬಹುದು. ಯೇಸು ಪ್ರತಿಯೊಂದನ್ನು ಹೊಸದನ್ನಾಗಿ ಮಾಡಿದ್ದಾನೆ. ಮರಣವಿಲ್ಲ. ಕಣ್ಣೀರಿಲ್ಲ, ದುಃಖವಿಲ್ಲ. ನೋವಿಲ್ಲ. ಹಲ್ಲೆಲೂಯ!

**ಪ್ರಾರ್ಥನೆ:** ಮಕ್ಕಳಲ್ಲಿ ಒಬ್ಬರಿಗೆ ಪ್ರಾರ್ಥಿಸಲು ಹೇಳಿ.

**ಬಹುಮಾನ:** ಪ್ರತಿಯೊಂದು ಮಗುವಿಗೆ ಅವರ ಸ್ವಂತಕ್ಕೆ *ಶುಭವಾರ್ತೆ ಕಥಾಪುಸ್ತಕ*–ಆರನೆ ಪ್ರತಿಯನ್ನು ಕೊಡಿ. ಪ್ರತಿಯೊಂದು ಮಗುವಿಗೆ ಅವರ ಸ್ವಂತ *ಶುಭವಾರ್ತೆ ಕಥಾಪುಸ್ತಕ*–ಆರನ್ನು ಓದಲು ಸಹಾಯಮಾಡಿ.

# ಪಾಠದ ಯೋಜನೆ



ಬೈಬಲಿನ ಕಥೆಗಳಿಂದ ನಿಮ್ಮದೇ ಆದ ಪಾಠಗಳನ್ನು ಸಿದ್ಧಪಡಿಸಿ.

ಪ್ರತಿಯೊಂದು ಪಾಠಕ್ಕೆ ನೀವು ಎಷ್ಟು ಸೇರಿಸಬಹುದೆಂಬುದು ಮಕ್ಕಳೊಡನೆ ನಿಮಗೆ ಎಷ್ಟು ಸಮಯವಿದೆ ಎಂಬುದನ್ನು ಅವಲಂಭಿಸಿದೆ. ನೀವು ಆರಿಸಿಕೊಂಡ ಒಂದು ಉಪದೇಶದ ಅಂಶವನ್ನು ಉಪದೇಶಿಸುವ ಒಂದು ಕಥೆಯನ್ನು, ಒಂದು ಅಭಿನಯಾತ್ಮಕ ಹಾಡನ್ನು, ಒಂದು ಅನ್ವಯಿಸುಕೊಳ್ಳುವಿಕೆಯನ್ನು ಕೊನೆಪಕ್ಷ ಪ್ರತಿಯೊಂದು ಪಾಠಕ್ಕೆ ಸೇರಿಸಬೇಕು.

**ಹೆಜ್ಜೆ 1:** ನೀವು ಸೇವೆ ಮಾಡುವ ಮಕ್ಕಳಿಗಾಗಿ ಪ್ರಾರ್ಥಿಸಿ. ದೇವರಿಂದ ಸ್ವೀಕರಿಸಿಕೊಳ್ಳಲು ಅವರ ಹೃದಯಗಳನ್ನು ಮತ್ತು ನಿಮ್ಮ ಹೃದಯವನ್ನು ಸಿದ್ಧಪಡಿಸುವಂತೆ ದೇವರಲ್ಲಿ ಪ್ರಾರ್ಥಿಸಿ. ಪ್ರತಿಯೊಂದು ಪಾಠಕ್ಕೆ ಯಾವ ಬೈಬಲ್ ಕಥೆಯನ್ನು ಉಪಯೋಗಿಸಬೇಕೆಂದು ದೇವರು ನಿಮಗೆ ಮಾರ್ಗದರ್ಶನ ಮಾಡುವಂತೆ ದೇವರಲ್ಲಿ ಪ್ರಾರ್ಥಿಸಿ.

**ಹೆಜ್ಜೆ 2:** ಬೈಬಲ್ ಕಥೆಯನ್ನು ಜ್ಞಾಪಕದಲ್ಲಿಟ್ಟುಕೊಳ್ಳಲು ಎಷ್ಟುಸಲ ಬೇಕೋ ಅಷ್ಟು ಸಲ ಓದಿ.

**ಹೆಜ್ಜೆ 3:** ಮಕ್ಕಳಿಗೆ ಕುಷಿಯಾಗುವ ರೀತಿಯಲ್ಲಿ ಸರಳವಾಗಿ ಮತ್ತು ಹಾಸ್ಯಮಯವಾಗಿ ಕಥೆಯನ್ನು ಮತ್ತೆ ಹೇಳಲು ಅಭ್ಯಾಸ ಮಾಡಿ.

**ಹೆಜ್ಜೆ 4:** ನೀವು ಆರಿಸಿಕೊಂಡ ಬೈಬಲ್ ಕಥೆಯ ಮೂಲಕ ಯಾವ ಒಂದು ಉಪದೇಶದ ಅಂಶವನ್ನು ಉಪದೇಶಿಸಬೇಕೆಂದು ನಿರ್ಧರಿಸಿ.

**ಹೆಜ್ಜೆ 5:** ನೀವು ಕಥೆಯನ್ನು ಹೇಗೆ ಹೇಳಬೇಕೆಂದು ಮತ್ತು ಕಥೆಯಲ್ಲಿ ಮಕ್ಕಳು ಹೇಗೆ ಭಾಗವಹಿಸಬೇಕೆಂದು ಯೋಚಿಸಿ. ಉದಾಹರಣೆ: ನಾಟಕದಂತೆ ಅಭಿನಯಿಸುತ್ತಾ ಕಥೆಯನ್ನು ಹೇಳಿ, ಅಥವಾ ಚಿತ್ರಿಸಿ ಕಥೆ ಹೇಳಿ, ಅಥವಾ ಮಕ್ಕಳು ಕಥೆಯ ನಾಟಕ ಮಾಡಲಿ, ಅಥವಾ ಮಕ್ಕಳು ಧ್ವನಿ ಮಾಡುವುದರಲ್ಲಿ ಭಾಗವಹಿಸಲಿ, ಅಥವಾ ಕಥೆಯ ಪದಗಳನ್ನು ಮತ್ತೆ ಮತ್ತೆ ಹೇಳುವುದರಲ್ಲಿ ಭಾಗವಹಿಸಲಿ.


**ಹೆಜ್ಜೆ 6:** ಕಥೆಯ ಒಂದು ಉಪದೇಶದ ಅಂಶವನ್ನು ಉಪದೇಶಿಸುವ ಒಂದು ಅಭಿನಯಾತ್ಮಕ ಹಾಡನ್ನು ಸೇರಿಸಿ. ಒಂದು ಉಪದೇಶದ ಅಂಶವನ್ನು ಉಪದೇಶಿಸುವ ಒಂದು ಅಭಿನಯಾತ್ಮಕ ಹಾಡು ನಿಮಗೆ ಗೊತ್ತಿಲ್ಲದಿದ್ದರೆ, ಸರಳವಾದ ಪದಗಳನ್ನು ಮತ್ತು ಅಭಿನಯಗಳನ್ನು ಬಳಸಿ, ಚೆನ್ನಾಗಿ ಗೊತ್ತಿರುವ ಲಯವನ್ನು ಕೊಡಿ.

**ಹೆಜ್ಜೆ 7:** ಈ ಒಂದು ಉಪದೇಶದ ಅಂಶವನ್ನು ತಿಳಿದುಕೊಳ್ಳುವುದರಿಂದ ಅದು ಹೇಗೆ ನಮ್ಮ ಜೀವಿತಕ್ಕೆ ಅನ್ವಯಿಸುತ್ತದೆ ಎಂಬುದನ್ನು ಯೋಚಿಸಿ.

**ಹೆಜ್ಜೆ 8:** ನಿಮಗೆ ಸಾಕಷ್ಟು ಸಮಯವಿದ್ದರೆ, ನಿಮಗೆ ಗೊತ್ತಿರುವ ರೀತಿಯಲ್ಲಿ ಅಥವಾ ಈ ಕೈಪಿಡಿಯಲ್ಲಿ ತೋರಿಸಿರುವ ಯಾವುದಾದರೂ ರೀತಿಯಲ್ಲಿ ದೃಷ್ಟಾಂತ ಪಾಠವನ್ನು ಮತ್ತು/ಅಥವಾ ಒಂದು ಬೈಬಲ್ ವಚನವನ್ನು ಕಂಠಪಾಠ ಮಾಡುವ ಆಟವನ್ನು ಸೇರಿಸಿ.

**ಹೆಜ್ಜೆ 9:** ಪಾಠ ಮಾಡಿ ಮತ್ತು ಮಕ್ಕಳ ಹಾಗೂ ನಿಮ್ಮ ಹೃದಯಗಳಲ್ಲಿ ಕಾರ್ಯ ಮಾಡಲು ದೇವರಿಗೆ ಬಿಟ್ಟುಕೊಡಿ. ಎಲ್ಲದಕ್ಕಿಂತ ಹೆಚ್ಚಾಗಿ ಮಕ್ಕಳೊಡನೆ ನೀವು ಕಳೆಯುವ ಸಮಯವು ನಿಮಗೂ ಮಕ್ಕಳಿಗೂ ಕುಷಿತರುವಂತೆ ನೋಡಿಕೊಳ್ಳಿ.

# ಪ್ರಾರ್ಥನೆ





**ಎಫೆಸದವರಿಗೆ 3:16-19** *‘ನೀವು ನಿಮ್ಮ ಆತ್ಮಗಳಲ್ಲಿ ಬಲವಾಗಿರಲು ಅಗತ್ಯವಾದ ಶಕ್ತಿಯನ್ನು ತನ್ನ ಮಹಿಮಾತಿಶಯದ ಪ್ರಕಾರ ಕೊಡಬೇಕೆಂದು ತಂದೆಯನ್ನು ಕೇಳಿಕೊಳ್ಳುತ್ತೇನೆ. ಆತನು ತನ್ನ ಆತ್ಮನ ಮೂಲಕವಾಗಿ ನಿಮಗೆ ಆ ಶಕ್ತಿಯನ್ನು ಕೊಡುತ್ತಾನೆ. ನಿಮ್ಮ ನಂಬಿಕೆಯ ಮೂಲಕ ಕ್ರಿಸ್ತನು ನಿಮ್ಮ ಹೃದಯಗಳಲ್ಲಿ ವಾಸಿಸಬೇಕೆಂದು ಪ್ರಾರ್ಥಿಸುತ್ತೇನೆ. ನಿಮ್ಮ ಜೀವಿತವು ಪ್ರೀತಿಯಲ್ಲಿ ಬಲವಾಗಿ ಬೇರೂರಿರಬೇಕೆಂದು ಮತ್ತು ಪ್ರೀತಿಯ ಮೇಲೆ ಕಟ್ಟಲ್ಪಟ್ಟಿರಬೇಕೆಂದು ಪ್ರಾರ್ಥಿಸುತ್ತೇನೆ.*

*ನೀವು ಮತ್ತು ದೇವರ ಪರಿಶುದ್ಧ ಜನರೆಲ್ಲರೂ ಕ್ರಿಸ್ತನ ಪ್ರೀತಿಯ ಮಹತ್ವವನ್ನು ಅರ್ಥಮಾಡಿಕೊಳ್ಳಲು ಬೇಕಾದ ಶಕ್ತಿಯನ್ನು ಹೊಂದಿದವರಾಗಿರಬೇಕೆಂದು ಪ್ರಾರ್ಥಿಸುತ್ತೇನೆ. ಕ್ರಿಸ್ತನ ಪ್ರೀತಿಯ ಉದ್ದಗಲಗಳನ್ನು ಮತ್ತು ಆಳ ಎತ್ತರಗಳನ್ನು ನೀವು ಅರ್ಥಮಾಡಿಕೊಳ್ಳಲೆಂದು ಪ್ರಾರ್ಥಿಸುತ್ತೇನೆ. ಕ್ರಿಸ್ತನ ಪ್ರೀತಿಯನ್ನು ಮನುಷ್ಯನು ಗ್ರಹಿಸಿಕೊಳ್ಳಲು ಸಾಧ್ಯವಿಲ್ಲ. ಆದರೆ ಆ ಪ್ರೀತಿಯನ್ನು ನೀವು ತಿಳಿದುಕೊಳ್ಳಶಕ್ತರಾಗಲೆಂದು ಪ್ರಾರ್ಥಿಸುತ್ತೇನೆ. ಆಗ ನೀವು ದೇವರ ಸಂಪೂರ್ಣತೆಯಿಂದ ತುಂಬಿದವರಾಗಲು ಸಾಧ್ಯವಾಗುತ್ತದೆ.’*

